ಲಂಕೇಶ್


ಏಪ್ರಿಲ್ 22, 2009 ರೂ. 12/-



ಹಾರ್ನಳ್ಳಿ ಸಾವಿನಲ್ಲೂ ಡೀಲು!



ಬೆಂಗಳೂರು ಉತ್ತರ
ಬೆಂಗಳೂರ್ ಗೌಡ V/s ಚಿಕ್ಕಮಗಳೂರು ಗೌಡ



ದಾವಣಗೆರೆ
ಮಲ್ಲಿಕಾರ್ಜುನ್ ನಾಗಾಲೋಟ



ಬೆಂಗಳೂರು ಸೆಂಟ್ರಲ್
ನಾನ್‌ಸ್ಟಾಪ್ ಜಮೀರ್



ಚಿತ್ರದುರ್ಗ
ಅಚ್ಚರಿ ಅಭ್ಯರ್ಥಿ ಶಶಿಶೇಖರ ನಾಯ್ಕ್



ಬೆಂಗಳೂರು ದಕ್ಷಿಣ
ಆತಂಕದಲ್ಲಿ ಅನಂತು



ಚಾಮರಾಜನಗರ
ಗೆಲುವಿನತ್ತ ಧ್ರುವನಾರಾಯಣ್



ಧಾರವಾಡ
ಜೋಶಿ ಸೋಲಿನ ಕ್ಷಣಗಣನೆ



ಚಿಕ್ಕೋಡಿ
ಕೂಡಾವಳಿ ಪಾಲಿಟಿಕ್ಸ್



ಬೆಳಗಾವಿ
ಅಂಗಡಿ ಸೋಲಿಗೆ ಲಿಂಗಾಯತರ ಫತ್ವಾ



ಬಳ್ಳಾರಿ
ಯಾರೀ ಶಾಂತಾ?



ಶಿವಮೊಗ್ಗ
ಬಂಗಾರಿ-ಗೌಡ ದೋಸ್ತಿ



ತುಮಕೂರು
ಸೋತರೂ ಗೆಲ್ಲುವ ಗೌರಿಶಂಕರ

ರಂಧಾಮನ ಸಂಹಾರ



ಭಾರತೀಯ ಪ್ರಜಾತಂತ್ರ: ಜನರಿಂದ ಆಯ್ಕೆಯಾಗದಿದ್ದರೂ ಸರ್ಕಾರ ರಚಿಸುವ ಕುತಂತ್ರ

ಚಾರ್ವಾಕ

ಶಿವಸುಂದರ್

ಅಬ್ರಹಾಂ ಲಿಂಕನ್ ಪ್ರಕಾರ ಒಂದು ಪ್ರಜಾತಂತ್ರದ ನಿಜವಾದ ಲಕ್ಷಣವೆಂದರೆ ಆಳುವ ಸರ್ಕಾರಗಳನ್ನು ಬಹುಸಂಖ್ಯಾತ ಜನರು ಆಯ್ಕೆಮಾಡಬೇಕಲ್ಲವೇ? 15ನೇ ಲೋಕಸಭೆಗೆ ಚುನಾವಣೆ ನಡೆಯುವ ಈ ಹೊತ್ತಿನಲ್ಲಾದರೂ 1952ರಿಂದ ಈ ದೇಶವನ್ನು ಆಳಿದ 15 ಸರ್ಕಾರಗಳು ನಿಜಕ್ಕೂ ಬಹುಸಂಖ್ಯಾತ ಭಾರತೀಯರಿಂದ ಆಯ್ಕೆಯಾಗಿದ್ದವೇ ಎಂದು ವಿಶ್ಲೇಷಣೆ ಮಾಡಬೇಕಲ್ಲವೇ?

1999ರಲ್ಲಿ ಬಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಅಧಿಕಾರದಲ್ಲಿದ್ದಾಗ ಈ ದೇಶದ ಸಂವಿಧಾನಕ್ಕೆ ಕರಸೇವೆ ಮಾಡಲು ನಿವೃತ್ತ ಮುಖ್ಯ ನ್ಯಾಯಾಧೀಶ ವೆಂಕಟಾಚಲಯ್ಯನವರ ನೇತೃತ್ವದಲ್ಲಿ ಒಂದು 'ಸಂವಿಧಾನ ಸುಧಾರಣಾ ಆಯೋಗ'ವನ್ನು ನೇಮಕ ಮಾಡಿದ್ದು ನೆನಪಿನಲ್ಲಿರಬೇಕಲ್ಲವೇ? ಆ ಆಯೋಗ ತನ್ನನ್ನು ನೇಮಕ ಮಾಡಿದ್ದ ಸರ್ಕಾರ ಕೇಳದಿದ್ದರೂ 'ಆಳುವ ಸರ್ಕಾರಗಳು ಬಹುಮತ ಪಡೆದ ಸರ್ಕಾರವೇ?' ಎಂಬ ಪ್ರಶ್ನೆ ಹಾಕಿಕೊಂಡಿತ್ತು. ಆದರೆ ಅವರು ಕಂಡುಕೊಂಡ ಉತ್ತರ ಅವರಿಗೇ ಆಶ್ಚರ್ಯ ತರುವಂತಿತ್ತು. ಆಯೋಗದ ಅಧ್ಯಯನದ ಪ್ರಕಾರ ಆವರೆಗೆ (2000) ಅಧಿಕಾರ ಅನುಭವಿಸಿದ (ಆಗ ಅಧಿಕಾರದಲ್ಲಿದ್ದ ಬಜೆಪಿ ನೇತೃತ್ವದ ಎನ್‌ಡಿಎಯೂ ಸೇರಿದಂತೆ) ಯಾವ ಪಕ್ಷಗಳು ಚಲಾಯಿಸಿದ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದುಕೊಂಡಿರಲಿಲ್ಲ. ಆದರೂ ನಮ್ಮ ಸಂವಿಧಾನ ಸಭೆ ಅಳವಡಿಸಿದ **First-Past-The-Post (FPTP)** ಪದ್ಧತಿಯ-ಅಂದರೆ ಚಲಾಯಿಸಿದ ಮತಗಳಲ್ಲಿ ಯಾರು ಹೆಚ್ಚು ಮತ ಪಡೆಯುತ್ತಾರೋ ಅವರು ವಿಜೇತರು ಎಂಬ ಪದ್ಧತಿಯ- ಪ್ರಕಾರ ಚಲಾಯಿಸಿದ ಮತಗಳಲ್ಲಿ ಅತ್ಯಧಿಕ ಮತ ಪಡೆದವರೇ ವಿಜೇತರಾಗುತ್ತಾ ಬಂದರು. ಅಂದರೆ ಒಂದು ಕ್ಷೇತ್ರದಲ್ಲಿ ಬಹುಮುಖೀ ಸ್ಪರ್ಧೆ ಇದ್ದು ಐದಾರು ಸಮಬಲರು ಸ್ಪರ್ಧಿಸಿದ್ದರೆ ಗೆದ್ದ ಅಭ್ಯರ್ಥಿಗೆ ಶೇ.20 ಮತ ಬಂದರೂ ಅರ್ಥಾತ್ ಶೇ.80 ಜನ ತಿರಸ್ಕರಿಸಿದರೂ ಗೆದ್ದುಬರುವ ಅವಕಾಶವನ್ನು ನಮ್ಮ ಪ್ರಜಾತಂತ್ರ ಕಲ್ಪಿಸಿಕೊಟ್ಟಿತು.

ಕಳೆದ ಅರವತ್ತು ವರ್ಷಗಳ ಭಾರತೀಯ ಪ್ರಜಾತಂತ್ರದ ಅನುಭವವು ಇದು ಹೇಗೆ ಬಹುಸಂಖ್ಯಾತರ ಒಟ್ಟು ನಿಲುವಿಗೆ ವಿರುದ್ಧವಾಗಿ ವರ್ತಿಸುತ್ತಾ ಬಂದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದಲೇ ಆ ಆಯೋಗವು ತಾನು ನೀಡಿದ ಅಂತಿಮ ಶಿಫಾರಸ್ಸುಗಳಲ್ಲಿ ಕನಿಷ್ಠ ಮೊದಲೆರಡು ಅಭ್ಯರ್ಥಿಗಳ ನಡುವೆಯಾದರೂ ಮತ್ತೊಮ್ಮೆ ಸ್ಪರ್ಧೆ ಏರ್ಪಡಿಸಬೇಕೆಂದು ಸಲಹೆ ಮಾಡಿತ್ತು. ಆ ಆತ್ಮಹತ್ಯಾಕಾರಿ ಸಲಹೆಯನ್ನು ಆಳುವ ಪಕ್ಷವಾಗಲಿ, ವಿರೋಧ ಪಕ್ಷವಾಗಲಿ ಒಪ್ಪಲಿಲ್ಲ. ಅದಕ್ಕೆ ಈ ಸಲಹೆಯ ಬಗ್ಗೆ ರಾಷ್ಟ್ರೀಯ ಚರ್ಚೆಯಿರಲಿ, ಪ್ರಚಾರವೂ ನಡೆಯಲಿಲ್ಲ!

ಈವರೆಗೆ ನಮ್ಮನ್ನಾಳಿದ ಯಾವ ಸರ್ಕಾರಗಳು ಬಹುಮತ ಪಡೆದ ಸರ್ಕಾರವಲ್ಲ ಅನ್ನುವುದಕ್ಕೆ ಕಳೆದ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳು ಪಡೆದ ಮತಗಳನ್ನು ಮತ್ತು ಒಟ್ಟಾರೆ ಚಲಾಯಿತ ಮತಗಳನ್ನು ಹೋಲಿಸಿ ನೋಡಿದರೆ ಅರ್ಥವಾಗುತ್ತದೆ. ಈ ಬಗ್ಗೆ ಚುನಾವಣಾ ಆಯೋಗವೇ ಗಾಬರಿಗೊಳಿಸುವಂತಹ ಅಂಕಿಅಂಶಗಳನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ ಗೆದ್ದ ಅಭ್ಯರ್ಥಿಗಳಲ್ಲಿ ಶೇ.70ಕ್ಕೂ ಹೆಚ್ಚು ಅಭ್ಯರ್ಥಿಗಳು ಚಲಾಯಿಸಿದ ಮತಗಳಲ್ಲಿ ಶೇ.33ಕ್ಕಿಂತ ಕಡಿಮೆ ಮತಗಳನ್ನು ಪಡೆದಿದ್ದರು. ಶೇ.5ರಷ್ಟು ಅಭ್ಯರ್ಥಿಗಳು ಮಾತ್ರ ಚಲಾವಣೆಗೊಂಡ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದಿದ್ದರು.



ಆದರೆ ಶೇ.50ಕ್ಕಿಂತ ಹೆಚ್ಚು ಮತ ಪಡೆದ ಈ ಶೇ.5ರಷ್ಟು ಅಭ್ಯರ್ಥಿಗಳನ್ನಾದರೂ ನಿಜವಾದ ಜನಪ್ರತಿನಿಧಿಗಳೆಂದು ಹೇಳಲು ಸಾಧ್ಯವೇ? ಕಷ್ಟ. ಏಕೆಂದರೆ ಒಟ್ಟಾರೆ ಮತದಾರರಲ್ಲಿ ಓಟೇ ಹಾಕದ ಮತದಾರನ ಇಂಗಿತವೇನು? ಆ ಮತದಾರರು ಗೆದ್ದ ಅಭ್ಯರ್ಥಿಯೊಂದಿಗೆ ಎಲ್ಲಾ ಅಭ್ಯರ್ಥಿಗಳನ್ನು ತಿರಸ್ಕರಿಸಿದ್ದಾರೆಂದು ತಾನೇ ಅರ್ಥ? ಉದಾಹರಣೆಗೆ ಈವರೆಗೆ ಲೋಕಸಭಾ ಚುನಾವಣೆಗಳಲ್ಲಿ ಓಟು ಹಾಕಿರುವವರ ಪ್ರಮಾಣ ಶೇ.65ನ್ನು ಎಂದಿಗೂ ದಾಟಿಲ್ಲ. ಈವರೆಗೆ ಅತಿ ಹೆಚ್ಚು ಮತದಾನ ದಾಖಲಾಗಿರುವುದು 1985ರಲ್ಲಿ ಇಂದಿರಾ ಗಾಂಧಿ ಹತ್ಯೆ ನಡೆದ ನಂತರ ನಡೆದ ಎಂಟನೇ ಲೋಕಸಭಾ ಚುನಾವಣೆಯಲ್ಲಿ. ಆಗ 64.1 ರಷ್ಟು ಮತದಾನ ದಾಖಲಾಗಿತ್ತು. ಮತ್ತು ಅದೊಂದು ಲೋಕಸಭೆಯಲ್ಲಿ ಮಾತ್ರ ಗೆದ್ದ ಪಕ್ಷ (ಕಾಂಗ್ರೆಸ್) ಚಲಾವಣೆಗೊಂಡ ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಮತಗಳನ್ನು ಪಡೆದುಕೊಂಡಿತ್ತು. ಅದನ್ನು ಬಿಟ್ಟರೆ 1952ರಿಂದ ಈವರೆಗೆ ನಡೆದಿರುವ 14 ಲೋಕಸಭಾ ಚುನಾವಣೆಗಳಲ್ಲಿ ಹತ್ತು ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಶೇ.60ರ ಗಡಿ ದಾಟಲಿಲ್ಲ. ಅಂದರೆ ಸರಾಸರಿ ಶೇ.55ರಷ್ಟು ಮತದಾನವಾಗುತ್ತಿದೆಯೆಂದು ಭಾವಿಸಿದರೂ (ಕಳೆದ ಬಾರಿ ಶೇ.58.3ರಷ್ಟು ಮತದಾನವಾಗಿತ್ತು) ಶೇ.45 ರಷ್ಟು ಮತದಾರರು ಗೆದ್ದ ಅಭ್ಯರ್ಥಿಯನ್ನು ತಿರಸ್ಕರಿಸಿದ್ದಾರೆಂದರ್ಥ. ಅಂದರೆ ಚಲಾಯಿಸಿದ ಮತಗಳಲ್ಲಿ ಶೇ.90ರಷ್ಟು ಮತದಾನವನ್ನು ಪಡೆಯದ ಹೊರತೂ ಯಾವ ಗೆದ್ದ ಅಭ್ಯರ್ಥಿಯನ್ನು ಬಹುಸಂಖ್ಯಾತ ಜನರ ಪ್ರತಿನಿಧಿಯೆಂದು ಹೇಳಲು ಸಾಧ್ಯವೇ ಇಲ್ಲ. ಸಾಕ್ಷಾತ್ ನೆಹರೂರವರಿಂದ ಹಿಡಿದು ಈವರೆಗೆ ಯಾವ ಗೆದ್ದ ಅಭ್ಯರ್ಥಿಗೂ ಚಲಾಯಿಸಿದ ಮತಗಳಲ್ಲಿ ಶೇ.90ರಷ್ಟು ಮತದಾನವಾಗಿಲ್ಲ. ಈ ಮಾದರಿಯ ಚುನಾವಣಾ ಪ್ರಜಾತಂತ್ರದಲ್ಲಿ ನಮ್ಮನ್ನು ಆಳಿದವರು ಯಾರೂ ಬಹುಸಂಖ್ಯಾತ ಜನರ ಪ್ರತಿನಿಧಿಗಳಲ್ಲ ಎಂದಾಯಿತಲ್ಲವೇ?

ಈ ಅಂಕಿಅಂಶಗಳು ಏನನ್ನು ಹೇಳುತ್ತಿವೆ? ಭಾರತದ ಆಳುವ ಪ್ರಭುಗಳ ಬಗ್ಗೆ ಭಾರತೀಯ ಮತದಾರರಿಗೆ ಆಗಿರುವ ಭ್ರಮನಿರಸನವನ್ನಲ್ಲವೇ? ಆದರೂ ನಮ್ಮ ಸಂಸದೀಯ ಪ್ರಜಾತಂತ್ರವು ಬಹುಸಂಖ್ಯಾತರಿಂದ ತಿರಸ್ಕೃತಗೊಂಡ ಅಭ್ಯರ್ಥಿಯನ್ನೇ ವಿಜೇತನೆಂದು ಘೋಷಿಸಿ ಜನತೆಯ ಅಣಕ ಮಾಡುತ್ತದೆ. ಕೆಲವು ಅಪವಾದಗಳನ್ನು ಹೊರತುಪಡಿಸಿದಂತೆ, 1967ರಿಂದಾಚೆಗೆ ನಡೆದ ಚುನಾವಣೆಗಳಲ್ಲಿ ಯಾವ ಒಂದು ಪಕ್ಷಕ್ಕೂ ಬಹುಮತ ದೊರೆಯದಿರುವುದು ಏನನ್ನು ಸೂಚಿಸುತ್ತದೆ? ಇದರ ಮೂಲಕ ಜನತೆ ಈ ವ್ಯವಸ್ಥೆಯ ಬಗ್ಗೆ, ಚುನಾವಣೆಗೆ ನಿಂತಿರುವ ಪಕ್ಷಗಳ ಬಗ್ಗೆ ಭ್ರಮನಿರಸನಗೊಂಡಿರುವುದು ಅತ್ಯಂತ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

1985ರ ನಂತರ ಈವರೆಗೆ ನಡೆದಿರುವ ಯಾವ ಚುನಾವಣೆಗಳಲ್ಲೂ ಯಾವ ಒಂದು ಪಕ್ಷಕ್ಕೂ ಅಧಿಕಾರ ರಚಿಸುವಷ್ಟು ಸೀಟುಗಳು ಅಂದರೆ 272 ಸೀಟುಗಳು ದಕ್ಕಿಲ್ಲ. ಅಧಿಕಾರ ಹಿಡಿದ ಯಾವ ಮೈತ್ರಿಕೂಟಗಳು ಶೇ.50ಕ್ಕಿಂತ ಹೆಚ್ಚಿನ ಓಟು ಶೇರನ್ನು ಪಡೆದಿಲ್ಲ. 1991ರಲ್ಲಿ ರಾಜೀವ್ ಗಾಂಧಿ ಹತ್ಯೆಯಾದ ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೂ ಪಡೆದ ಸೀಟುಗಳು ಕೇವಲ 232. ಪ್ರಮುಖ ವಿರೋಧ ಪಕ್ಷವಾದ ಬಜೆಪಿ ಪಡೆದುಕೊಂಡದ್ದು 120 ಸೀಟುಗಳು. 1996ರಲ್ಲಿ ನಡೆದ 11ನೇ ಲೋಕಸಭಾ ಚುನಾವಣೆಯಲ್ಲಿ ಬಜೆಪಿಗೆ 161 ಸೀಟು ದಕ್ಕಿದರೆ ಕಾಂಗ್ರೆಸ್‌ಗೆ 140 ಸೀಟುಗಳು ದಕ್ಕಿದವು. 1998ರ 12ನೇ ಲೋಕಸಭೆಯಲ್ಲಿ ಚುನಾವಣೋತ್ತರ ಮೈತ್ರಿ ಮಾಡಿಕೊಂಡ ಬಜೆಪಿ ಕೂಟಕ್ಕೆ ಲಭಿಸಿದ್ದು ಕೇವಲ 265 ಸೀಟುಗಳು. ಅದು ಅಧಿಕಾರ ನಡೆಸಿದ್ದು ಹೊರಗಿನಿಂದ ಎಐಡಿಎಂಕೆ ನೀಡಿದ ಬೆಂಬಲದಿಂದ. ಅದು ಬೆಂಬಲ ವಾಪಸ್ ತೆಗೆದುಕೊಂಡ ನಂತರ ಸರ್ಕಾರ ಕುಸಿದು 1999ರಲ್ಲಿ 13ನೇ ಲೋಕಸಭೆ ಚುನಾವಣೆ ನಡೆಯಿತು. ಇದರಲ್ಲಿ ಬಜೆಪಿ ನೇತೃತ್ವದ ಎನ್‌ಡಿಎ ಕೂಟ ಅಧಿಕಾರಕ್ಕೆ ಬಂದಿತು. ಈ ಕೂಟ ಪಡೆದುಕೊಂಡ ಸೀಟುಗಳ ಸಂಖ್ಯೆ 298. ಅದರಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಜೆಪಿ ಪಡೆದುಕೊಂಡ ಸೀಟು ಕೇವಲ 182. ಇದು ಬಜೆಪಿ ಈವರೆಗೆ ಪಡೆದುಕೊಂಡಿರುವ ಅತಿ ಹೆಚ್ಚು ಸೀಟುಗಳು. ಕಾಂಗ್ರೆಸ್ ಪಕ್ಷ ಪಡೆದುಕೊಂಡಿದ್ದು ಕೇವಲ 114 ಸೀಟುಗಳು. 2004ರ 14ನೇ ಲೋಕಸಭೆಯಲ್ಲಿ ಅಧಿಕಾರ ರಚಿಸಿದ ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟ. ಈ ಚುನಾವಣೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಕಾಂಗ್ರೆಸ್ ಪಕ್ಷ ಪಡೆದುಕೊಂಡ ಸೀಟುಗಳ ಸಂಖ್ಯೆ ಕೇವಲ 145. ಪ್ರಮುಖ ವಿರೋಧ ಪಕ್ಷವಾದ ಬಜೆಪಿಗೆ ದೊರೆತದ್ದು ಕೇವಲ 138 ಸೀಟುಗಳು.

ಇದು ಈವರೆಗಿನ ಭಾರತದ ಚುನಾವಣಾ ಪ್ರಜಾತಂತ್ರದ ಕಥೆ. ಭಾರತೀಯ ಪ್ರಜಾತಂತ್ರಕ್ಕೆ 61 ವರ್ಷ ಕಳೆದ ನಂತರ ಯಾವ ಪಕ್ಷಕ್ಕೂ ಸ್ವತಂತ್ರವಾಗಿ ಅಧಿಕಾರ ರಚಿಸುವಷ್ಟು ಸೀಟುಗಳು ಸಿಕ್ಕುತ್ತಿಲ್ಲ. ಓಟುಗಳೂ ಸಿಕ್ಕುತ್ತಿಲ್ಲ. ಸ್ವತಂತ್ರವಾಗಿ ಅಧಿಕಾರ ರಚಿಸಲು 272 ಸೀಟುಗಳು ಬೇಕಿದ್ದು ಕಳೆದ ಮೂರು ನಾಲ್ಕು ಚುನಾವಣೆಗಳಿಂದ ಯಾವ ಒಂದು ಪಕ್ಷಕ್ಕೂ ಅದರ ಅರ್ಧದಷ್ಟೂ ಸೀಟುಗಳು ದಕ್ಕುತ್ತಿಲ್ಲ. ಅಷ್ಟು ಮಾತ್ರವಲ್ಲ ಕಳೆದ ಕೆಲವು ಚುನಾವಣೆಗಳಿಂದ ಯಾವ ಪಕ್ಷಕ್ಕೂ ಶೇ.40ರಷ್ಟು ಓಟು ಶೇರು ಸಿಗುತ್ತಿಲ್ಲ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಓಟು ಶೇರು ಶೇ.38ರಷ್ಟಿದ್ದರೆ ಬಜೆಪಿಯದ್ದು ಶೇ.30ರಷ್ಟು ಮಾತ್ರ. ಕರ್ನಾಟಕದ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಜೆಪಿ 110 ಸೀಟುಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಅಧಿಕಾರ ರಚಿಸಿದರೂ ಅದು ಪಡೆದುಕೊಂಡ ಓಟು ಶೇರು ಶೇ.33.9. ಆದರೆ ಕೇವಲ 80 ಸೀಟುಗಳನ್ನು ಪಡೆದುಕೊಂಡ ಕಾಂಗ್ರೆಸ್ ಪಕ್ಷ ಪಡೆದುಕೊಂಡ ಓಟು ಶೇರು ಶೇ.34.6 ಅಂದರೆ ಅಧಿಕಾರರೂಢ ಬಜೆಪಿಗಿಂತ 0.7ರಷ್ಟು ಜಾಸ್ತಿ. ಇದರ ಅರ್ಥ ಕರ್ನಾಟಕದ ಮತದಾರರಲ್ಲಿ ಅತಿ ಹೆಚ್ಚು ಜನ ಬಜೆಪಿಯ ಬದಲಿಗೆ ಕಾಂಗ್ರೆಸನ್ನೇ ಆಯ್ದುಕೊಂಡರೂ (ಇದಕ್ಕೆ ಜಾತ್ಯತೀತ ಜನತಾದಳದ ಓಟುಗಳನ್ನು ಸೇರಿಸಿದರೆ ಒಟ್ಟು ಶೇ.55ರಷ್ಟು) ಜನ ಕೋಮುವಾದಿಗಳನ್ನು ತಿರಸ್ಕರಿಸಿದರೂ ಬಜೆಪಿಯೇ ಅಧಿಕಾರಕ್ಕೆ ಬರುವಂತೆ ಮಾಡಿರುವುದು ನಮ್ಮ ಚುನಾವಣಾ ಪದ್ಧತಿಗಳು.

ಕಳೆದ ಕೆಲವು ಚುನಾವಣೆಗಳಿಂದ ಕಾಂಗ್ರೆಸ್ ಸುತ್ತ ಹತ್ತಾರು ಪಕ್ಷಗಳು ಮತ್ತು ಬಜೆಪಿ ಸುತ್ತಾ ಹತ್ತಾರು ಕೂಡಿಕೊಂಡು ಕೂಟ ರಚಿಸಿಕೊಂಡು ಯುಪಿಎ, ಎನ್‌ಡಿಎ ಎಂದು ಅಧಿಕಾರ ಹಿಡಿಯುತ್ತಿದ್ದವು. ಈ ಬಾರಿ ಜನ ಅದನ್ನೂ ತಿರಸ್ಕರಿಸುತ್ತಿರುವಂತೆ ಕಾಣುತ್ತಿದೆ. ಈವರೆಗೆ ನಡೆದಿರುವ ಚುನಾವಣಾ ಪೂರ್ವ ಸಮೀಕ್ಷೆಗಳು ಯಾವುವೂ ಒಂದು ಪಕ್ಷವಿರಲಿ ಒಂದು ಕೂಟವೂ ಅಧಿಕಾರಕ್ಕೆ ಬರುವುದು ಕಷ್ಟವೆಂದು ಸಾರುತ್ತಿವೆ. CNN-IBN, CSDS ನವರು ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎ ಕೂಟಕ್ಕೆ 215-235 ಸೀಟುಗಳು, ಎನ್‌ಡಿಎ ಕೂಟಕ್ಕೆ 165-185 ಸೀಟುಗಳು ಮತ್ತು ಇತರರಿಗೆ 120-150 ಸೀಟುಗಳು ಬರಲಿವೆ. ಸ್ಟಾರ್ ನ್ಯೂಸ್ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎಗೆ 257, ಎನ್‌ಡಿಎಗೆ 185 ಮತ್ತು ಇತರರಿಗೆ 96 ಸೀಟುಗಳು ಬರಲಿವೆ. ಟೈಮ್ಸ್ ಆಫ್ ಇಂಡಿಯಾ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎಗೆ 201, ಎನ್‌ಡಿಎಗೆ 195 ಮತ್ತು ಇತರರಿಗೆ 147 ಸೀಟುಗಳು ಸಿಗಲಿವೆ. ಇತ್ತೀಚೆಗೆ ಇಂಡಿಯಾ ಟಿವಿ ನಡೆಸಿದ ಸಮೀಕ್ಷೆಯ ಪ್ರಕಾರ ಯುಪಿಎಗೆ 178, ಎನ್‌ಡಿಎಗೆ 187 ಮತ್ತು ಇತರರಿಗೆ 178 ಸೀಟುಗಳು ಬರಲಿವೆ. ಇವುಗಳ ನಡುವಿನ ವ್ಯತ್ಯಾಸವೇನೇ ಇರಲಿ, ಈಗ ಒಂದು ಪಕ್ಷಕ್ಕಿರಲಿ ಒಂದು ಕೂಟಕ್ಕೂ ಬಹುಮತ ಬರಲಿಕ್ಕಿಲ್ಲ. ಈಗ ಕೂಟಾಂತರ ಮೈತ್ರಿ ಆಗದ ಹೊರತು ಸರ್ಕಾರ ರಚನೆ ಸಾಧ್ಯವಿಲ್ಲ.

ಇದು ಭಾರತದ ಚುನಾವಣಾ ಪ್ರಜಾತಂತ್ರ ಎದುರಿಸುತ್ತಿರುವ ಹೊಸ ಬಿಕ್ಕಟ್ಟು. ವಿಶ್ವಾಸದ ಬಿಕ್ಕಟ್ಟು.

ಮತದಾನದಲ್ಲಿ, ಓಟು ಶೇರಿನಲ್ಲಿ, ಸೀಟುಗಳ ಸಂಖ್ಯೆಯಲ್ಲಿ ಎಲ್ಲದರಲ್ಲೂ ಭಾರತೀಯ ಮತದಾರ ಈ ವ್ಯವಸ್ಥೆಯ ಬಗ್ಗೆ, ಆಳುವವರ ಬಗ್ಗೆ ತನ್ನ ಸ್ಪಷ್ಟ ಅವಿಶ್ವಾಸ ಮತ್ತು ತಿರಸ್ಕಾರವನ್ನು ಸೂಚಿಸುತ್ತಿದ್ದಾನೆ/ಳೆ. ಆದರೂ ನಮ್ಮ ಚುನಾವಣಾ ಪದ್ಧತಿಯ ತಂತ್ರಗಳು ಪ್ರಜಾತಂತ್ರವನ್ನೇ ಸೋಲಿಸಿ ಸೋತವರನ್ನೇ ವಿಜೇತರನ್ನಾಗಿ ಆಯ್ಕೆ ಮಾಡಿ ಅಧಿಕಾರ ಕೊಡುತ್ತದೆ. ವ್ಯವಸ್ಥೆ ಬದಲಾಗದಿದ್ದರೂ ಹೋಗಲಿ, ಈ ಚುನಾವಣಾ ಪದ್ಧತಿಗಳಾದರೂ ಬದಲಾಗಬೇಕಲ್ಲವೇ? ■

No Comments

"ಮೊಯ್ಲಿಯವರು ಗೆಲ್ಲಲು ತುಂಬಾ ಕಷ್ಟಪಡಬೇಕು."

-ಜಾಲಪ್ಪ

"ಬಜೆಪಿ ಪಕ್ಷ ಅಧಿಕಾರಕ್ಕೆ ಬಂದ ನಂತರ ಸ್ವಿಸ್ ಬ್ಯಾಂಕಿನಲ್ಲಿರುವ ಭಾರತೀಯರ ಕಳ್ಳಹಣವನ್ನು ವಾಪಸ್ ತರಲು ಕ್ರಮ ತೆಗೆದುಕೊಳ್ಳದಿದ್ದರೆ ನಾನು ಬಜೆಪಿ ತೊರೆಯುತ್ತೇನೆ."

-ಮಹೇಶ್ ಜೇಠ್ಮಲಾನಿ, ಬಜೆಪಿ ಸ್ವಿಸ್ ಬ್ಯಾಂಕ್ ಕಾರ್ಯಪಡೆಯ ಮುಖ್ಯಸ್ಥ

"ಈಗಾಗಲೇ ಭಾರತೀಯ ನಿರ್ಮಿತ ಸ್ವದೇಶಿ ಮಿಸೈಲ್ ನಿರೋಧಕ ವ್ಯವಸ್ಥೆ ಅಂತಿಮ ಹಂತವನ್ನು ತಲುಪಿದ್ದರೂ ಅದೇ ಉದ್ದೇಶಕ್ಕಾಗಿ ಭಾರತವು ಇಸ್ರೇಲ್ ಜೊತೆ 7042 ಕೋಟಿ ರೂ.ಗಳ ವಾಯುರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದೆ."

-ಪತ್ರಿಕಾ ವರದಿ

"ಚುನಾವಣೆ ಘೋಷಣೆಯಾಗಿರುವುದರಿಂದ ಇನ್ನು ಮುಂದೆ ನಮ್ಮ ಧರ್ಮ ಜಾಗೃತಿ ಸಮ್ಮೇಳನಗಳನ್ನು ನಾವು ದೇವಸ್ಥಾನಗಳಲ್ಲಿ ನಡೆಸುತ್ತೇವೆ. ಇದಕ್ಕೆ ರಾಜ್ಯ ಸರ್ಕಾರ ನಮಗೆ ಸಂಪೂರ್ಣ ಬೆಂಬಲ ನೀಡುತ್ತದೆ."

-ಕೇಶವ್ ಹೆಗಡೆ, ವಿಶ್ವಹಿಂದೂ ಪರಿಷತ್ ಕಾರ್ಯವಾಹ

"ಹಿಂದಿ ಚಿತ್ರರಂಗದ ಕಾರ್ಪೊರೇಟೀಕರಣದಿಂದ ಅಮೆರಿಕದ ಸ್ಟುಡಿಯೋಗಳು ಭಾರತೀಯ ಚಿತ್ರನಿರ್ಮಾಣ ಕಂಪನಿಗಳನ್ನು ಕೊಂಡುಕೊಳ್ಳುವುದನ್ನು ಸುಲಭವಾಗುತ್ತದೆ, ಅಷ್ಟೆ."

-ಸುನಿಲ್ ದೋಷಿ, ನಿರ್ಮಾಪಕ

"ಕೋಮುವಾದ ವಿರುದ್ಧದ ಹೋರಾಟವಲ್ಲದೆ ರಾಷ್ಟ್ರ ರಾಜಕಾರಣದಲ್ಲಿ ಇನ್ನೂ ಸಾಕಷ್ಟಿದೆ ಎಂಬುದನ್ನು ಕಾಂಗ್ರೆಸ್ ಅರ್ಥಮಾಡಿಕೊಳ್ಳಬೇಕು."

- ಮುಲಾಯಂ ಸಿಂಗ್ ಯಾದವ್

"ತೃತೀಯ ರಂಗವೇ ದೆಹಲಿಯಲ್ಲಿ ಅಧಿಕಾರಕ್ಕೆ ಬರುತ್ತದೆ."

-ಪ್ರಕಾಶ್ ಕಾರಟ್

"ಎಂಪಿಗಳಾದ ಚಿತ್ರತಾರೆಗಳಲ್ಲಿ ಕಾಂಗ್ರೆಸ್‌ನ ಗೋವಿಂದ ಮತ್ತು ಬಜೆಪಿಯ ಧರ್ಮೇಂದ್ರ ಒಂದು ದಿನವೂ ಲೋಕಸಭೆಯ ಅಧಿವೇಶನಗಳಲ್ಲಿ ಭಾಗವಹಿಸಲಿಲ್ಲ."

-ಪತ್ರಿಕಾ ವರದಿ

"ಹೊಸದಾಗಿ ನೇಮಕಗೊಳ್ಳುವ ಸುಪ್ರೀಂಕೋರ್ಟ್ ನ್ಯಾಯಾಧೀಶರುಗಳಿಗೆ ಕೊಡಲು ಬಂಗಲೆಗಳಿಲ್ಲವಾದ್ದರಿಂದ ನೇಮಕಾತಿ ಸಾಧ್ಯವಾಗುತ್ತಿಲ್ಲ."

-ಪತ್ರಿಕಾ ವರದಿ

"ಚಂದ್ರಬಾಬು ನಾಯ್ಡು ಅವರನ್ನು ಮತ್ತೆ ಮುಖ್ಯಮಂತ್ರಿಯಾಗಿ ಕಾಣುವುದೇ ನಮ್ಮ ಗುರಿ."

-ಬರ್ಧನ್, ಸಿಪಿಐ ಕಾರ್ಯದರ್ಶಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ನನಗೆ ಪ್ರಧಾನ ಮಂತ್ರಿಯಾಗುವ ಯಾವುದೇ ಆಸೆಗಳಿಲ್ಲ."

- ದೇವೇಗೌಡ

"ನಾನು ರಾಜಕೀಯ ಲಾಭಕ್ಕಾಗಿ ಬಜೆಪಿ ಸೇರಲಿಲ್ಲ."

-ತಾರಾ

"ಚಾಕೊಲೇಟ್ ತಿಂದರೆ ಗಣಿತ ಸುಲಭವಾಗಿ ತಲೆಗೆ ಹತ್ತುತ್ತದೆ, ಟೀ ಕುಡಿದರೆ ಕ್ಯಾನ್ಸರ್ ಬರಲ್ಲ.."

-ಲಂಡನ್ ಪತ್ರಿಕೆಯೊಂದರ ವರದಿ

"ರಾಜ್ಯದ ಶೇ.77 ಮತದಾರರ ಬಳಿ ಫೋಟೋ ಐಡೆಂಟಿಟಿ ಕಾರ್ಡ್ ಇದೆ."

-ವಿದ್ಯಾಶಂಕರ್, ಮುಖ್ಯ ಚುನಾವಣಾ ಅಧಿಕಾರಿ

ಚಿಂತಕರ ಚಾವಡಿ



ಜನತೆಯ ಸಬಲೀಕರಣದಿಂದ ಮಾತ್ರ ದ್ವೇಷದ ರಾಜಕಾರಣವನ್ನು ಸೋಲಿಸಲು ಸಾಧ್ಯ!

"ಒಂದೆಡೆ ಆಕ್ರೋಶ, ದ್ವೇಷ, ಸೇಡುಗಳಂಥ ಭಾವನೆಗಳನ್ನು ಮಾನವ ಸಹಜ ಭಾವನೆಗಳೆಂದು ಪರಿಗಣಿಸುವ ನಾವು ಅನುಕಂಪ, ಸಹಾನುಭೂತಿಗಳನ್ನು ಮಾನವ ಸಹಜವೆಂದು ಪರಿಗಣಿಸುವುದಿಲ್ಲ. ಸಕಾರಾತ್ಮಕ ವಿಷಯಗಳನ್ನು ಕ್ಲೀಷೆಗಳೆಂದೂ, ನಕಾರಾತ್ಮಕ ವಿಷಯಗಳನ್ನು ಮಾನವ ಸಹಜವೆಂದು ನಾವೇಕೆ ಭಾವಿಸುತ್ತೇವೆ? ಜಾಗತೀಕರಣ, ಆರ್ಥಿಕ ಅಸಮಾನತೆಗಳು ವಿವಿಧ ಬಗೆಯ ಒಡಕುಗಳನ್ನು, ಹತಾಶೆಗಳನ್ನು ಹುಟ್ಟುಹಾಕುತ್ತವೆ. ಅಸಹಾಯಕತೆಗಳು, ಅದುಮಿಟ್ಟುಕೊಂಡಿರುವ ಆಕ್ರೋಶಗಳು ಮತ್ತು ವಂಚಿತರಾದೆವೆಂಬ ಭಾವನೆಗಳು ಹಿಂಸಾತ್ಮಕವಾಗಿ ಸ್ಫೋಟಗೊಳ್ಳುತ್ತವೆ. ಜನರು ಸಬಲರಾಗಿದ್ದಾಗ ಮಾತ್ರ ಅವರು ಕಡಿಮೆ ಹಿಂಸಾ ಪ್ರವೃತ್ತಿಯವರಾಗಿರುತ್ತಾರೆ."

- ನಂದಿತಾ ದಾಸ್, ನಟಿ, ನಿರ್ದೇಶಕಿ

ಕಡಿಯುವ ಪರಂಪರೆಯವನಿಂದ ಕಟ್ಟುವ ಮಾತು ಸಾಧ್ಯವೇ?



ಕಂಡಹಾಗೆ

ಗೌರಿ ಲಂಕೇಶ್

ಹದಿನೈದನೆ ಲೋಕಸಭೆಗೆ ಚುನಾವಣೆಗಳು ...ಯುತ್ತಿರುವ ಈ ಸಂದರ್ಭದಲ್ಲಿ ನಮ್ಮದು ಎಷ್ಟು ...ಪ್ರಭುತ್ವಾತ್ಮಕ ದೇಶ ಎಂಬುದರ ಬಗ್ಗೆ ಒಂದು ವರದಿ ...ಟಿಗೆ ಪ್ರಕಟಗೊಂಡಿದೆ.

ಎಕಾನಾಮಿಸ್ಟ್ ಇಂಟೆಲಿಜೆನ್ಸ್ ಯೂನಿಟ್ ಎಂಬ ...ತರರಾಷ್ಟ್ರೀಯ ಸಂಸ್ಥೆ 2008 ರಲ್ಲಿ ಅರವತ್ತು ...ನದಂಡಗಳನ್ನು ಇಟ್ಟುಕೊಂಡು ಜಗತ್ತಿನ ಎಲ್ಲಾ ...ಶಗಳಲ್ಲಿ ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ...ಮ ಸಂಶೋಧನೆ ನಡೆಸಿತು. ಆ ಸಂಶೋಧನೆಯ ...ರ ಜಗತ್ತಿನ 167 ದೇಶಗಳ ಪೈಕಿ ಅತಿ ದೊಡ್ಡ ...ಪ್ರಭುತ್ವ ಎಂಬ ಹೆಗ್ಗಳಿಕೆಯ ಭಾರತಕ್ಕೆ ದೊರೆತ ... 35 ನೇಯದು! ಅಂದರೆ ಭಾರತ ಒಂದು ...ಪಭರಿತ ಪ್ರಜಾಪ್ರಭುತ್ವ!!

ಈ ಸಂಶೋಧನೆ ಅವಲಂಬಿಸಿದ ಕೆಲ ಮಾನದಂಡ ... ಯಾವುದೆಂದರೆ ಚುನಾವಣಾ ಪ್ರಕ್ರಿಯೆ, ಬಹು ...ಸ್ಕೃತಿಕತೆ, ಮಾನವ ಹಕ್ಕುಗಳು, ಸರ್ಕಾರದ ...ರ್ಯವೈಖರಿ, ರಾಜಕಾರಣದಲ್ಲಿ ಪಾಲ್ಗೊಳ್ಳುವಿಕೆ ಮತ್ತು ...ಕೀಯ ಸಂಸ್ಕೃತಿಗಳು. ಒಟ್ಟು ಹತ್ತು ಅಂಕಗಳಲ್ಲಿ ... ಗಳಿಸಿದ ಭಾರತದ ವೈಫಲ್ಯತೆಗಳು "ಸರ್ಕಾರದಲ್ಲಿ ...ಷ್ಟಾಚಾರವಿರುವುದು ಮತ್ತು ಹೊಣೆಗಾರಿಕೆ ...ದಿರುವುದು" ಎಂದು ವರದಿ ಹೇಳಿದೆ.


ಅಂದಹಾಗೆ ಅದೇ ವರದಿಯು ಪಾಕಿಸ್ತಾನಕ್ಕೆ 108 ... ಸ್ಥಾನವನ್ನು (4.46 ಅಂಕಗಳು) ಮತ್ತು ...ಘಾನಿಸ್ತಾನಕ್ಕೆ 138 ನೇ ಸ್ಥಾನವನ್ನು (3.02 ಅಂಕಗಳು) ...ದೆ. ಎಲ್ಲರಿಗೆ ಗೊತ್ತಿರುವಂತೆ ಅಫಘಾನಿಸ್ಥಾನದ ...ೀದ್ ಕರ್ಜಾಯ್ ಸರ್ಕಾರವನ್ನು ಪ್ರೋತ್ಸಾಹಿಸಿ ...ನ್ನಡೆಸುತ್ತಿರುವುದು ಅಮೆರಿಕ. ಹಾಗಿದ್ದೂ (ಅಥವಾ ...ಕಾರಣಕ್ಕೇನೆ) ಆ ದೇಶ ಇವತ್ತು ಅಂತಹ ದುಃಸ್ಥಿತಿಯಲ್ಲಿದೆ. ... ಸೋಜಿಗದ ಸಂಗತಿ ಯಾವುದೆಂದರೆ ತಾನೇ ವಿಶ್ವದೆಲ್ಲೆಡೆ ...ಜಾಪ್ರಭುತ್ವದ ಹರಿಕಾರ ಎಂದು ಬೀಗುವ ಅಮೆರಿಕಾ ...ರಕ್ಕೆ ಆ ವರದಿ ನೀಡಿರುವ ಸ್ಥಾನ 18 ನೆಯದು! ...ಕ್ಕೆ ಮುಖ್ಯ ಕಾರಣ "ಭಯೋತ್ಪಾದನೆ ವಿರುದ್ಧದ ...ದ್ಧದ ನೆಪದಲ್ಲಿ ಪ್ರಜಾಸ್ವಾತಂತ್ರ್ಯಗಳನ್ನು ಕಡಿತಗೊಳಿಸಿ ...ದು" ಎಂದು ವರದಿ ಹೇಳಿದೆ.

ಕಳೆದ ಎರಡು ವಾರಗಳಿಂದ ಹಲವಾರು ಮಾಧ್ಯಮ ... "ಮತ ಚಲಾಯಿಸದೇ ಇರಬೇಡಿ" ಎಂಬಂತಹ ...ಆಂದೋಲನವನ್ನು ನಡೆಸುತ್ತಿದೆ. ಆದರೆ ಎಲ್ಲಿಯತನಕ ನಮ್ಮ ದೇಶದ ಚುನಾವಣಾ ಪ್ರಕ್ರಿಯೆ ಹಣಬಲ ಮತ್ತು ತೋಳ್ಬಲಗಳಿಂದ ಮುಕ್ತವಾಗುವುದಿಲ್ಲವೋ, ಎಲ್ಲಿಯತನಕ ನಿಜವಾದ ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲಿ ಸ್ಥಾಪನೆ ಆಗುವುದಿಲ್ಲವೊ ಅಲ್ಲಿಯತನಕ ಭಾರತ ಒಂದು ಪರಿಪೂರ್ಣ ಪ್ರಜಾಪ್ರಭುತ್ವ ಆಗುವುದೇ ಇಲ್ಲ.....

* * * *

ನರ್ಸ್ ರೇಣುಕಾಚಾರಿ ಮೊನ್ನೆ "ಹಿಂದೂತ್ವವಾದವನ್ನು ವಿರೋಧಿಸುವವರ ತಲೆ ಕಡಿಯುತ್ತೇವೆ" ಎಂದಿದ್ದಾನೆ. ಅಂತಹ ಮಾತು ಕೇಳಿ ಕೆಲವರಿಗೆ ಅಚ್ಚರಿಯಾಗಿದೆ. ಆದರೆ ನನ್ನಂತಹವರಿಗೆ ಕಿಂಚಿತ್ತೂ ಆಶ್ಚರ್ಯವಾಗಲಿಲ್ಲ. ಯಾಕೆಂದರೆ ರೇಣುಕಾಚಾರಿಯ ಹಿಂದೂತ್ವ ಸಿದ್ಧಾಂತ ಅಂದರೇನೇ ಹೊಡಿ, ಕಡಿ ಸಂಸ್ಕೃತಿ ಎಂಬುದು ಈಗ ಸಾಬೀತಾಗಿರುವ ಸಂಗತಿ.

ಮಹಾತ್ಮಾಗಾಂಧಿಯವರ ಕೊಲೆ, ಗೋಹತ್ಯೆ ನೆಪದಲ್ಲಿ



ದಲಿತರ ಕೊಲೆ, ಧರ್ಮದ ಹೆಸರಲ್ಲಿ ಮುಸಲ್ಮಾನರ ಮಾರಣಹೋಮ, ಸಂಸ್ಕೃತಿ ಹೆಸರಲ್ಲಿ ಶೂದ್ರರ ಶೋಷಣೆ, ಇತಿಹಾಸ 'ಸರಿಪಡಿಸುವಿಕೆ' ಹೆಸರಲ್ಲಿ ಬಾಬ್ರಿ ಮಸೀದಿಯ ಧ್ವಂಸ, ಮತಾಂತರ ತಡೆಯುವ ನೆಪದಲ್ಲಿ ಕ್ರಿಶ್ಚಿಯನ್ನರ ಮತ್ತು ಚರ್ಚ್‌ಗಳ ಮೇಲೆ ದಾಳಿ.... ಇದೆಲ್ಲದರ ಹಿಂದೆ ಇರುವುದು ರೇಣುಕಾಚಾರಿ, ಯಡಿಯೂರಪ್ಪ, ಅಧ್ವಾಣಿ ತರಹದ ರಕ್ತಪಿಪಾಸುಗಳ ಹಿಂದೂತ್ವ ಸಿದ್ಧಾಂತವೇ.

ಶೂದ್ರನಾದ ಶಂಭೂಕ ತಪಸ್ಸಿಗೆ ಕೂರುವಷ್ಟು ಉದ್ಧಟತನ ತೋರಿದನೆಂದು ರಾಮನಿಂದಲೇ ಆತನ ಕೊಲೆ, ಆದಿವಾಸಿ ಏಕಲವ್ಯ ತನ್ನ ಶಿಷ್ಯ ಅರ್ಜುನನನ್ನೇ ಮೀರಿಸುತ್ತಾನೆಂದು ಆತನ ಹೆಬ್ಬೆಟ್ಟನ್ನೇ ಕತ್ತರಿಸಿದ ಪುರೋಹಿತ ದ್ರೋಣಾಚಾರ್ಯ, ಖೈರ್ಲಾಂಜಿಯಲ್ಲಿ ದಲಿತ ತಾಯಿ ಮತ್ತು ಮಗಳ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಕಗ್ಗೊಲೆ, ಕಂಬಾಲಪಲ್ಲಿಯಲ್ಲಿ ದಲಿತ ಯುವಕರು ವಾಚ್ ತೊಟ್ಟರೆಂದು, ಬೈಕ್ ಓಡಿಸಿದರೆಂದು ಅವರೆಲ್ಲರ ಸಜೀವ ದಹನ.... ಮನುಸ್ಮೃತಿಯ ಇನ್ನೊಂದು ರೂಪವಾದ ಹಿಂದೂತ್ವವಾದದಿಂದಾಗಿ ಸಹಸ್ರಾರು ವರ್ಷಗಳಿಂದ ನಡೆದುಬಂದಿರುವ ಹಿಂಸಾಕಾಂಡ ಇದು.... ಅದನ್ನು ರೇಣುಕಾಚಾರಿ ತನ್ನ ಮಾತುಗಳಲ್ಲಿ ಹೇಳಿದ್ದಾನಷ್ಟೇ.... ಕಡಿಯುವ ಪರಂಪರೆಯಲ್ಲೇ ಬೆಳೆದು ಬಂದವನಿಂದ ಕಡಿಯುವ, ಕೆಡವುವ ಮಾತಲ್ಲದೆ ಕಟ್ಟುವ ಮಾತು ಬರಲು ಸಾಧ್ಯವೆ?

* * * *

ಚುನಾವಣೆಗಳ ಸುತ್ತ ಗಂಭೀರ ಚರ್ಚೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಒಂದು ಬ್ರೇಕ್ ನೀಡಿ, ನಗೆಯನ್ನು ಹುಟ್ಟಿಸುವ ಆದರೆ ಚಿಂತನೆಗೂ ಹಚ್ಚುವ ಒಂದು ಪುಟ್ಟ ಐಟಂ ಅನ್ನು ಇಲ್ಲಿ ನೀಡುತ್ತಿದ್ದೇನೆ. ಇದು ನಿಜವಾಗಲೂ ನಡೆದದ್ದೊ ಅಥವಾ ಕಾಲ್ಪನಿಕವಾದದ್ದೊ ಗೊತ್ತಿಲ್ಲ, ಆದರೂ ಸ್ವಾರಸ್ಯಕರವಾಗಿದೆ, ಓದಿ...

ಅಮೆರಿಕದ ಒಂದು ಸಣ್ಣ ಊರಿನಲ್ಲಿ ವ್ಯಕ್ತಿಯೊಬ್ಬ ಚರ್ಚ್ ಒಂದರ ಎದುರಿಗೆ ಒಂದು ಬಾರ್ ತೆರೆಯಲು ನಿರ್ಧರಿಸಿದ. ಆದರೆ ಆತನ ಈ ನಿರ್ಧಾರವನ್ನು ವಿರೋಧಿಸಿದ ಚರ್ಚ್ ಮತ್ತು ಅದರ ಅನುಯಾಯಿಗಳು ಆತನ ವಿರುದ್ಧ ಪ್ರಚಾರ ಸಮರವನ್ನೇ ಪ್ರಾರಂಭಿಸಿದರಲ್ಲದೆ ಆತನ ಬಾರ್ ಬಾಗಿಲು ತೆರೆಯದಂತೆ ಪ್ರತಿದಿನ ಸಾಮೂಹಿಕ ಪ್ರಾರ್ಥನೆಗಳನ್ನು ಆರಂಭಿಸಿದರು.

ಇದೆಲ್ಲದರ ಮಧ್ಯೆ ಬಾರ್ ನಿರ್ಮಾಣದ ಕೆಲಸ ಮುಂದುವರೆದು ಇನ್ನು ಕೆಲವೇ ದಿನಗಳಲ್ಲಿ ಅದು ಬಾಗಿಲು ತೆರೆಯುವುದಿತ್ತು. ಆಗ ಬಲವಾದ ಸಿಡಿಲು ಹೊಡೆದು ಬಾರ್ ಸಂಪೂರ್ಣವಾಗಿ ಭಸ್ಮಗೊಂಡಿತು. ಇದನ್ನು ಕಂಡು ಚರ್ಚಿನ ಅನುಯಾಯಿಗಳಿಗೆ ಸಹಜವಾಗಿಯೇ ಸಂತೋಷ ಮತ್ತು ನೆಮ್ಮದಿಯಾಯಿತು. ಆದರೆ ಅದು ಬಹಳ ದಿನ ಉಳಿಯಲಿಲ್ಲ.

ಏಕೆಂದರೆ ಬಾರ್ ತೆರೆಯಲು ನಿರ್ಧರಿಸಿದ್ದ ವ್ಯಕ್ತಿ ತನ್ನ ಬಾರ್ ನಾಶಗೊಂಡಿದ್ದಕ್ಕೆ ನೇರವಾಗಿ ಮತ್ತು ಪರೋಕ್ಷವಾಗಿ ಚರ್ಚ್ ಮತ್ತದರ ಅನುಯಾಯಿಗಳ ಸಾಮೂಹಿಕ ಪ್ರಾರ್ಥನೆಗಳೇ ಕಾರಣ ಎಂದೂ, ತನಗಾಗಿರುವ ಎರಡು ಮಿಲಿಯನ್ ಡಾಲರ್ ನಷ್ಟವನ್ನು ಚರ್ಚ್ ಮತ್ತದರ ಅನುಯಾಯಿಗಳೇ ಭರಿಸಬೇಕೆಂದು ಕೋರಿ ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದ.


ಆತನ ಆರೋಪಗಳನ್ನು ಬಲವಾಗಿ ನಿರಾಕರಿಸಿದ ಚರ್ಚಿನ ಜನರು ತಮ್ಮ ಪ್ರಾರ್ಥನೆಗಳಿಂದ ಆತನ ಬಾರ್ ನಾಶಗೊಳ್ಳಲಿಲ್ಲವೆಂದೂ, ಇಂತಹ ಸಾಮೂಹಿಕ ಪ್ರಾರ್ಥನೆಗಳು ನಿರುಪಯುಕ್ತ ಎಂದು ಖ್ಯಾತ ವಿಶ್ವವಿದ್ಯಾಲಯ ಹಾರ್ವರ್ಡ್‌ನ ಒಂದು ಸಂಶೋಧನೆಯೇ ದೃಢಪಡಿಸಿದೆ ಎಂದೂ ಅರ್ಜಿ ಸಲ್ಲಿಸಿದರು.

ಈ ಸವಾಲು ಮತ್ತು ಪಾಟಿ ಸವಾಲು ನ್ಯಾಯಾಧೀಶರ ಮುಂದೆ ಬಂದಾಗ ಅವರು ಎರಡೂ ಮನವಿ ಪತ್ರಗಳನ್ನು ಅವಲೋಕಿಸಿ ಹೀಗೆಂದರು:

"ಈ ಪ್ರಕರಣದ ಅಂತಿಮ ತೀರ್ಪು ಹೇಗಿರುತ್ತೆ ಎಂದು ಈಗಲೇ ಹೇಳಲಾರೆ. ಆದರೆ ಈ ಮನವಿಗಳನ್ನು ನೋಡಿದರೆ ಒಂದೆಡೆ ಪ್ರಾರ್ಥನೆಗಳ ಶಕ್ತಿಯನ್ನು ನಂಬಿರುವ ಬಾರ್ ಮಾಲೀಕ ಇದ್ದಾನೆಂದೂ, ಇನ್ನೊಂದೆಡೆ ಪ್ರಾರ್ಥನೆಗಳಿಗೆ ಯಾವ ಶಕ್ತಿಯೂ ಇಲ್ಲ ಎಂದು ವಾದಿಸುತ್ತಿರುವ ಚರ್ಚ್ ಮತ್ತದರ ಭಕ್ತರು ಇದ್ದಾರೆಂದೂ ಸ್ಪಷ್ಟವಾಗುತ್ತದೆ." ■


ತುಮಕೂರು: ಸೋತರೂ ಗೆಲ್ಲುವ ಗೌರಿಶಂಕರ ಸ್ವಾಮೀಜಿ

"ಒಬ್ಬ ಸ್ವಾಮಿಯಾಗಿ ಯಾವ ತಪ್ಪನ್ನೂ ಮಾಡದೇ ಅಪರಾಧಿ ...ನ್ನಿಸಿಕೊಂಡು ಜೈಲಿಗೆ ಹೋಗೋದಕ್ಕಿಂತ ಚುನಾವಣೆಯಲ್ಲಿ ಸೋಲೋದು ...ದೊಡ್ಡ ಅವಮಾನವೇನಲ್ಲ. ನಿರಪರಾಧಿಯಾಗಿ ಜೈಲು ಕಂಡ ನನ್ನಂಥವನಿಗೆ ...ನಾವಣೆಯಲ್ಲಿ ನಿಂತು ಸೋತರೆ ಏಕೆ ಮರ್ಯಾದೆ ಹೋಗುತ್ತೆ?"



ಇದು ಗೌರಿ ಶಂಕರ ಸ್ವಾಮೀಜಿ ಹಾಕುವ ಮರುಪ್ರಶ್ನೆ. ...ಸ್ವಾಮೀಜಿಯಾಗಿ ನೀವು ಚುನಾವಣೆಗೆ ನಿಲ್ಲಬಾರದಿತ್ತು ...ಸ್ವಾಮೀಜಿಯಾಗಿ ಸೋತರೆ ಇರೋ ಗೌರವಕ್ಕೂ ಚ್ಯುತಿ ...ಬರುತ್ತೆ....!, ಇತ್ಯಾದಿ ಯಾರೇ ಬಿಟ್ಟಿ ಸಲಹೆ ಕೊಟ್ಟರೂ ...ಗೌರಿಶಂಕರ ಸ್ವಾಮಿ ಥಟ್ಟಂತ ಮರುಪ್ರಶ್ನೆ ಹಾಕಿ ಬಾಯಿ ...ಮುಚ್ಚಿಸುತ್ತಾರೆ. ಬಹುಶಃ ತುಮಕೂರು ಲೋಕಸಭಾ ಕ್ಷೇತ್ರಕ್ಕೆ ...ಚುನಾವಣೆ ...ಗೇರಿದ್ದೇ ಗೌರಿಶಂಕರ ಸ್ವಾಮೀಜಿ ಚುನಾವಣೆಗೆ ನಿಂತ ...ಮೇಲೆ.

ಆತನಕ ಗೆಲ್ಲುವ ಕುದುರೆಯೆಂದೇ ಚಾಲ್ತಿಯಲ್ಲಿದ್ದದ್ದು ...ಬಿಜೆಪಿಯ ಜಿ.ಎಸ್. ಬಸವರಾಜ್. ನಿನ್ನೆಮೊನ್ನೆಯ ತನಕ ...ಕಾಂಗ್ರೆಸ್ಸಿನಲ್ಲಿದ್ದ ಬಸವರಾಜ್ ಮನೆಗೆ ಮಗನಲ್ಲ ಸುಡುಗಾಡಿಗೆ ...ಹೆಣವಲ್ಲ, ಆವತ್ತಿನಿಂದ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಮಲ್ಲಿಕಾರ್ಜುನಯ್ಯನವರಿಗೆ ...ಕೊಕ್ ... ಕೊಟ್ಟು ಕಾಂಗ್ರೆಸ್ಸಿಗೆ ಕೈಕೊಟ್ಟ ಬಸವರಾಜ್‌ಗೆ ಬಿಜೆಪಿ ...ಣೆ ಹಾಕಿದ್ದಕ್ಕೆ ಮುಖ್ಯ ಕಾರಣವಾಗಿದ್ದೇ ಸಿದ್ಧಗಂಗೆಯ ದೈವ ...ಶಿವಕುಮಾರ ಸ್ವಾಮೀಜಿ. ಇಡೀ ಸಿದ್ಧಗಂಗೆಯ ಸಾಮ್ರಾಜ್ಯವೇ ...ಬಸವರಾಜ್ ಬೆನ್ನಿಗೆ ನಿಂತಿತ್ತು, ಬಿಜೆಪಿ ಅಥವಾ ಬಸವರಾಜ್ ...ಸೋಲುವುದಕ್ಕಿಂತಲೂ ಅದು ಶಿವಕುಮಾರ ಸ್ವಾಮಿಗಳ ಸೋಲು ...ಎನ್ನುವಷ್ಟು ಪ್ರಶ್ನೆಯಾಗಿತ್ತು.



ಸರಿಸುಮಾರು ಎರಡೂ ಮುಕ್ಕಾಲು ಲಕ್ಷ ಲಿಂಗಾಯತ ...ಮತಗಳಿಂದಲೇ ಜಿ.ಎಸ್. ಬಸವರಾಜ್‌ರನ್ನು ಗೆಲ್ಲಿಸಿ ...ಬಿಡುತ್ತೇನೆಂದು ಖದೀಮ ಸೊಗಡು ಶಿವಣ್ಣ ಹೂಂಕರಿಸಿದ್ದು ...ಒಂದೆಡೆಯಾದರೆ ಮತ್ತೊಂದೆಡೆ ವಿಜಯನಗರದ ವೀರಪುತ್ರ ...ಸೋಮಣ್ಣ ಆರ್ಭಟಿಸುತ್ತಿದ್ದ. ಕಾಂಗ್ರೆಸ್ ಕೋದಂಡರಾಮಯ್ಯನವರಿಗೆ ಟಿಕೆಟ್ ...ಕೊಟ್ಟಾಗ ಬಸವರಾಜ್‌ಗೆ ಪೈಪೋಟಿ ಅಂತಿದ್ದರೆ ಅದು ಜೆಡಿಎಸ್‌ನ ...ಮುದ್ದಹನುಮೇಗೌಡರಿಂದ ಮಾತ್ರ ಎಂಬಂತಿದ್ದದ್ದು ಏಕಾಏಕಿ ತಲೆಕೆಳಗಾಗಿದ್ದೇ ...ಗೌರಿಶಂಕರ ಸ್ವಾಮೀಜಿಯ ಪ್ರವೇಶದಿಂದ!

ಮುಲಾಯಂಸಿಂಗ್‌ಗೆ ಆಪ್ತನಂತಿದ್ದ ಚೌಧುರಿ ವೀರ್‌ಸಿಂಗ್ ಎಂಬಾತ ಅದ್ಯಾವ ಗಳಿಗೆಯಲ್ಲಿ ಗೌರಿಶಂಕರ ಸ್ವಾಮೀಜಿಯ ತಲೆಗೆ ರಾಜಕೀಯದ ಹುಳಬಿಟ್ಟನೋ ಗೊತ್ತಿಲ್ಲ, ಇದ್ದಕ್ಕಿದ್ದಂತೆ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ಗೌರಿಶಂಕರ ಸ್ವಾಮಿಯಿಂದಾಗಿ ಬಿಜೆಪಿಯ ಲೆಕ್ಕಾಚಾರವೆಲ್ಲ ತಲೆಕೆಳಗಾಗಿತ್ತು, ಎರಡೂ ಮುಕ್ಕಾಲು ಲಕ್ಷ ಲಿಂಗಾಯತರ ಓಟುಗಳೆಲ್ಲ ಸಾರಾಸಗಟಾಗಿ ಜಿ.ಎಸ್. ಬಸವರಾಜ್‌ಗೆ ಬಿದ್ದರೂ ಅದೊಂದೇ ಗೆಲುವಿಗೆ ಸಾಲುವುದಿಲ್ಲ, ಏಕೆಂದರೆ ಒಕ್ಕಲಿಗ ಮತದಾರರ ಸಂಖ್ಯೆ ಎರಡೂಕಾಲು ಲಕ್ಷದಷ್ಟಿದೆ. ಜೊತೆಗೆ ಅಷ್ಟಿಷ್ಟು ಮುಸ್ಲಿಂ ಮತಗಳೂ ಜೆಡಿಎಸ್‌ಗೆ ಬೀಳುತ್ತವೆ. ಒಂದುಕಾಲು ಲಕ್ಷದಷ್ಟಿರುವ ದಲಿತರು-ಹಿಂದುಳಿದವರ ಮತಗಳಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿಗಳು ಸರಿಸಮವಾಗಿ ಹಂಚಿಕೊಂಡರೂ ಮೂರು ಪಕ್ಷಗಳ ಮಧ್ಯೆ ಸರಿಸಮವಾದ ಪೈಪೋಟಿ ಬೀಳುತ್ತದೆ.

ಈ ಮಧ್ಯೆ ಗೌರಿಶಂಕರ ಸ್ವಾಮೀಜಿಗೆ ಅರ್ಧದಷ್ಟಾದರೂ ಲಿಂಗಾಯತ ಮತಗಳು ಬಿದ್ದೇಬೀಳುತ್ತವೆ. ಜೊತೆಗೆ ಸಮಾಜವಾದಿ ಪಾರ್ಟಿಯ ಲೋಕಲ್ ನಾಯಕ ಚೌಧುರಿ ಮಿರ್‌ಸಿಂಗ್ ಬೆನ್ನಿಗೆ ಮುಸ್ಲಿಂ ಹುಡುಗರ ದೊಡ್ಡ ಹಿಂಡೇ ಇದೆ. ಅರ್ಧದಷ್ಟು ಲಿಂಗಾಯತ ಮತಗಳು, ಒಂದಷ್ಟು ಮುಸ್ಲಿಂ ಓಟುಗಳು ಮತ್ತು ಅಷ್ಟಿಷ್ಟು ಹಿಂದುಳಿದವರು ಮತ್ತು ಕೆಳಜಾತಿಯ ಮತಗಳು ಬಿದ್ದರೂ ಗೌರಿಶಂಕರ ಸ್ವಾಮೀಜಿಯ ಪಾಲಿಗದು ಗಣನೀಯ ಸಂಖ್ಯೆಯಾಗುತ್ತದೆ. ತ್ರಿಕೋನ ಸ್ಪರ್ಧೆಯಿದ್ದಾಗಿನ ಬಿಜೆಪಿಯ ಬಸವರಾಜ್ ಸಾಧ್ಯತೆಗೂ ಚತುಷ್ಕೋನ ಸ್ಪರ್ಧೆಯಲ್ಲಿ ಅದೇ ಬಸವರಾಜ್ ಸ್ಥಾನಮಾನಕ್ಕೂ ವ್ಯತ್ಯಾಸವಿದೆ. ಏಕೆಂದರೆ ಗೌರಿಶಂಕರ ಸ್ವಾಮೀಜಿ ಕೀಳುವ ಪ್ರತಿ ಓಟೂ ಬಿಜೆಪಿಯ ಬಸವರಾಜ್ ಪಾಲಿನ ಓಟೇ. ಅದರರ್ಥ ಗೌರಿಶಂಕರ ಸ್ವಾಮೀಜಿ ಪರೋಕ್ಷವಾಗಿ ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿಗೆ ಪೆಟ್ಟು ಕೊಡುತ್ತಾರೆ.

ಹಾಗೊಮ್ಮೆ ಗೌರಿಶಂಕರ ಸ್ವಾಮೀಜಿಗೆ ದೊಡ್ಡ ಬೆಂಬಲಬಾರದೇ ಕನಿಷ್ಠ ಅರವತ್ತರಿಂದ ಎಪ್ಪತ್ತು ಸಾವಿರದಷ್ಟು ಓಟು ಬಿತ್ತರೂ ಅದು ಬಿಜೆಪಿಯ ಬಸವರಾಜ್ ಪಾಲಿಗೆ ಮುಳುವಾಗುತ್ತದೆ. ಇದರ ಲಾಭ ಪಡೆಯುವುದು ಜೆಡಿಎಸ್‌ನ ಮುದ್ದ ಹನುಮೇಗೌಡ!

ಇದನ್ನೆಲ್ಲ ಲೆಕ್ಕ ಹಾಕಿಯೇ ಕುಣಿಗಲ್‌ನ ಅದೇ ಶಂಕರ ಮಠದ ಸಿದ್ಧರಾಮ ಚೈತನ್ಯ ಸ್ವಾಮೀಜಿ ಗೌರಿಶಂಕರ ಸ್ವಾಮೀಜಿಯನ್ನು ಬೆಂಬಲಿಸಿದ್ದಾರೆ. ಕುಣಿಗಲ್‌ನ ಹೆಬ್ಬೂರು ಮತ್ತು ಸುತ್ತಮುತ್ತಲ ಒಕ್ಕಲಿಗರಲ್ಲಿ ಸಿದ್ಧರಾಮ ಚೈತನ್ಯ ಸ್ವಾಮೀಜಿಗೆ ಸಾಕಷ್ಟು ಬೆಂಬಲವಿದೆ. ಗೌರಿಶಂಕರ ಸ್ವಾಮೀಜಿ ಸೋತರೂ ಗೆಲ್ಲುತ್ತಾರೆ. ಏಕೆ ಗೊತ್ತೆ?

ಬಿಜೆಪಿಯ ಬಸವರಾಜ್ ಸೋತರೆಂದರೆ ಅದು ಸಿದ್ಧಗಂಗೆಯ ಸಾಮ್ರಾಜ್ಯಕ್ಕೆ ಪೆಟ್ಟು ಕೊಟ್ಟಂತೆಯೇ. ನಿರಪರಾಧಿಯಾಗಿದ್ದೂ ಜೈಲಿಗೆ ಹೋಗುವ ಕಳಂಕಕ್ಕಿಂತ ಚುನಾವಣೆಯಲ್ಲಿ ಸೋಲುವುದು ದೊಡ್ಡದೇನಲ್ಲ ಎಂಬ ಗೌರಿಶಂಕರ ಸ್ವಾಮೀಜಿಯವರ ಮಾತಿಗೆ ಎಷ್ಟೊಂದು ಅರ್ಥವಿದೆಯಲ್ಲವೆ?

● ರಾ.ಸೋ.


ಆರ್.ಪಿ. ಜಗದೀಶ್ ನಾಟಕ

ಗೌರಿಶಂಕರ ಸ್ವಾಮೀಜಿ ನಾಮಪತ್ರ ಸಲ್ಲಿಸುತ್ತಿದ್ದಂತೆಯೇ ಬಿಜೆಪಿಯ ಬುಡಕ್ಕೆ ಬೆಂಕಿ ಬಿದ್ದಂತಾಗಿದೆ. ಎಲ್ಲಾ ತೂಗಿ ಅಳೆದು ಕಾಂಗ್ರೆಸ್ಸಿನಲ್ಲಿದ್ದ ಬಸವರಾಜ್‌ರನ್ನು ಎಳೆತಂದು ಬಿಜೆಪಿಯ ಟಿಕೆಟ್ ಘೋಷಿಸಿದ ಮುಖ್ಯಮಂತ್ರಿ ಯಡಿಯೂರಪ್ಪನವರ ನಿರ್ಧಾರಕ್ಕೆ ಕೇವಲ ಬಿನ್ನಿಪೇಟೆ ಸೋಮಣ್ಣನಷ್ಟೇ ಅಲ್ಲ, ಸಾಕ್ಷಾತ್ ಶಿವಕುಮಾರ ಸ್ವಾಮಿಗಳೇ ತಥಾಸ್ತು ಎಂದಾಗಿತ್ತು.

ಈಗ ಶತಗತಾಯ ಮುಖ ಉಳಿಸಿಕೊಳ್ಳಬೇಕಲ್ಲ, ಅದಕ್ಕೆ ಯಡ್ಡಿ ಗ್ಯಾಂಗ್ ಛೂ ಬಿಟ್ಟಿದ್ದು ಆರ್.ಪಿ. ಜಗದೀಶ್ ಎಂಬ ಮೀಡಿಯಾ ಏಜೆಂಟನನ್ನು. ವಿ. ಸೋಮಣ್ಣನ ದತ್ತುಪುತ್ರನಂತಿರುವ ಆರ್.ಪಿ. ಜಗದೀಶ್ ಪಕ್ಕಾ ಗರತಿಯ ಗೆಟಪ್ಪಿನಲ್ಲಿ ಗೌರಿಶಂಕರರಿಗೆ ಫೋನಮಟ್ಟಿ 'ಸ್ವಾಮೀಜಿ... ಮುಖ್ಯಮಂತ್ರಿಗಳಿಗೆ ನಿಮ್ಮ ಬಗ್ಗೆ ತುಂಬಾ ಭಕ್ತಿ. ನಿಮಗೆ ಪ್ರತ್ಯೇಕ ಮಠ ಕಟ್ಟಿಕೊಳ್ಳೋದಕ್ಕೆ ಸರ್ಕಾರದಿಂದ ಐದೆಕರೆ ಜಮೀನು ಕೊಡ್ತಾರಂತೆ. ದುಡ್ಡು ಕಾಸಿಗೂ ನೆರವಾಗ್ತಾರಂತೆ. ನೋಡಿ ಮತ್ತೆ ಯಾಕೆ ಸುಮ್ನೆ ಅವಮಾನಕ್ಕೀಡಾಗ್ತೀರಿ? ದೊಡ್ಡ ಮನಸ್ಸು ಮಾಡಿ ನಾಮಪತ್ರ ವಾಪಸ್ ತಗೊಳ್ಳೀ...' ಎಂದಿದ್ದಾರೆ ಜಗದೀಶ್.


ತಲೆ ಕೂಡ ಎತ್ತದೇ 'ನಿಮ್ಮನ್ನ ಕಳಿಸಿಕೊಟ್ಟಿದ್ದು ಸೋಮಣ್ಣನಾ? ಬಸವರಾಜನಾ?' ಎಂದು ಗೌರಿಶಂಕರರು ಹೇಳಿದ್ದೇ ತಡ ಆರ್‌ಪಿಜೆ ಜಾಗ ಖಾಲಿ ಮಾಡಿದ್ದಾರೆ.


ಸ್ವಿಸ್ ಬ್ಯಾಂಕ್ ಹಣ ವಾಪಸ್ಸು ತರುತ್ತಾರಂತೆ!



"ಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತಂದರೆ, ಮಾನ್ಯ ಲಾಲ್ ಕೃಷ್ಣ ಅಧ್ವಾನಿಯವರನ್ನು ಪ್ರಧಾನಮಂತ್ರಿ ಮಾಡಿದರೆ, ಭಾರತೀಯ ದುಡ್ಡಿನ ಕುಳಗಳು, ರಾಜಕಾರಣಿಗಳು, ಐಎಎಸ್-ಐಪಿಎಸ್ ಅಧಿಕಾರಿಗಳು ಸ್ವಿಸ್ ಬ್ಯಾಂಕುಗಳಲ್ಲಿಟ್ಟಿರುವ ಅಕ್ರಮ ದುಡ್ಡನ್ನೆಲ್ಲಾ ದೇಶಕ್ಕೆ ವಾಪಸ್ಸು ತರುತ್ತೇವೆ. ಸ್ವಿಸ್ ಬ್ಯಾಂಕುಗಳಲ್ಲಿ ಸುಮಾರು 25 ರಿಂದ 70 ಲಕ್ಷ ಕೋಟಿ ರೂಪಾಯಿಗಳಷ್ಟು ಭಾರತದ ಅಕ್ರಮ ದುಡ್ಡಿದ್ದು ಅದು ಭಾರತದ ಒಟ್ಟು ವಿದೇಶಿ ಸಾಲದ 13 ಪಟ್ಟಾಗುತ್ತದೆ. ಈ ದುಡ್ಡೇನಾದರೂ ದೇಶಕ್ಕೆ ಮರಳಿದರೆ ಆ ಸಾಲವನ್ನೆಲ್ಲಾ ಕೇವಲ ಇಪ್ಪತ್ನಾಲ್ಕು ಗಂಟೆಗಳಲ್ಲಿ ತೀರಿಸಿ ಉಳಿದ 12 ಪಟ್ಟು ದುಡ್ಡಿನಲ್ಲಿ ದೇಶವನ್ನು ಉದ್ಧಾರ ಮಾಡಬಹುದು. ಭಾರತದಲ್ಲಿ ಸುಮಾರು 45 ಕೋಟಿ ಜನ ಕಡುಬಡವರಿದ್ದು ಅವರಿಗೆಲ್ಲಾ ಈ ದುಡ್ಡನ್ನು ಹಂಚಿದರೆ ಒಬ್ಬೊಬ್ಬರಿಗೆ ತಲಾ ಒಂದೊಂದು ಲಕ್ಷ ರೂಪಾಯಿ ಸಿಗುತ್ತದೆ." – ಇದು ಬಿಜೆಪಿಗಳು ಮತ್ತು ಲಾಲ್ ಕೃಷ್ಣ ಅಧ್ವಾನಿಯವರು ಖುದ್ದಾಗಿ ಊದುತ್ತಿರುವ ಹೊಸ ಪುಂಗಿ. ಇದಕ್ಕೆ ಯೋಗ ಗುರು ರಾಮ್‌ದೇವ್ ಕೂಡ ನಾಲಿಗೆ ಜೋಡಿಸಿ "ಸ್ವಿಸ್ ಬ್ಯಾಂಕುಗಳಿಂದ ಭಾರತದ ಹಣವನ್ನು ವಾಪಸ್ಸು ತರುವ ಪಕ್ಷಕ್ಕೆ ಮತ ಹಾಕಿ" ಎಂದು ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ.







ಮೊಟ್ಟ ಮೊದಲನೆಯದಾಗಿ, ಸ್ವಿಸ್ ಬ್ಯಾಂಕುಗಳಲ್ಲಿ ಭಾರತದ ಎಷ್ಟು ಅಕ್ರಮ ದುಡ್ಡಿದೆ ಎಂಬುದು ವಾಸ್ತವದಲ್ಲಿ ಆಯಾ ಬ್ಯಾಂಕುಗಳಿಗೆ ಬಿಟ್ಟರೆ ಯಾರಿಗೂ ಗೊತ್ತಿಲ್ಲ. ಅಧ್ವಾನಿ ಮಹಾಶಯರಿಗಂತೂ ಗೊತ್ತಿರಲಿಕ್ಕೆ ಸಾಧ್ಯವೇ ಇಲ್ಲ. **Swiss Banking Association** ಎಂಬ ಸಂಸ್ಥೆಯ 2006ರ ವರದಿಯ ಪ್ರಕಾರ ಭಾರತದ 1456 ಬಿಲಿಯನ್ ಡಾಲರ್ (ಸುಮಾರು 70 ಲಕ್ಷ ಕೋಟಿ), ರಶಿಯಾದ 470 ಬಿಲಿಯನ್ ಡಾಲರ್, ಇಂಗ್ಲೆಂಡಿನ 390 ಬಿಲಿಯನ್ ಡಾಲರ್, ಉಕ್ರೇನಿನ 100 ಬಿಲಿಯನ್ ಡಾಲರ್ ಹಾಗೂ ಚೀನಾದ 96 ಬಿಲಿಯನ್ ಡಾಲರ್ ದುಡ್ಡು ಸ್ವಿಸ್ ಬ್ಯಾಂಕುಗಳಲ್ಲಿವೆ ಎಂದು ಬಿಜೆಪಿಗಳು ಮತ್ತು ಅಧ್ವಾನಿಗಳು ಹೇಳುತ್ತಿದ್ದಾರೆ. ಅಂದರೆ ಉಳಿದೆಲ್ಲ ದೇಶಗಳ ಒಟ್ಟು ಅಕ್ರಮ ದುಡ್ಡಿನ ಅದೆಷ್ಟೋ ಪಟ್ಟು ಹೆಚ್ಚು ದುಡ್ಡನ್ನು ಭಾರತವೊಂದೇ ಸ್ವಿಸ್ ಬ್ಯಾಂಕುಗಳಲ್ಲಿಟ್ಟಿದೆ ಎಂದಾಯಿತು. ಅಸಲೀಯತ್ತೇನೆಂದರೆ ಅಧ್ವಾನಿ ಹೇಳುವ ಈ **Swiss Banking Association** ಎಂಬ ಹೆಸರಿನ ಸಂಸ್ಥೆಯೇ ಅಸ್ತಿತ್ವದಲ್ಲಿಲ್ಲ! ಬದಲಾಗಿ **Swiss Bankers Association** ಎಂಬ ಸಂಸ್ಥೆಯೊಂದಿದೆ. ಆದರೆ ಎಂದಿಗೂ ಅದು ತನ್ನ ವರದಿಯನ್ನು ಪ್ರಕಟಿಸಿಯೇ ಇಲ್ಲ! ಅಂದರೆ ಅಧ್ವಾನಿ ಮಹಾಶಯರು ಅಸ್ತಿತ್ವದಲ್ಲೇ ಇರದ ಸಂಸ್ಥೆಯೊಂದರ ಕಪೋಲಕಲ್ಪಿತ ವರದಿಯ ಆಧಾರದಲ್ಲಿ ಪುಂಗಿ ಊದುತ್ತಿದ್ದಾರೆಂದಾಯಿತು.

ಹೋಗಲಿ ಬಿಡಿ. ಇಷ್ಟೊಂದು ದೊಡ್ಡ ಪ್ರಮಾಣದ ಅಕ್ರಮ ದುಡ್ಡನ್ನು ಭಾರತದ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು ಸ್ವಿಸ್ ಬ್ಯಾಂಕುಗಳಲ್ಲಿಟ್ಟಿದ್ದಾರೆಂದು ಯಾವುದೇ ಆಧಾರಗಳಿಲ್ಲದೆಯೇ ಯಾರು ಹೇಳಿದರೂ ನಾವು ನಂಬುತ್ತೇವೆ. ಏಕೆಂದರೆ ನಮ್ಮ ಭ್ರಷ್ಟ ಅಧಿಕಾರಿಗಳು, ರಾಜಕಾರಣಿಗಳು ಭಾರತವನ್ನು ದಿನನಿತ್ಯ ಹಿಂಡಿ ಹಿಪ್ಪೆ ಮಾಡುತ್ತಿರುವುದನ್ನು ಕಣ್ಣಾರೆ ನೋಡುತ್ತಿದ್ದೇವೆ. ಭ್ರಷ್ಟಾಚಾರ, ಸಾರ್ವಜನಿಕ ಸಂಪತ್ತಿನ ಲೂಟಿ ಯಾವ ಮಟ್ಟದಲ್ಲಿ ನಡೆಯುತ್ತಿದೆ ಎಂಬುದು ನಮಗೆ ಗೊತ್ತಿದೆ. ಇಲ್ಲಿ ಕೊಳ್ಳೆ ಹೊಡೆದ ದುಡ್ಡನ್ನು ಅವರೆಲ್ಲಾ ಸ್ವಿಸ್ ಬ್ಯಾಂಕ್‌ಗಳಲ್ಲಿ ಮಾತ್ರವಲ್ಲದೇ ಪ್ರಪಂಚದ ಇನ್ನಿತರ ಬ್ಯಾಂಕುಗಳಲ್ಲೂ ಭದ್ರವಾಗಿಟ್ಟಿರುವುದೂ, ಇಡುತ್ತಿರುವುದೂ ಗೊತ್ತಿದೆ. 70 ಲಕ್ಷ ಕೋಟಿಯಷ್ಟು ಇಟ್ಟಿದ್ದಾರೆಂದರೆ ಅದನ್ನೂ ನಂಬೋಣ. ಅದನ್ನು ವಾಪಸ್ಸು ತಂದರೆ ಭಾರತದ ಸಾಲವೆಲ್ಲಾ ತೀರಿ ನಲವತ್ತೈದು ಕೋಟಿ ಕಡುಬಡವರಿಗೆ ತಲಾ ಒಂದೊಂದು ಲಕ್ಷ ರೂಪಾಯಿ ಪುಕ್ಕಟೆಯಾಗಿ ಸಿಗುತ್ತದೆಂದರೆ ಅದಕ್ಕಿಂತ ಖುಷಿಯ ವಿಚಾರ ಇನ್ನೊಂದಿದೆಯೆ?


ಆದರೆ ಪ್ರಶ್ನೆಯಿರುವುದು ಬಿಜೆಪಿ ಅಧಿಕಾರಕ್ಕೆ ಬಂದರೆ, ಅಧ್ವಾನಿ ಪ್ರಧಾನ ಮಂತ್ರಿಯಾದರೆ ಆ ದುಡ್ಡನ್ನು ದೇಶಕ್ಕೆ ಮರಳಿ ತರುತ್ತೇವೆ ಎನ್ನುತ್ತಿದ್ದಾರಲ್ಲಾ, ಅದು ಆಗುವ ಕೆಲಸವಾ? ಸ್ವಿಸ್ ಬ್ಯಾಂಕಿನಲ್ಲಿ ಕೇವಲ ಬೇರೆ ಪಕ್ಷಗಳ ರಾಜಕಾರಣಿಗಳ ದುಡ್ಡು ಮಾತ್ರವಲ್ಲ, ದೊಡ್ಡ ಮಟ್ಟದಲ್ಲಿ ಬಿಜೆಪಿ ರಾಜಕಾರಣಿಗಳ ದುಡ್ಡೂ ಇದೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಇನ್ನಿತರ ಪಕ್ಷಗಳ ದುಡ್ಡೂ ಇದೆ. ಎನ್‌ಡಿಎ ಮೈತ್ರಿಕೂಟ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಖುದ್ದು ಬಿಜೆಪಿಯನ್ನೂ ಒಳಗೊಂಡಂತೆ ಮೈತ್ರಿಕೂಟದ ಎಲ್ಲಾ ಪಕ್ಷಗಳೂ ಮೈತುಂಬಾ ಹಗರಣಗಳನ್ನು, ಭ್ರಷ್ಟಾಚಾರಗಳನ್ನು ಮಾಡಿಕೊಂಡು ಸಕತ್ತಾಗಿ ದೇಶವನ್ನು ಲೂಟಿ ಹೊಡೆದಿದ್ದರಲ್ಲಾ ಆ ದುಡ್ಡೂ ಇದೆ. ಅದನ್ನೆಲ್ಲಾ ವಾಪಸ್ಸು ತರುತ್ತಾರಾ? ಇಲ್ಲಿಯ ತನಕ ಗುಜರಾತ್‌ನಲ್ಲಿ, ಮಧ್ಯಪ್ರದೇಶದಲ್ಲಿ, ಛತ್ತೀಸ್‌ಘಡದಲ್ಲಿ, ರಾಜಸ್ಥಾನದಲ್ಲಿ, ಮತ್ತೀಗ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೇರಿ ಮಾಡಬಾರದಷ್ಟು ಹಗರಣಗಳನ್ನು ಮಾಡಿ ಕೊಳ್ಳೆ ಹೊಡೆದ ದುಡ್ಡೂ ಇದೆ. ಅದನ್ನೂ ವಾಪಸ್ಸು ತರುತ್ತಾರಾ?


ಅಧ್ವಾನಿಗೆ, ಬಿಜೆಪಿಗೆ ದೇಶದ ಸಂಪತ್ತಿನ ಬಗ್ಗೆ, ಜನರ ದುಡ್ಡಿನ ಬಗ್ಗೆ ಅಷ್ಟೊಂದು ಕಾಳಜಿಯಿದ್ದರೆ ಸ್ವಿಟ್ಜರ್‌ಲ್ಯಾಂಡಿನ ತನಕ ಹೋಗುವುದು ಬೇಡ. ಎಲ್ಲೆಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆಯೋ ಆ ಎಲ್ಲಾ ರಾಜ್ಯಗಳಲ್ಲೂ ಇಂದಿಗೂ ಬಿಜೆಪಿಗಳು ದೇಶದ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದಾರೆ. ಕರ್ನಾಟಕವನ್ನೇ ತೆಗೆದುಕೊಳ್ಳಿ. ಬಳ್ಳಾರಿ ಗಣಿಧಣಿಗಳು ನಾಡಿನ ಭೂಗರ್ಭವನ್ನು ಅಗೆದು ಹಾಡುಹಗಲೇ ಸರ್ಕಾರಕ್ಕೆ ಸಾವಿರಾರು ಕೋಟಿ ಮೋಸ ಮಾಡಿ ತಮ್ಮ ಖಜಾನೆ ತುಂಬಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಸತೀಶ್ ರೆಡ್ಡಿಯಂಥ ಬಿಜೆಪಿ ಎಮ್ಮೆಲ್ಲೆ ಕಂ ಭೂಗಳ್ಳರೇ ಸಾವಿರಾರು ಕೋಟಿ ಬಾಚಿಕೊಂಡಿದ್ದಾರೆ. ಮುಖ್ಯಮಂತ್ರಿ ಯಡ್ಡಿಯ ಪುತ್ರರತ್ನರೇ ಟ್ರಾನ್ಸ್‌ಫರ್ ದಂಧೆಯಲ್ಲಿ, ಅಭಿವೃದ್ಧಿ ಕಾಮಗಾರಿಯ ಹೆಸರಿನಲ್ಲಿ ನೂರಾರು ಕೋಟಿ ದೋಚುತ್ತಿದ್ದಾರೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡುನಂಥ, ಆರ್.ಅಶೋಕ್‌ನಂಥ, ನರ್ಸ್ ರೇಣುಕನಂಥ ಬಿಜೆಪಿ ನಾಯಕ ಶಿಖಾಮಣಿಗಳು ಇಂದಿಗೂ ಸಾವಿರಾರು ಕೋಟಿಯ ಒಡೆಯರಾಗಿದ್ದಾರೆ. ಇದು ಕೇವಲ ಕರ್ನಾಟಕದ ಕತೆ. ಇನ್ನು ಇಡೀ ದೇಶದಲ್ಲಿ ಬಿಜೆಪಿಗಳು ದೋಚಿಟ್ಟುಕೊಂಡಿರುವ ಹಡಬೆ ದುಡ್ಡನ್ನೆಲ್ಲಾ ಲೆಕ್ಕ ಹಾಕಿದರೆ ಭಾರತದ ಎಲ್ಲಾ ರಾಜಕೀಯ ಪಕ್ಷಗಳು, ಭ್ರಷ್ಟ ಅಧಿಕಾರಿಗಳು ಸ್ವಿಸ್ ಬ್ಯಾಂಕುಗಳಲ್ಲಿಟ್ಟಿರುವ 70 ಲಕ್ಷ ಕೋಟಿ ದುಡ್ಡಿಗಿಂತಲೂ ಜಾಸ್ತಿಯಾಗುತ್ತದೆ. ಅದನ್ನೆಲ್ಲಾ ಕಕ್ಕಿಸಿದರೆ ಭಾರತದ ಸಾಲವೂ ತೀರುತ್ತದೆ. ಕೇವಲ ಕಡುಬಡವರಿಗೆ ಮಾತ್ರವಲ್ಲ ಇಡೀ ದೇಶದ ನೂರು ಕೋಟಿ ಜನರಿಗೂ ಎರಡೆರಡು ಲಕ್ಷ ದುಡ್ಡೂ ಪುಕ್ಕಟೆಯಾಗಿ ಸಿಗುತ್ತದೆ. ಅಧ್ವಾನಿ ಮಹಾಶಯರು ಮೊದಲು ಆ ಕೆಲಸ ಮಾಡಲಿ. ಆಮೇಲೆ ಭಾರತದಲ್ಲೇ ಇನ್ನಿತರ ಪಕ್ಷಗಳ ಭ್ರಷ್ಟ ರಾಜಕಾರಣಿಗಳು, ಉದ್ಯಮಪತಿಗಳು, ಭ್ರಷ್ಟ ಅಧಿಕಾರಿಗಳು ಜನಸಾಮಾನ್ಯರನ್ನು ಹಿಂಡಿ ಹಿಪ್ಪೆ ಮಾಡಿ ದೋಚಿರುವ ದುಡ್ಡನ್ನು ಕಕ್ಕಿಸುವುದಕ್ಕೆ ಕೈ ಹಾಕಲಿ. ಅದಾದ ಮೇಲೂ ಸಾಕಾಗಲಿಲ್ಲ ಎಂದಾದರೆ ಸ್ವಿಸ್ ಬ್ಯಾಂಕುಗಳಲ್ಲಿರುವ ಭಾರತದ ದುಡ್ಡಿನ ಬಗ್ಗೆ ಮಾತನಾಡಲಿ. ■



ಸುತ್ತ ಮುತ್ತ

►ಕುಮಾರ್ ಬುರಡಿಕಟ್ಟಿ





ಮೇರಾ ಭಾರತ್ ಮಹಾನ್!

1984ರ ಸಿಖ್ ವಿರೋಧಿ ದಂಗೆಯ ಪ್ರಮುಖ ರೂವಾರಿಯಾಗಿದ್ದ ಕಾಂಗ್ರೆಸ್‌ನ ಜಗದೀಶ್ ಟೈಟ್ಲರ್ ಎಂಬ ನರಹಂತಕನಿಗೆ ಸಿ.ಬಿ.ಐ ಕೊನೆಗೂ ಕ್ಲೀನ್ ಚಿಟ್ ನೀಡಿದೆ. ಇದು ನಮ್ಮ ಭಾರತ ದೇಶ. ಇಲ್ಲಿ ಎಷ್ಟು ಸಾವಿರ ಕೊಲೆಗಳನ್ನು ಮಾಡಿದರೂ, ಎಷ್ಟು ಜನರನ್ನು ಜೀವಂತವಾಗಿ ಸುಟ್ಟರೂ, ಎಷ್ಟು ಮಹಿಳೆಯರನ್ನು ನಡುಬೀದಿಯಲ್ಲಿ ರೇಪ್ ಮಾಡಿದರೂ ರಾಜಕೀಯ ಅಧಿಕಾರ, ದುಡ್ಡು ಇದ್ದರೆ ಆರಾಮಾಗಿ ಶಿಕ್ಷೆಯಿಂದ ತಪ್ಪಿಸಿಕೊಂಡು ರಾಜನಂತಿರಬಹುದು ಎಂಬುದಕ್ಕೆ ಮತ್ತೊಂದು ನಿದರ್ಶನವಾಗಿದೆ.

1980ರ ದಶಕದಲ್ಲಿ ಪಂಜಾಬ್‌ನಲ್ಲಿ ಖಲಿಸ್ತಾನ್ ಉಗ್ರವಾದಿಗಳ ಆರ್ಭಟ ಭುಗಿಲೆದ್ದಿತ್ತು. ಅದನ್ನು ಮಟ್ಟ ಹಾಕುವುದಕ್ಕಾಗಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ 'ಆಪರೇಷನ್ ಬ್ಲೂಸ್ಟಾರ್' ಹೆಸರಿನ ಕಾರ್ಯಾಚರಣೆ ನಡೆಸಿದ್ದರು. ಸಿಖ್ಖರ ಪವಿತ್ರ ಗುರುದ್ವಾರವಾದ ಅಮೃತ್‌ಸರದ ಸ್ವರ್ಣಮಂದಿರವನ್ನೇ ಖಲಿಸ್ತಾನಿ ಉಗ್ರರು ತಮ್ಮ ಅಡಗುದಾಣವನ್ನಾಗಿ ಮಾಡಿಕೊಂಡಿದ್ದರಿಂದ ಭಾರತೀಯ ಸೈನ್ಯ ಈ ಕಾರ್ಯಾಚರಣೆಯಲ್ಲಿ ಸ್ವರ್ಣ ಮಂದಿರದ ಮೇಲೆಯೇ ದಾಳಿ ಮಾಡಿ ನೂರಾರು ಸಿಖ್ಖರನ್ನು ನಿರ್ದಯವಾಗಿ ಕೊಂದು ಹಾಕಿತು. ಅಲ್ಲದೇ ಸ್ವರ್ಣ ಮಂದಿರದೊಳಕ್ಕೆ ಬಾಂಬು, ಬಂದೂಕುಗಳನ್ನು ತುಂಬಿಕೊಂಡ ಮಿಲಿಟರಿ ಟ್ಯಾಂಕರ್‌ಗಳು ನುಗ್ಗಿದ್ದರಿಂದ ಮಂದಿರವೂ ಭಾಗಶಃವಾಗಿ ನಾಶವಾಯಿತು. ಖಲಿಸ್ತಾನಿ ಉಗ್ರರನ್ನು ನಿಗ್ರಹಿಸುವ ಹೆಸರಿನಲ್ಲಿ ಈ ರೀತಿ ಸಿಖ್ಖರ ಮಾರಣ ಹೋಮ ಮಾಡಿದ್ದರಿಂದ, ಸ್ವರ್ಣಮಂದಿರದ ಮೇಲೆ ದಾಳಿ ಮಾಡುವ ಮೂಲಕ ಅವರ ಧಾರ್ಮಿಕ ಭಾವನೆಗಳನ್ನು ಘಾಸಿ ಮಾಡಿದ್ದಕ್ಕೆ ಪ್ರತೀಕಾರವಾಗಿ ಇಂದಿರಾ ಗಾಂಧಿ ಯವರನ್ನು ಅವರ ಸಿಖ್ ಅಂಗರಕ್ಷಕರೇ 1984ರ ಅಕ್ಟೋಬರ್ 31ರಂದು ಕೊಂದುಹಾಕಿದರು.



ಇಂದಿರಾ ಗಾಂಧಿಯ ಹತ್ಯೆಯಾಗುತ್ತಿದ್ದಂತೆಯೇ ಹಿರಿಯ ಕಾಂಗ್ರೆಸ್ ನಾಯಕರೆಲ್ಲಾ ನೂರಾರು ಜನರ ಗುಂಪು ಕಟ್ಟಿಕೊಂಡು ದೆಹಲಿಯ ಬೀದಿಗಳಲ್ಲಿ ಸಿಖ್ಖರ ಮಾರಣಹೋಮಕ್ಕಿಳಿದುಬಿಟ್ಟರು. ನಂತರದ ನಾಲ್ಕು ದಿನಗಳಲ್ಲಿ ಸಿಖ್ಖರೇ ಪ್ರಧಾನವಾಗಿ ವಾಸಿಸುತ್ತಿದ್ದ ದೆಹಲಿಯ ತ್ರಿಲೋಕ್‌ಪುರಿ, ಮೊಂಗಲ್‌ಪುರಿ, ಸುಲ್ತಾನ್‌ಪುರಿ, ಪಾಲಂ ಕಾಲೋನಿಗಳಂಥ ಪ್ರದೇಶಗಳು ಅಕ್ಷರ ಸ್ಮಶಾನಭೂಮಿಗಳಾಗಿ ಹೋದವು. ನೋಡುತ್ತಿದ್ದಂತೆಯೇ ಸಿಖ್ಖರ ಗುರುದ್ವಾರಗಳು ಧ್ವಂಸವಾದವು. ಸಾವಿರಾರು ಸಿಖ್ಖರನ್ನು ಮಹಿಳೆ, ಮಕ್ಕಳೆನ್ನದೇ ದೆಹಲಿಯ ಬೀದಿಗಳಲ್ಲಿ ಕೊಚ್ಚಿ ಕೊಲ್ಲಲಾಯಿತು. ನೂರಾರು ಜನರನ್ನು ಜೀವಂತವಾಗಿ ಸುಟ್ಟು ಹಾಕಲಾಯಿತು. ಸಿಖ್ಖರ ಮನೆ ಮಠಗಳು, ಆಸ್ತಿಪಾಸ್ತಿಗಳು ಭಸ್ಮವಾದವು. ಸರ್ಕಾರಿ ದಾಖಲೆಗಳೇ ಹೇಳುವಂತೆ ಈ ನರಮೇಧದಲ್ಲಿ ಸುಮಾರು ಮೂರು ಸಾವಿರ ಅಮಾಯಕ ಸಿಖ್ಖರು ಅಮಾನುಷವಾಗಿ ತಮ್ಮ ಪ್ರಾಣ ಕಳೆದುಕೊಂಡರು. ಇದು ಸರ್ಕಾರ ನೇಮಿಸಿದ ಸಮಿತಿಗಳು, ಆಯೋಗಗಳು ಕೊಟ್ಟ ಅಂಕಿಅಂಶ. ವಾಸ್ತವದಲ್ಲಿ ಏನಿಲ್ಲವೆಂದೂ ಐದಾರು ಸಾವಿರ ಸಿಖ್ಖರು ಅಸುನೀಗಿದ್ದರು.

ಈ ಇಡೀ ನರಮೇಧಕ್ಕೆ ಜಗದೀಶ್ ಟೈಟ್ಲರ್‌ನೇ ಖುದ್ದಾಗಿ ನೇತೃತ್ವ ವಹಿಸಿಕೊಂಡಿದ್ದ. ನೂರಾರು ಕಾಂಗ್ರೆಸ್ ಗೂಂಡಾಗಳ ಹಂತಕ ಪಡೆಯನ್ನು ಕಟ್ಟಿಕೊಂಡು ದೆಹಲಿಯ ಬೀದಿಬೀದಿಯಲ್ಲಿ ಸಿಖ್ಖರನ್ನು ಖುದ್ದಾಗಿ ಕೊಂದು ಹಾಕಿದ್ದ.

ಈ ನರಮೇಧಗಳು ನಡೆಯುವಾಗಲೇ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ರಾಜೀವ್ ಗಾಂಧಿ ಭೀಕರವಾಗಿ ನಡೆಯುತ್ತಿದ್ದ ಸಿಖ್ಖರ ನರಮೇಧವನ್ನು ತಡೆಯದೇ ಖುದ್ದಾಗಿ ಅದರ ಬೆಂಬಲಕ್ಕೆ ನಿಂತಿದ್ದರು. ಇಡೀ ದೆಹಲಿಯಾದ್ಯಂತ ಕರ್ಫ್ಯೂ ವಿಧಿಸಲಾಗಿತ್ತಾದರೂ ಅದು ಪರಿಣಾಮಕಾರಿಯಾಗಿ ಜಾರಿಗೆ ಬರದಂತೆ ನೋಡಿಕೊಂಡರು. ಇದರಿಂದ ನರಮೇಧ ಯಾವ ಅಡೆತಡೆಯೂ ಇಲ್ಲದೇ, ಸರ್ಕಾರದ ಸರ್ವರೀತಿಯ ಬೆಂಬಲದೊಂದಿಗೆ ಮುನ್ನಡೆಯಿತು.




ನರಮೇಧಗಳು ನಿಂತ ಮೇಲಾದರೂ ರಾಜೀವ್ ಗಾಂಧಿ ಅದನ್ನು ಖಂಡಿಸಲಿಲ್ಲ. "ದೊಡ್ಡ ಮರವೊಂದು ಧರೆಗುರುಳಿದಾಗ ಭೂಮಿ ಅದುರುವುದು ಸಹಜ" ಎಂಬ ಹೇಳಿಕೆಯನ್ನು ನೀಡಿ ಸಿಖ್ಖರ ನರಮೇಧವನ್ನು ಸಮರ್ಥಿಸಿಕೊಂಡರಲ್ಲದೇ ಜಗದೀಶ್ ಟೈಟ್ಲರ್‌ನಂಥ ಕೊಲೆಗಡುಕರಿಗೆ ರಕ್ಷಣೆ ಕೊಟ್ಟರು.

ಈ ನರಮೇಧಗಳು ನಡೆದ 18 ವರ್ಷಗಳ ನಂತರ 1998ರಲ್ಲಿ ಕಾಂಗ್ರೆಸ್ಸಿನ ಈಗಿನ ಅಧ್ಯಕ್ಷೆ ಸೋನಿಯಾ ಗಾಂಧಿ ಅಧಿಕೃತವಾಗಿ ಸಿಖ್ ಸಮುದಾಯದ ಕ್ಷಮೆ ಯಾಚಿಸಿದರು. ಆಗ ದೇಶದ ಬಹುತೇಕ ಶಾಂತಿಪ್ರಿಯ ಜನತೆ, ಅದರಲ್ಲೂ ಬಹಳವಾಗಿ ಘಾಸಿಗೊಂಡಿದ್ದ ಸಿಖ್ ಸಮುದಾಯ ನರಮೇಧ ನಡೆಸಿದ ಜಗದೀಶ್ ಟೈಟ್ಲರ್‌ನಂಥ ನರಹಂತಕರಿಗೆ ಶಿಕ್ಷೆಯಾಗಬಹುದೆಂದು ನಿರೀಕ್ಷಿಸಿದ್ದರು. ಆದರೆ ಈಗ ಅದೆಲ್ಲಾ ಸುಳ್ಳಾಗಿದೆ. ನರಮೇಧದ ತನಿಖೆ ನಡೆಸಿದ ಸಿಬಿಐ ಜಗದೀಶ್ ಟೈಟ್ಲರ್ ನಿರಪರಾಧಿ ಎಂದು ಸರ್ಟಿಫಿಕೇಟು ನೀಡಿದೆ.

ಮೂರು ಸಾವಿರ ಮುಸ್ಲಿಮರನ್ನು ಕೊಂದ ನರೇಂದ್ರ ಮೋದಿ ಮತ್ತೆ ಮುಖ್ಯಮಂತ್ರಿಯಾಗುತ್ತಾನೆ. ಬಾಬ್ರಿ ಮಸೀದಿ ಕೆಡವಿ, ದೇಶದಾದ್ಯಂತ ಕೋಮುಗಲಭೆ ಹಚ್ಚಿ ಸಾವಿರಾರು ಜನರನ್ನು ಕೊಂದು ಹಾಕಿದ ಅಧ್ವಾನಿ ಪ್ರಧಾನಮಂತ್ರಿಗಾಗಿ ಪೈಪೋಟಿ ನಡೆಸುತ್ತಾನೆ. ಭೂಪಾಲ್ ಅನಿಲ ದುರಂತದ ಮೂಲಕ 20 ಸಾವಿರ ಜನರನ್ನು ಕೊಂದು ಹಾಕಿದ ಯೂನಿಯನ್ ಕಾರ್ಬೈಡ್ ಕಂಪನಿಗೆ ನಾವೇ ಪ್ರಶಸ್ತಿ ಕೊಟ್ಟು ಗೌರವಿಸುತ್ತೇವೆ. ಐದು ಸಾವಿರ ಜನರನ್ನು ಕೊಂದ ಜಗದೀಶ್ ಟೈಟ್ಲರ್ ನಿರಪರಾಧಿ ಎಂಬ ಸರ್ಟಿಫಿಕೇಟು ಪಡೆಯುತ್ತಾನೆ. ಇದು ನಮ್ಮ ಭಾರತ. ಮೇರಾ ಭಾರತ್ ಮಹಾನ್!







ಹಾರನಹಳ್ಳಿ ರಾಮಸ್ವಾಮಿ ಸಾವಿನಲ್ಲೂ ಡೀಲ್!

ಹಾರನಹಳ್ಳಿ ರಾಮಸ್ವಾಮಿ ಸತ್ತಿದ್ದಾರೆ.


ಹಾಗೆ ಸತ್ತ ಕೇವಲ 48 ಗಂಟೆಗಳಲ್ಲೇ, ಅವರ ಹೆಣ ಇನ್ನೂ ಸುಡುತ್ತಿರುವಾಗಲೇ ಮಗ ಅಶೋಕ ಹಾರನಹಳ್ಳಿ ಸಂಯುಕ್ತ ಕರ್ನಾಟಕದ ಲೋಕ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿಯಾಗಿ ಬಂದು ವಕ್ಕರಿಸಿದ್ದಾರೆ. ಹೀಗೆ ತೀರಿಕೊಂಡವರ ಬಗ್ಗೆ ಕೆಟ್ಟ ಮಾತಾಡುವುದು ನಮ್ಮ ಸಂಸ್ಕೃತಿಯಲ್ಲ. ಆದರೆ ಹಾರನಹಳ್ಳಿ ಬಗ್ಗೆ ದುರ್ಬೀನು ಹಾಕಿ ಹುಡುಕಿದರೂ ಒಂದೇ ಒಂದು ಒಳ್ಳೆಯ ಮಾತು ಹೇಳಲಿಕ್ಕಾಗುವುದಿಲ್ಲ.

ಇದು ಅವರ ಆಯೋಗ್ಯತೆ ಅಷ್ಟೆ. ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ; ಶಿಕ್ಷಣ ತಜ್ಞ ಇನ್ನಿತ್ಯಾದಿ ಅನೇಕ ಆರೋಪಗಳು ರಾಮಸ್ವಾಮಿ ಮೇಲಿದ್ದವು. ಬಹುಶಃ ರಾಮಸ್ವಾಮಿ ಆಗಿನ್ನು ಯುವಕರಾಗಿದ್ದಾಗ ಅಂಟಿಕೊಂಡ ಕುರುದುಗಳಿರಬಹುದು ಅವು. ಜೊತೆಗೆ ಸಾಯುವ ದಿನದವರೆಗೂ ಈತ ಧರಿಸುತ್ತಿದ್ದ ಗಾಂಧಿ ಟೋಪಿಯಿಂದಾಗಿ ಈಗಿನ ತಲೆಮಾರಿನವರಿಗೆ ಹಾರನಹಳ್ಳಿ ಗಾಂಧಿಯ ದಂಡೆಂಬಂತೆ ಕಂಡಿರಲೂಬಹುದು. ಆದರೆ ಹಾರನಹಳ್ಳಿ ರಾಮಸ್ವಾಮಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ದಾರಿ ತಪ್ಪಿದವರಂತೆ ಒಂದೆರಡು ಬಾರಿ ಸೆರೆವಾಸಿಯಾಗಿದ್ದರು. ಅವು ಧರಿಸಿದ್ದ ಗಾಂಧಿ ಟೋಪಿಯನ್ನು ಬರೀ ಟೋಪಿ ಮಾಡಿಸಿ ಅದನ್ನೇ ಅನೇಕರಿಗೆ ಹಾಕಿ ಯಥೇಚ್ಛ ಹಣ ಆಸ್ತಿ ಸಂಪಾದಿಸಿಕೊಂಡು ತಂಪಾಗಿದ್ದರು. ಗಾಂಧಿವಾದಿ ಎನಿಸಿಕೊಂಡಿದ್ದರೂ ಗಾಂಧಿಯ ಸತ್ಯ, ನ್ಯಾಯ, ಜಾತ್ಯತೀತತೆ ಯನ್ನು ಕಾಲಲ್ಲಿ ಒದ್ದು ಹಾರ್ಡ್ ಕೋರ್ ಬಜರಂಗಿಯಂತೆ ಬದುಕಿದ್ದರು. ಕಳೆದ ಒಂಭತ್ತು ವರ್ಷಗಳಿಂದ ಲೋಕ ಶಿಕ್ಷಣ ಟ್ರಸ್ಟಿನ ಅಧ್ಯಕ್ಷನಾಗಿದ್ದ ರಾಮಸ್ವಾಮಿ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯನ್ನು ಆರ್‌ಎಸ್‌ಎಸ್ ಮುಖಪತ್ರದ ರೀತಿ ಬದಲಾಯಿಸಿದ್ದರು. ಕಪ್ಪು ಇಂಕಿನ ಬದಲಾಗಿ ಮನುಷ್ಯ ರಕ್ತದಲ್ಲೇ ಸಂಯುಕ್ತ ಕರ್ನಾಟಕ ಪ್ರಿಂಟಾಗುತ್ತಿದೆಯೇನೊ ಎಂಬಷ್ಟರ ಮಟ್ಟಿಗೆ ಪತ್ರಿಕೆಯ ವ್ಯಕ್ತಿತ್ವ ಮತ್ತು integrityಯನ್ನು ಹಾಳು ಮಾಡಿದ್ದರು. ಕೋಟಿಗಟ್ಟಲೆ ಹಣ ಕದ್ದು ಸಂಸ್ಥೆಯ ಬೆಲೆಬಾಳುವ ಆಸ್ತಿಯನ್ನು ಭೂಗಳ್ಳರಿಗೆ ಮಾರಿ, ಕೋಮುವಾದಿಗಳ ಕೈಗೆ ಪತ್ರಿಕೆ ನೀಡಿ ಆ ಮೂಲಕ ಅರ್ಧ ಕರ್ನಾಟಕಕ್ಕೆ ಬೆಂಕಿ ಹಚ್ಚಿದ ಮಹಾನುಭಾವ ಈ ಹಾರನಹಳ್ಳಿ ರಾಮಸ್ವಾಮಿ.


ಅಶೋಕ ಹಾರನಹಳ್ಳಿ ಅಕ್ರಮ ನೇಮಕ

ಹಾರನಹಳ್ಳಿ ಸತ್ತಿದ್ದು ಏಪ್ರಿಲ್ ನಾಲ್ಕರಂದು. ಅಮೆರಿಕದಲ್ಲಿದ್ದ ಒಬ್ಬ ಮಗ ಬರಲೆಂದು ಏಪ್ರಿಲ್ 6 ರ ಸೋಮವಾರದವರೆಗೂ ಕಾದು ನಂತರ ಅಂತ್ಯ ಸಂಸ್ಕಾರ ಮಾಡಿದ್ದಾರೆ. ಈ ವಿವರಗಳನ್ನು ಇಲ್ಲೇಕೆ ಹೇಳಬೇಕಾಯಿತೆಂದರೆ ಹಾಗೆ ಸಂಸ್ಕಾರ ನಡೆದ ದಿನ ರಾತ್ರಿಯೇ ರಾಮಸ್ವಾಮಿ ಮಗ ವಕೀಲ ಅಶೋಕ್ ಹಾರನಹಳ್ಳಿಯನ್ನು ಲೋಕ ಶಿಕ್ಷಣ ಟ್ರಸ್ಟ್‌ಗೆ ಹೊಸ ಟ್ರಸ್ಟಿಯಾಗಿ ನೇಮಿಸಲಾಗಿದೆ. ಅಂದರೆ ಮನೆಯಲ್ಲಿ ಹೆಣ ಇಟ್ಟುಕೊಂಡೇ ಒಂದು ಕ್ಷಣವನ್ನು ವ್ಯರ್ಥಮಾಡದೆ ಈ ಪುಣ್ಯಾತ್ಮರು ಮುಂದಿನ ಲಾಭ-ನಷ್ಟ ಯೋಚಿಸಿ ಅಶೋಕ್‌ರನ್ನು ಟ್ರಸ್ಟ್‌ನೊಳಗೆ ತೂರಿಸುವ ಸ್ಕೆಚ್ ಹಾಕುತ್ತಿದ್ದರು ಎಂದರ್ಥ ತಾನೆ?


ಗೋಪಾಲ್


ಶಾಮರಾವ್


ಅಶೋಕ್


ರಾಜಶೇಖರ್


ನಾರಾಯಣಮೂರ್ತಿ

ಲೋಕ ಶಿಕ್ಷಣ ಟ್ರಸ್ಟಿನ 75 ವರ್ಷಗಳ ಇತಿಹಾಸದಲ್ಲೇ ಹೀಗೆ ಟ್ರಸ್ಟಿಯೊಬ್ಬ ಸತ್ತಾಗ ಅವನ ಮಗನನ್ನೇ ಟ್ರಸ್ಟಿಯಾಗಿ ನೇಮಿಸಿಕೊಂಡ ಉದಾಹರಣೆಯಿಲ್ಲ. ಬಹಳ ಹಿಂದೆ ರಂಗನಾಥ ದಿವಾಕರ್ ಇದೇ ರೀತಿ ಸ್ವಜನಪಕ್ಷಪಾತ ನಡೆಸಲು ಹೊರಟಿದ್ದಾಗ ಶಾಮರಾಯರು 1986-87 ರ ಸುಮಾರಿಗೆ ಕೋರ್ಟಿಗೆ ಹೋಗಿ ತಡೆ ಮಾಡಿದ್ದರು. ಆಗಲೇ ರಾಜ್ಯ ಹೈಕೋರ್ಟ್ ಈ ಸಾರ್ವಜನಿಕ ಸಂಸ್ಥೆ ಬದುಕಿ ಬಾಳಲೆಂದು ಬಿ.ಡಿ. ಜತ್ತಿ, ಜೆ.ಎಂ. ಪಾಟೀಲ, ಎಸ್.ಪಿ. ಭಟ್, ಕೆ.ಎಸ್.ಎನ್. ಅಡಿಗ ಹಾಗೂ ಮಂಡಕೂರ್ ಎಂಬ ಐವರನ್ನು ಟ್ರಸ್ಟಿಗಳನ್ನಾಗಿ ನೇಮಿಸಿತ್ತು. ಶಾಮರಾಯರು ಈ ಟ್ರಸ್ಟಿನ ಸೆಕ್ರೆಟರಿಯಾದರು. ಆದರೆ ಜತ್ತಿಯಾದಿಯಾಗಿ ಯಾವೊಬ್ಬ ಟ್ರಸ್ಟಿ ಸತ್ತಾಗಲೂ ಅವರ ಮಕ್ಕಳನ್ನು ಆ ಜಾಗಕ್ಕೆ ತಂದಿರಲಿಲ್ಲ. ಆದರೆ ಈಗ ಮಾತ್ರ ರಾಮಸ್ವಾಮಿ ಮಗ ಅಶೋಕ ಹಾರನಹಳ್ಳಿಯನ್ನು ಲೋಕ ಶಿಕ್ಷಣ ಟ್ರಸ್ಟಿಗೆ ತಂದು ಕೂರಿಸಲಾಗಿದೆ. ಹಾಲಿ ಟ್ರಸ್ಟಿಗಳ ಪೈಕಿ ಬಿಜೆಪಿಯ ಸಂಸದ ಪ್ರಹ್ಲಾದ್ ಜೋಶಿ, ಉಮೇಶ್ ಭಟ್, ಕೆ.ಬಿ. ದೇಸಾಯಿ, ಕಾಂಗ್ರೆಸ್‌ನ ಎಂ.ವಿ. ರಾಜಶೇಖರನ್ ಈ ನಿಯಮಬಾಹಿರ ನೇಮಕಕ್ಕೆ ಒಪ್ಪುವ ಮೂಲಕ ಕೆಟ್ಟ ಪರಂಪರೆಗೆ ನಾಂದಿ ಹಾಡಿದ್ದಾರೆ.

ಭ್ರಷ್ಟಾಚಾರ ಮುಚ್ಚಿಡುವ ಪಿತೂರಿ

ಅಶೋಕ ಹಾರನಹಳ್ಳಿಯ ನೇಮಕದ ಹಿಂದೆ ಅವರಪ್ಪ ರಾಮಸ್ವಾಮಿ ಲೋಕ ಶಿಕ್ಷಣ ಟ್ರಸ್ಟಿನೊಳಗೆ ಮಾಡಿರುವ ಕೋಟಿಗಟ್ಟಲೆ ರೂ.ಗಳ ಭ್ರಷ್ಟಾಚಾರ ಮುಚ್ಚಿಡುವ ಪಿತೂರಿ ಇದೆ ಎಂದು ಸಂಯುಕ್ತ ಕರ್ನಾಟಕದ ಪತ್ರಕರ್ತ ಸಿಬ್ಬಂದಿ ಅನುಮಾನ ಪಟ್ಟಿದ್ದಾರೆ.

ಹೆಸರಿಗೆ ಗಾಂಧಿವಾದಿಯಾಗಿದ್ದರೂ ಹಾರನಹಳ್ಳಿ ರಾಮಸ್ವಾಮಿ ಶುದ್ಧ ಹಸ್ತರೇನಲ್ಲ. ಈತ ಒಮ್ಮೆ ಸರ್ಕಾರದ ಹಳೇ ಕಾಂಟೆಸ್ಸಾ ಕಾರೊಂದನ್ನು ಹತ್ತು-ಹದಿನೈದು ಸಾವಿರಕ್ಕೆ ಹರಾಜಿನಲ್ಲಿ ಖರೀದಿಸಿ ಆಮೇಲೆ ಬರೋಬ್ಬರಿ ಎರಡು ಲಕ್ಷ ಬಿಲ್ ಹಾಕಿ ಟ್ರಸ್ಟಿನ ಹಣ ನುಂಗಿದ್ದ. ಇನ್ನೊಮ್ಮೆ ತನ್ನ ಮನೆಯ ಮೂಲೆಯಲ್ಲೇ ಬಿದ್ದಿದ್ದ ಹಳೇ ಕಾರೊಂದನ್ನು ಟ್ರಸ್ಟಿಗೆ ಮಾರಿ ಇನ್ನೊಂದು 3 ಲಕ್ಷ ಗುಳುಂ ಮಾಡಿದ್ದ.

ಇದಕ್ಕಿಂತ ದೊಡ್ಡ ಹಗರಣ ರೆಸಿಡೆನ್ಸಿ ರೋಡಿನ ಸಂಯುಕ್ತ ಕರ್ನಾಟಕದ ಪ್ರೈಂ ಪ್ರಾಪರ್ಟಿಯನ್ನು ಎಂ.ಎಸ್. ರಾಮಯ್ಯನ ಮಗ ಎಂ.ಆರ್. ಜಯರಾಂಗೆ 55 ವರ್ಷಗಳ ಲೀಸಿಗೆ ಕೊಟ್ಟು ಕಮಿಷನ್ ಹೊಡೆದದ್ದು. ಲೀಸ್‌ಗೆ ಯಾಕೆ ಕೊಟ್ರಿ, ಟ್ರಸ್ಟಿನಿಂದಲೇ ಕಾಂಪ್ಲೆಕ್ಸ್ ಕಟ್ಟಿಸಿ ಬಾಡಿಗೆ ದುಡಿಯಬಹುದಿತ್ತಲ್ಲ ಎಂದು ಪ್ರಶ್ನಿಸಿದವನಿಗೆ 'ನಾ ಏನು ಮಾಡ್ಲಿ. ಶಾಮರಾಯರು ಮೊದಲೇ ಅಗ್ರಿಮೆಂಟ್ ಮಾಡಿಕೊಂಡಿದ್ದರು' ಎಂದು ನೆಪ ಹೇಳಿ ತಪ್ಪಿಸಿಕೊಂಡಿದ್ದರು. ಇದಕ್ಕಿಂತ ಘೋರ ವಂಚನೆ ಯಾವುದೆಂದರೆ ಈ ಜಮೀನು ಲೀಸಿನ ವಿಚಾರದಲ್ಲಿ ಕಾನೂನು ಸಲಹೆ ಕೇಳಲು ಹತ್ತು ಲಕ್ಷ ಫೀಸ್ ಪಾವತಿಸಿದ್ದಾರೆ ರಾಮಸ್ವಾಮಿಗಳು.

ಆ ಹಣ ಯಾರಿಗೆ ಕೊಟ್ಟರು ಗೊತ್ತೆ? ತನ್ನ ವಕೀಲ ಪುತ್ರ ಅಶೋಕ್ ಹಾರನಹಳ್ಳಿಗೆ!

ಈ ಜಮೀನು ವಿಚಾರದ ಇನ್ನೊಂದು ವಿಚಿತ್ರ ಏನೆಂದರೆ ಸಿಟಿಯೊಳಗಿದ್ದ ಬೆಲೆ ಬಾಳುವ ಆಸ್ತಿಯನ್ನು ಕಮಿಷನ್ ಆಸೆಗೆ ಪರಭಾರೆ ಮಾಡಿದ ರಾಮಸ್ವಾಮಿ ತಮ್ಮ ಪತ್ರಿಕಾ ಚಟುವಟಿಕೆಗೆ ಬೇಕೆಂದು ಸರ್ಕಾರದಿಂದ ಮೈಸೂರು ರೋಡಿನ ಕುಂಬಳಗೋಡಿನಲ್ಲಿ ಐದು ಎಕರೆ ಜಮೀನು ಮಂಜೂರು ಮಾಡಿಸಿಕೊಂಡಿದ್ದರು. ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲೊಂದು 'ಸುಭಾಷ್ ಭವನ' ಕಟ್ಟಿಸಿ ನೇತಾಜಿ ಸುಭಾಷ್ ಚಂದ್ರ ಬೋಸರ ಹೆಸರಿನಲ್ಲೂ ಸಾರ್ವಜನಿಕರ ಪಾರ್ಕ್ ಕಬಳಿಸಲು ಸ್ಕೆಚ್ ಹಾಕಿದ್ದರು. ಇದೇ ರಾಮಸ್ವಾಮಿಯ ಅಧ್ಯಕ್ಷತೆಯಲ್ಲಿ ಹಾಸನದಲ್ಲಿ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜಿದೆ. ಜೊತೆಗೆ ಬಿ.ಎಡ್., ನರ್ಸಿಂಗ್, ಡಿಗ್ರಿ ಕಾಲೇಜುಗಳೂ ಇವೆ. ವಾಸ್ತವವಾಗಿ ಹಾಸನದ ಲಿಂಗಾಯತರು ಕಟ್ಟಿ ಬೆಳೆಸಿದ ಶಿಕ್ಷಣ ಸಂಸ್ಥೆ ಇದು. ಮಲ್ಲಪ್ಪ ಮಾಜಿ ಎಂಎಲ್‌ಸಿ ಗುರುದೇವ್ ಮುಂತಾದವರ ಶ್ರಮದಿಂದ ಬೆಳೆದ ಈ ಸಂಸ್ಥೆ ಈಗ ಹಾರನಹಳ್ಳಿ ರಾಮಸ್ವಾಮಿಯ ಬ್ರಾಹ್ಮಣ ಕುಟುಂಬದ ಆಸ್ತಿ ಎಂಬಂತಾಗಿ ಹೋಗಿದೆ. ನೂರಾರು ಕೋಟಿ ಮೌಲ್ಯದ ಸಂಸ್ಥೆ ಇದು.

ಇವೆಲ್ಲಾ ವಂಚನೆಗಳನ್ನು ಗಾಂಧಿವಾದಿಯ ಮುಖವಾಡ ಹಾಕಿಕೊಂಡೇ ಮಾಡಿ ಮುಗಿಸಿದವರು ರಾಮಸ್ವಾಮಿ. ಈತ ಲೋಕ ಶಿಕ್ಷಣ ಟ್ರಸ್ಟಿನ ಚೇರ್‌ಮನ್ ಆದ ಮೇಲೆ ಬೆಂಗಳೂರು, ಹುಬ್ಬಳ್ಳಿ ಕಚೇರಿಗಳ ನಡುವೆಯೇ ಫೈಟ್ ನಡೆದು ಕೊನೆಗೆ ಹುಬ್ಬಳ್ಳಿ ಕಚೇರಿ ಡಮ್ಮಿಯಾಗಿ ಹೋಗಿತ್ತು. ಎಲ್ಲಾ ಖರೀದಿ, ಮಾರಾಟ, ಹಣಕಾಸಿನ ವ್ಯವಹಾರಗಳು ಬೆಂಗಳೂರಿಗೆ ಶಿಫ್ಟ್ ಆದವು. ಆಗ ಕೆಲದಿನ ಐಪಿಎಸ್ ಅಧಿಕಾರಿ ರಾಮಾನುಜನ್ ಟ್ರಸ್ಟಿನ ಹಣಕಾಸು ಅಧಿಕಾರಿಯಾಗಿದ್ದರು. ನಂತರ ಅವರು ಅಮೆರಿಕಗೆ ಹೋದ ಮೇಲೆ ಹಾರನಹಳ್ಳಿ ರಾಮಸ್ವಾಮಿ ಉಪಾಯ ಮಾಡಿ ತಮ್ಮ ನೆಂಟನಾದ ನಾರಾಯಣಮೂರ್ತಿಯನ್ನು ಹಣಕಾಸು ವಿಭಾಗಕ್ಕೆ ತಂದು ಕೂರಿಸಿಬಿಟ್ಟರು. ಈಗ ಅದೇ ನಾರಾಯಣಮೂರ್ತಿ ಇಡೀ ಟ್ರಸ್ಟಿನ ಸೆಕ್ರೆಟರಿಯಾಗಿಬಿಟ್ಟಿದ್ದಾನೆ. ಅತ್ತ ಹುಬ್ಬಳ್ಳಿಯಲ್ಲಿರುವ ಸೀನಿಯರ್ ಗೋಪಾಲ್ ಜಾಯಿಂಟ್ ಸೆಕ್ರೆಟರಿಯಾಗಿ ಮೂಲೆಗುಂಪಾಗಿದ್ದಾನೆ.

ಈಗ ರಾಮಸ್ವಾಮಿ ನಿಧನಾ ನಂತರ ಟ್ರಸ್ಟಿನ ಅಧ್ಯಕ್ಷರು ಯಾರಾಗಬೇಕೆಂಬ ಲಾಬಿ ಶುರುವಾಗಿದೆ. ಬೆಂಗಳೂರು ಗ್ಯಾಂಗ್, ಹುಬ್ಬಳ್ಳಿ ಗ್ಯಾಂಗ್‌ಗಳೆಂಬ ವಿಭಜನೆಯೂ ಕಾಣಿಸಿಕೊಂಡಿದೆ. ಹಿರಿಯ ಟ್ರಸ್ಟಿ ಎಂ.ವಿ. ರಾಜಶೇಖರನ್‌ರಿಗೆ ಅವಕಾಶ ಸಿಗುವ ಸಾಧ್ಯತೆಗಳಿವೆ. ಆದೇನೆ ಆಗಲಿ ಆದರೆ ಯಾವ ಅರ್ಹತೆ ಇದೆಯೆಂದು ಅಶೋಕ್ ಹಾರನಹಳ್ಳಿಯನ್ನು ಟ್ರಸ್ಟಿಯಾಗಿ ಆರಿಸಲಾಗಿದೆ?

ಆಳುವ ಬಿಜೆಪಿ ಸರ್ಕಾರದ ನಾಯಕರ ಕೈವಾಡ ಇದರಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ?

ಯಡ್ಡಿ ಸರ್ಕಾರ ಬಂದ ಮೇಲೆ ಅಶೋಕ ಹಾರನಹಳ್ಳಿಯನ್ನು ಸರಕಾರದ ಅಡಿಷನಲ್ ಅಡ್ವೋಕೇಟ್ ಜನರಲ್ ಆಗಿ ನೇಮಿಸಿಕೊಳ್ಳಲಾಯಿತು. ಈಗ ಲೋಕ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿಯಾಗಿ ತೂರಿಸಲಾಗಿದೆ. ಈ ವಿಪ್ಲವ ಗದ್ದಲದಲ್ಲಿ ಸಂಯುಕ್ತ ಕರ್ನಾಟಕದ ಸರ್ಕ್ಯುಲೇಶನ್ ಕುಸಿದು ಹೋಗಿದೆ.

■ ಪಾರ್ವತೀಶ

ಸಂಯುಕ್ತ ಕರ್ನಾಟಕ ನಾಶಕ್ಕೆ ಸಂಘ ಪರಿವಾರ ಹುನ್ನಾರ

ಕರ್ನಾಟಕ ಮಾತ್ರವಲ್ಲ; ದೇಶದ ಅತ್ಯಂತ ಹಿರಿಯ ಪತ್ರಿಕೆ 'ಸಂಯುಕ್ತ ಕರ್ನಾಟಕ'ವನ್ನು ನುಂಗಿ ನಾಶ ಮಾಡಲು ಸಂಘ ಪರಿವಾರ ಹುನ್ನಾರ ನಡೆಸಿದೆಯೇ? ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಭಯಾನಕ ಸತ್ಯವೊಂದು ಗೋಚರಿಸುತ್ತದೆ. ಎಪ್ಪತ್ತೆಂಟು ವರ್ಷಗಳ ಹಿಂದೆ ಉತ್ತರ ಕರ್ನಾಟಕದ ಜನತೆ ಪೈಸೆಗೆ ಪೈಸೆ ಸೇರಿಸಿ ಕಟ್ಟಿದ ಈ ಪತ್ರಿಕೆಯನ್ನು ಲೋಕಶಿಕ್ಷಣ ಟ್ರಸ್ಟ್ ಎಂಬ ಸಾರ್ವಜನಿಕ ಟ್ರಸ್ಟ್ ಪ್ರಕಟಿಸುತ್ತಿದೆ. ಎಂಭತ್ತು ವರ್ಷಗಳ ಹಿಂದೆ ಬಿಜಾಪುರ ಜಿಲ್ಲೆಯ ಹಿರಿಯ ಗಾಂಧಿವಾದಿಗಳಾದ ಮೊಹರೆ ಹಣಮಂತರಾವ್ ಮತ್ತು ರಂಗನಾಥ್ ದಿವಾಕರ್ ಸಾರಥ್ಯ ವಹಿಸಿ ಆರಂಭಿಸಿದ ಸಂಯುಕ್ತ ಕರ್ನಾಟಕ ತೀರ ಇತ್ತೀಚಿನವರೆಗೆ ಅಂದರೆ 2001 ರ ವರೆಗೆ ಗಾಂಧಿ-ನೆಹರೂರ ಜಾತ್ಯತೀತ ತತ್ವಾದರ್ಶಗಳನ್ನೇ ತನ್ನ ಧೋರಣೆಯಾಗಿರಿಸಿಕೊಂಡಿತ್ತು. ಅನೇಕ ಬಾರಿ ಆಡಳಿತ ವರ್ಗ ಹಾಗೂ ಸಂಪಾದಕರು ಬದಲಾದರೂ ಪತ್ರಿಕೆಯ ಧೋರಣೆ ಬದಲಾಗಿರಲಿಲ್ಲ.



ಆದರೆ ಇತ್ತೀಚಿಗೆ ನಿಧನರಾದ ಹಿರಿಯ ಕಾಂಗ್ರೆಸ್ ನಾಯಕ ಎಂಬ ಪ್ರತೀತಿ ಹೊಂದಿದ್ದ ಹಾರನಹಳ್ಳಿ ರಾಮಸ್ವಾಮಿ ಅವರು ಲೋಕಸಭಾ ಟ್ರಸ್ಟ್‌ನ ಯಜಮಾನಿಕೆ ವಹಿಸಿಕೊಂಡ ನಂತರ ಸಂಯುಕ್ತ ಕರ್ನಾಟಕದ ಸ್ವರೂಪವೇ ಬದಲಾಯಿತು. ಗಾಂಧೀಜಿ ತತ್ವಾದರ್ಶಗಳಿಂದ ಮಾತ್ರವಲ್ಲ ನಿಷ್ಪಕ್ಷಪಾತ ಸುದ್ದಿ ನೀಡುವ ವೃತ್ತಿಧರ್ಮಕ್ಕೂ ತಿಲಾಂಜಲಿ ನೀಡಿ ಸಂಘ ಪರಿವಾರದ ಕರಪತ್ರವಾಯಿತು.

ಹಾರನಹಳ್ಳಿಯವರನ್ನು ಸುತ್ತುವರಿದ ಆರ್‌ಎಸ್‌ಎಸ್ ಗ್ಯಾಂಗ್ ಅವರನ್ನು ಮಾತ್ರವಲ್ಲ ಪತ್ರಿಕೆಯನ್ನು ದಾರಿತಪ್ಪಿಸಿತು. ಸಂಘ ಪರಿವಾರದ ಚಿಂತನ ಚಳುವಳಿ ಎಂದೇ ಹೆಸರಾದ ಬಾಬು ಕೃಷ್ಣಮೂರ್ತಿ, ನವರತ್ನ ರಾಜಾರಾಂ, ಸೀತಾರಾಂ, ಇವರೆಲ್ಲ ಸೇರಿ ಹಿರಿಯ ಗಾಂಧಿವಾದಿಗೆ ಹಿಂದೂತ್ವದ ಅಮಲನ್ನೇರಿಸಿ ಪತ್ರಿಕೆಯನ್ನು ಕೈವಶ ಮಾಡಿಕೊಂಡರು.

ಪತ್ರಿಕೆ ವೃತ್ತಿಧರ್ಮದಿಂದ ದೂರವಾಗುತ್ತಿರುವ ಬಗ್ಗೆ ಅಸಮಾಧಾನಗೊಂಡ ವಿ.ಎನ್. ಸುಬ್ಬರಾವ್, ಜಯಶೀಲ ರಾವ್‌ರಂಥ ಹಿರಿಯ ಪತ್ರಕರ್ತರು ಸಂಪಾದಕತ್ವ ತ್ಯಜಿಸಬೇಕಾಗಿ ಬಂತು. ಪತ್ರಿಕೆಗೆ ಅಂಕಣ ಬರೆಯುತ್ತಿದ್ದ ಹಿರಿಯ ಚಿಂತಕರಾದ ಸಿ.ಆರ್. ಕೃಷ್ಣರಾವ್ ಹಾಗೂ ಕೆ.ಎಸ್. ಪಾರ್ಥಸಾರಥಿ ಅವರ ಲೇಖನಗಳನ್ನು ತಿರಸ್ಕರಿಸಲಾಯಿತು. ಇದರ ಬದಲಾಗಿ ಅಪ್ಪಟ ಕೋಮುವಾದಿ ವಿಷ ತುಂಬಿದ ಕೆ.ಎಸ್. ನಾರಾಯಣಾಚಾರ್ಯ, ನವರತ್ನ ರಾಜಾರಾಮ್‌ರ ಪ್ರಚೋದನಾಕಾರಿ ಲೇಖನಗಳು ಮುಖಪುಟದಲ್ಲಿ ಪ್ರಕಟವಾಗತೊಡಗಿದವು. ಲೋಕಶಿಕ್ಷಣ ಟ್ರಸ್ಟ್‌ನ ಉಳಿದ ಟ್ರಸ್ಟಿಗಳೂ ಈ ಬಗ್ಗೆ ಬಾಯಿ ಬಿಡಲಿಲ್ಲ. ಹೀಗಾಗಿ ಕ್ರಮೇಣ 'ಸಂಯುಕ್ತ ಕರ್ನಾಟಕದ' ಪ್ರಸಾರ ಸಂಖ್ಯೆ ಕುಸಿಯುತ್ತ ಬಂದು ಉತ್ತರ ಕರ್ನಾಟಕದಲ್ಲಿ ಮೊದಲ ಸ್ಥಾನದಲ್ಲಿದ್ದ ಪತ್ರಿಕೆ ಈಗ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

'ವಿಕ್ರಮ'- 'ಹೊಸ ದಿಗಂತ'ಗಳಂಥ ಆರ್‌ಎಸ್‌ಎಸ್‌ನ ಅಧಿಕೃತ ಮುಖಪತ್ರಗಳೇ ಪ್ರಕಟಿಸಲು ಅಸಹ್ಯಪಡುವ ಲೇಖನಗಳು ಸಂಯುಕ್ತ ಕರ್ನಾಟಕದ ಘನತೆಯನ್ನು ಕುಗ್ಗಿಸಿದವು. ನಾರಾಯಣಾಚಾರ್ಯ ಎಂಬ ಉದ್ಯಾನಮದ ಆಚಾರ್ಯರಂಥ ಮನುವಾದಿಗಳು ಪ್ರತಿ ಸೋಮವಾರದ ತಮ್ಮ ಅಂಕಣದಲ್ಲಿ ಜಾತ್ಯತೀತವಾದಿಗಳನ್ನು ನಿಂದಿಸಿ ನೆಹರೂವಾದಿಗಳನ್ನು ಅತ್ಯಂತ ಹೊಲಸು ಭಾಷೆಯಲ್ಲಿ ಬರೆಯತೊಡಗಿದರು. ಡಾ. ಅನಂತಮೂರ್ತಿ, ಗಿರೀಶ್ ಕಾರ್ನಾಡರನ್ನು ದೇಶದ್ರೋಹಿಗಳೆಂಬಂತೆ ಬರೆಯತೊಡಗಿದರು. ಇದನ್ನೆ ರಾಷ್ಟ್ರವಾದ ಎಂದು ಹಾರನಹಳ್ಳಿ ಮೂಲಕ ಸಂಘ ಪರಿವಾರದವರು ಹೇಳಿಸತೊಡಗಿದರು. ಕಾಂಗ್ರೆಸ್ ನಾಯಕರೂ ಸಹ ತಮ್ಮ ಪಕ್ಷದ ಹಿರಿಯ ನಾಯಕನೊಬ್ಬ ಈ ರೀತಿ ವರ್ತಿಸುತ್ತಿರುವ ಬಗ್ಗೆ ಆಕ್ಷೇಪಿಸಲಿಲ್ಲ.

ಕೊನೆಗೆ ಆರ್‌ಎಸ್‌ಎಸ್ ಪಿತೂರಿ ಎಲ್ಲಿಯವರೆಗೆ ಹೋಯಿತೆಂದರೆ ಲೋಕ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿಯಾಗಿದ್ದ ಧಾರವಾಡದ ಹಿರಿಯ ವಕೀಲ ಜೆ.ಎಂ. ಪಾಟೀಲರು ನಿಧನರಾದ ನಂತರ ಅವರ ಸ್ಥಾನದಲ್ಲಿ ಧಾರವಾಡದ ಬಿಜೆಪಿ ಸಂಸದ ಹಾಗೂ ಕಟ್ಟಾ ಸಂಘ ಪರಿವಾರಿ ಪ್ರಹ್ಲಾದ್ ಜೋಶಿಯನ್ನು ಟ್ರಸ್ಟಿಯನ್ನಾಗಿ ಮಾಡುವಲ್ಲಿ ಯಶಸ್ವಿಯಾಯಿತು. ಅಸ್ವಸ್ಥರಾಗಿದ್ದ ವಯೋವೃದ್ಧ ಹಾರನಹಳ್ಳಿಗೆ ಏನು ನಡೆಯುತ್ತಿದೆ ಎಂದು ಗೊತ್ತಾಗಲೇ ಇರಲಿಲ್ಲ.

ಆರ್‌ಎಸ್‌ಎಸ್ ತನ್ನ ಸ್ವಯಂಸೇವಕರನ್ನೆಲ್ಲ ಪತ್ರಿಕೆಯ ಸಂಪಾದಕೀಯ ವಿಭಾಗದ ಉನ್ನತ ಸ್ಥಾನಗಳಿಗೆ ತಂದಿದೆ. ಬಾಬುಕೃಷ್ಣಮೂರ್ತಿ ಅವರನ್ನು 'ಕರ್ಮವೀರ' ಪತ್ರಿಕೆ ಸಂಪಾದಕರನ್ನಾಗಿ ಮಾಡಲಾಯಿತು. ರವಿ ಬೆಳಗೆರೆ ಕಾಲದಲ್ಲಿ ಎಪ್ಪತ್ತು ಸಾವಿರ ದಾಟಿದ್ದ 'ಕರ್ಮವೀರ' ಪ್ರಸಾರ ಸಂಖ್ಯೆ ಈಗ 15 ಸಾವಿರಕ್ಕೆ ಕುಸಿದಿದೆ.

ಈಗ ಹಾರನಹಳ್ಳಿ ನಿಧನರಾಗಿದ್ದಾರೆ. ಸಂಯುಕ್ತ ಕರ್ನಾಟಕ 'ಇನ್ನು ಮುಂದೆಯೂ ಸಂಘ ಪರಿವಾರದ ಕರಪತ್ರವಾಗಿ ಮುಂದುವರೆಯುತ್ತದೆಯೆ? ಹಾಗೆ ಮುಂದುವರೆದರೆ ಪ್ರಸಾರ ಸಂಖ್ಯೆ ಕುಸಿದು ಅದು ಸಂಪೂರ್ಣ ನಾಶವಾದರೆ ಹೊಣೆ ಯಾರು? ಹಾರನಹಳ್ಳಿ ಅವರ ನಿಧನದ ನಂತರವೂ ಮುಖಪುಟದಲ್ಲಿ ಪ್ರಕಟವಾದ ನವರತ್ನ ರಾಜಾರಾಮ್ ಲೇಖನದಲ್ಲಿ ವರುಣ್ ಗಾಂಧಿಯ ಹೇಳಿಕೆಯನ್ನು ಸಮರ್ಥಿಸಿ ಭಗವದ್ಗೀತೆಯಲ್ಲಿರುವುದನ್ನೆ ಆತ ಹೇಳಿದ್ದಾನೆ ಎಂದು ವ್ಯಾಖ್ಯಾನಿಸಲಾಗಿದೆ. 'ಹೊಡೆಯಲು ಎತ್ತಿದ ಕೈಯನ್ನು ಕತ್ತರಿಸಿ ಹಾಕು' ಎಂದು ಬಾಲಗಂಗಾಧರ ತಿಲಕರು ಗೀತಾರಹಸ್ಯದಲ್ಲಿ ಹೇಳಿದ್ದನ್ನೇ ವರುಣ್ ಗಾಂಧಿ ಪುನರುಚ್ಚರಿಸಿದ್ದಾರೆ, ತಪ್ಪೇನಿದೆ? ಎಂದು ನವರತ್ನ ಪ್ರಶ್ನಿಸಿದೆ. ನಾರಾಯಣಾಚಾರ್ಯರು ಎಂದಿನಂತೆ ಕಮ್ಯುನಿಸ್ಟರ ವಿರುದ್ಧ, ಸಮಾಜವಾದಿಗಳ ವಿರುದ್ಧ ವಿಷ ಕಾರಿದ್ದಾರೆ.

ಲೋಕಶಿಕ್ಷಣ ಟ್ರಸ್ಟ್‌ನಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಎಂ.ವಿ. ರಾಜಶೇಖರನ್ ಅವರೂ ಸೇರಿದಂತೆ ವಿವೇಚನಾಶೀಲ ಧರ್ಮದರ್ಶಿಗಳಿದ್ದಾರೆ. ಅವರು ತಕ್ಷಣ ಎಚ್ಚರ ವಹಿಸಿದರೆ 'ಸಂಯುಕ್ತ ಕರ್ನಾಟಕ'ವನ್ನು ಕಾಪಾಡಬಹುದು. ಅಲ್ಲಿ ಒಳಸೇರಿದ ಬಾಬುಕೃಷ್ಣಮೂರ್ತಿ, ಜಗದೀಶ ಕೊಪ್ಪ, ಅನಿಲಕುಮಾರರಂಥ ಕೋಮುವಾದಿ ವಿಷಜಂತುಗಳನ್ನು ಹೊರದಬ್ಬಬೇಕು. ನಾರಾಯಣಾಚಾರ್ಯ ಹಾಗೂ ರಾಜಾರಾಮ್‌ರಂಥವರ ಲೇಖನಗಳನ್ನು ಧರ್ಮದರ್ಶಿಗಳೇ ಒಮ್ಮೆ ಓದಿ ಅವುಗಳನ್ನು ಸ್ಥಗಿತಗೊಳಿಸಬೇಕು. ಇಲ್ಲವಾದರೆ ಜನತೆ ಕಟ್ಟಿದ ನಾಡಿನ ಹಿರಿಯ ಪತ್ರಿಕೆಯ ಅವನತಿಯ ಅಪಖ್ಯಾತಿಗೆ ಈ ಹಿರಿಯರು ಗುರಿಯಾಗಬೇಕಾಗುತ್ತದೆ.

-ಓರ್ವ ನೊಂದ ನೌಕರ
ಸಂಯುಕ್ತ ಕರ್ನಾಟಕ

ರಾಜಧಾನಿಯಲ್ಲಿ ರಂಗೇರಿದ ಕಣ:

ಕಾಂಗ್ರೆಸ್ ಕರಾಮತ್ತು ಬೆವರುತ್ತಿರುವ ಬಿಜೆಪಿ


ರಾಜಧಾನಿ ಬೆಂಗಳೂರಿನ ಮೂರು ಲೋಕಸಭಾ ಕ್ಷೇತ್ರಗಳ ಫಲಿತಾಂಶವು ವಿವಿಧ ಪಕ್ಷಗಳು ತಮ್ಮ ಅಭ್ಯರ್ಥಿಗಳ ಹೆಸರು ಬಹಿರಂಗಪಡಿಸುತ್ತಿದ್ದಂತೆಯೇ ಪ್ರಕಟಗೊಂಡಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಆದರೆ ಈ ವಿಶ್ಲೇಷಣೆಗಳು ಉಲ್ಟಾ-ಪಲ್ಟಾ ಆಗುವ ಲಕ್ಷಣಗಳು ಕಂಡುಬರುತ್ತಿವೆ. ಮೂರು ಕ್ಷೇತ್ರಗಳಲ್ಲಿ ತುರುಸಿನ ಪೈಪೋಟಿ ನಡೆಯುತ್ತಿದ್ದು, ಅಭ್ಯರ್ಥಿಗಳು ಬೆವರಿಳಿಸುತ್ತಿದ್ದಾರೆ. ಆದರೆ ಮತದಾರರು ಮಾತ್ರ ಎಂದಿನಂತೆ ತಣ್ಣಗಿದ್ದಾರೆ. ಬೆಂಗಳೂರಿನ ಪ್ರಮುಖ ಸಮಸ್ಯೆಗಳೆಂದರೆ ಸ್ವಚ್ಛತೆ, ಕುಡಿಯುವ ನೀರು ಮತ್ತು ರಸ್ತೆ (ಅಭಿವೃದ್ಧಿ ಮತ್ತು ಟ್ರಾಫಿಕ್). ಈ ಸಮಸ್ಯೆ ಬಗೆಹರಿಸುವಲ್ಲಿ ಸಂಸದರ ಪಾತ್ರವೇಷ್ಟಿರುತ್ತದೆ ಎಂಬುದು ಮತದಾರರಿಗೆ ಬೇಡವಾದ ವಿಷಯ. ಈ ಬಗ್ಗೆ ತಿಳಿವಳಿಕೆ ಹೊಂದಿದವರಿಗೆ ಓಟ್ ಹಾಕಿ ಗೊತ್ತಿಲ್ಲ! ಇದು ಎಲ್ಲ ರಾಜಕೀಯ ಪಕ್ಷಗಳ ಮುಂದಿರುವ ದೊಡ್ಡ ಸವಾಲು.

ಗ್ರಾಮೀಣ ಪ್ರದೇಶದ ಮತದಾರರಂತೆ ಈ ಕ್ಷೇತ್ರಗಳ ಜನತೆಗೆ ರಾಜಕೀಯದ ಬಗ್ಗೆ ಹೆಚ್ಚು ಆಸಕ್ತಿ ಇಲ್ಲ, ಇದ್ದರೂ ಹರಟೆ ಹೊಡೆಯಲು, ರಾಜಕೀಯ ಕದನಗಳಿಗೆ ಇಳಿಯಲು ಟೈಮಿಲ್ಲ. ಹೀಗಾಗಿ ಮತದಾರರ ಅಭಿಪ್ರಾಯವೇನು ಎಂಬುದು ಮತಪೆಟ್ಟಿಗೆ ಸೇರಿದ ಮತ ಪತ್ರದಂತೆಯೇ ನಿಗೂಢ. ಆದರೂ ನಮ್ಮ ರಾಜಕಾರಣಿಗಳು ಸುಮ್ಮನಿಲ್ಲ. ದುಡ್ಡು ಕೊಟ್ಟು ಒಂದಿಷ್ಟು ಜನರನ್ನು ಸೇರಿಸಿ, ಜಯಕಾರ ಹಾಕಿಸಿಕೊಂಡು ಪ್ರಚಾರ ಮಾಡುತ್ತಲೇ ಇದ್ದಾರೆ. ಮಾಧ್ಯಮದ 'ಸ್ನೇಹಿತರ'ನ್ನು ಕರೆಸಿಕೊಂಡು ತಾವು ಹೇಗೆ ಪ್ರಚಾರ ಮಾಡುತ್ತಿದ್ದೇವೆ, ಮತದಾರರೆಷ್ಟು ಅದ್ಭುತವಾಗಿ ಪ್ರತಿಕ್ರಿಯಿಸುತ್ತಿದ್ದಾರೆ ಎಂದು ರೈಲು ಬಿಟ್ಟು, ಮಾರನೆ ದಿನದ ಪತ್ರಿಕೆಗಳ ಜಾಗ ತುಂಬಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ನಿಜವಾಗಿಯೂ ಒಂದಿಷ್ಟು ಚುನಾವಣೆಯ ಕಾವು ಏರಿದ್ದರೆ ಅದು ಈ ಹೈಟೆಕ್ ಸಿಟಿಯಲ್ಲಿರುವ ಸುಮಾರು 800 ಸ್ಲಂಗಳಲ್ಲಿ. ಅಲ್ಲಿ ಮತ ವ್ಯಾಪಾರ ಬಿರುಸಿನಿಂದ ನಡೆದಿದೆ. ಆದರೆ ದುಡ್ಡಿದ್ದವರಿಗೆ 'ಮತ' ಸಿಗುತ್ತದೆಯೆಂಬ ಯಾವ ಗ್ಯಾರಂಟಿಯೂ ಇಲ್ಲ.

ಬೆಂಗಳೂರು ದಕ್ಷಿಣ: ಅನಂತುಗೆ ಹೆಚ್ಚಿದ ಆತಂಕ

ರಾಜ್ಯದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರ ಎನಿಸಿದ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸ್ಪರ್ಧಿಸುವುದಿಲ್ಲ ಎಂದು ಪ್ರಕಟಿಸುತ್ತಿದ್ದಂತೆಯೇ ನಿರಾಳರಾಗಿದ್ದ ಬಿಜೆಪಿಯ ಅನಂತ ಕುಮಾರ್‌ಗೆ ಈಗ ಕೃಷ್ಣ ಬೈರೇಗೌಡ ನೀರಿಳಿಸುತ್ತಿದ್ದಾರೆ. ಸದ್ದಿಲ್ಲದೆ ಕ್ಷೇತ್ರದಲ್ಲಿ ಓಡಾಡುತ್ತಾ, ಯುವಕರನ್ನು ಸಂಘಟಿಸುತ್ತಾ, ಅನಂತು ಬೀಳಿಸಲು ಗುಂಡಿ ತೋಡುತ್ತಿದ್ದಾರೆ.

ಈ ಕ್ಷೇತ್ರಕ್ಕೆ 'ಆಡಳಿತ ಪಕ್ಷ ವಿರೋಧಿ ಕ್ಷೇತ್ರ' ಎಂಬ ಹೆಸರಿದೆ. ಈ ಕ್ಷೇತ್ರದಲ್ಲಿನ ಪ್ರಜ್ಞಾವಂತ ಮತದಾರರು ಆಡಳಿತದಲ್ಲಿರುವ ಪಕ್ಷವನ್ನು ತಿರಸ್ಕರಿಸುತ್ತಾ ಬಂದಿದ್ದು, ಈ ಬಾರಿ ಬಿಜೆಪಿಯನ್ನು ಸೋಲಿಸಲಿದ್ದಾರೆ ಎಂಬ ಮಾತು ರಾಜಕೀಯ ವಲಯದಲ್ಲಿ ಚಾಲ್ತಿಯಲ್ಲಿದೆ.


ಅನಂತಕುಮಾರ್

ಗೋವಿಂದರಾಜ ನಗರ, ವಿಜಯ ನಗರ, ಚಿಕ್ಕಪೇಟೆ, ಬಸವನಗುಡಿ, ಪದ್ಮನಾಭನಗರ, ಬಿಟಿಎಂ ಲೇಔಟ್, ಜಯನಗರ ಹಾಗೂ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳು ಈ ಲೋಕಸಭಾ ಕೇತ್ರದ ವ್ಯಾಪ್ತಿಗೆ ಬರುತ್ತವೆ. ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದೆ. ಗೋವಿಂದರಾಜ ನಗರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದ ಸೋಮಣ್ಣ ಈಗ ಬಿಜೆಪಿ ಸೇರಿದ್ದಾರೆ. ಹೀಗಾಗಿ ಇದು ಬಿಜೆಪಿಯ ಹಿಡಿತದಲ್ಲಿರುವ ಕ್ಷೇತ್ರ ಎಂದು ಮೇಲ್ನೋಟಕ್ಕೆ ಅನಿಸಿದರೂ, ಕಾಂಗ್ರೆಸ್ ಸಮಬಲದ ಹೋರಾಟ ನೀಡುತ್ತಾ ಬಂದಿದೆ ಎಂದು ಅಂಕಿ-ಸಂಖ್ಯೆಗಳು ಹೇಳುತ್ತಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಈ ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ಪಡೆದ ಮತಗಳ ಸಂಖ್ಯೆ 3,63,985, ಕಾಂಗ್ರೆಸ್ 3,32,712 ಮತ್ತು ಜಾತ್ಯತೀತ ಜನತಾದಳ 1,07,246. ಅಂದರೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಅಂತರ ಕೇವಲ 31,273 ಮತಗಳು. ಕೃಷ್ಣ ಬೈರೇಗೌಡ ಒಕ್ಕಲಿಗರಾಗಿದ್ದು, ಜೆಡಿಎಸ್ ಬ್ರಾಹ್ಮಣ ಅಭ್ಯರ್ಥಿ ಪ್ರೊ. ರಾಧಾಕೃಷ್ಣ ಅವರನ್ನು ಕಣಕ್ಕಿಳಿಸಿರುವುದರಿಂದ ಜೆಡಿಎಸ್‌ನ ಸುಮಾರು 50 ಸಾವಿರಕ್ಕೂ ಹೆಚ್ಚು ಮತ ಕಾಂಗ್ರೆಸ್ ಪಾಲಾಗಲಿದೆ. ಇದರಿಂದ ಕೃಷ್ಣ ಬೈರೇಗೌಡ ಗೆಲುವು ಖಚಿತ ಎಂದು ವಿಶ್ಲೇಷಿಸಲಾಗುತ್ತಿದೆ.

ಈ ಕ್ಷೇತ್ರ ಸಾಂಪ್ರದಾಯಿಕವಾಗಿ ಒಕ್ಕಲಿಗ (ಪ್ರಬಲವಾಗಿದ್ದಾರೆ) ಹಾಗೂ ಬ್ರಾಹ್ಮಣರ ಹಿಡಿತದಲ್ಲಿದೆ. ಜೊತೆಗೆ ಲಿಂಗಾಯತರು, ಮುಸ್ಲಿಮರು, ದಲಿತರು ಸ್ವಲ್ಪ ಪ್ರಮಾಣದಲ್ಲಿದ್ದಾರೆ. ಬಿಜೆಪಿ ಸಾಲಿಡ್ಡಾಗಿ ಲಿಂಗಾಯತರ ಓಟು ಪಡೆದರೂ, ದಲಿತರು ಮತ್ತು ಮುಸ್ಲಿಮರು ಕಾಂಗ್ರೆಸ್ ಕೈ ಬಿಡುವುದಿಲ್ಲ ಎಂದು ರಾಜಕೀಯ ವಿಶ್ಲೇಷಣೆಗಳು ನಡೆದಿವೆ. ಈ ಲೆಕ್ಕಾಚಾರದಿಂದ ನಿದ್ರೆಗೆಡಿಸಿಕೊಂಡಿರುವ ಅನಂತು ಯಡ್ಡಿ ಮೇಲೆ ಒತ್ತಡ ಹೇರಿ, ದೊಡ್ಡ ರಾಜಕಾರಣಿಯಂತೆ ಪೋಸ್ ನೀಡುತ್ತಿರುವ ಸೋಮಣ್ಣನನ್ನು ಬಿಜೆಪಿಗೆ ಸೇರಿಸಿಕೊಂಡಿದ್ದಾರೆ.

"ನನಗೆ ಅಧಿಕಾರ ನೀಡುವುದು ಗ್ಯಾರಂಟಿಯಾದರೆ ಮಾತ್ರ ಪಕ್ಷ ಸೇರುತ್ತೇನೆ, ಇಲ್ಲವಾದಲ್ಲಿ ಚುನಾವಣೆ ಮುಗಿಯುವವರೆಗೂ ಹತ್ತಿರ ಸುಳಿಯಬೇಡಿ" ಎಂದು ಬಿಜೆಪಿ ನಾಯಕರಿಗೆ ಹೇಳಿದ್ದ ಸೋಮಣ್ಣ ಯಡ್ಡಿ ಮತ್ತು ಅನಂತು ಹ್ಯಾಪುಮೋರೆ ನೋಡಲಾಗದೇ ಮೊನ್ನೆ ಪಕ್ಷ ಸೇರಿದ್ದಾರೆ ಎಂದು ಅವರ ಬೆಂಬಲಿಗರು ಆಡಿಕೊಳ್ಳುತ್ತಿದ್ದಾರೆ. ಸೋಮಣ್ಣ ಅನಂತುವನ್ನು ರಕ್ಷಿಸುತ್ತಾರೋ, ಅಥವಾ ಯಡ್ಡಿಯೊಂದಿಗೆ ಸೇರಿ ಕುತಂತ್ರ ನಡೆಸಿ ಅವರನ್ನು ಮಕಾಡೆ ಮಲಗಿಸುತ್ತಾರೋ ಮೇ. 16ರಂದು ಗೊತ್ತಾಗಲಿದೆ. ಮುಖ್ಯವಾಗಿ "ಸೋಮಣ್ಣ ಬಿಜೆಪಿ ಸೇರಿದ್ದರೂ ಬೆರಳೆಣಿಕೆಯಷ್ಟು ಮಂದಿ ಅವರೊಂದಿಗೆ ಹೋಗಿದ್ದಾರೆ. ಪಕ್ಷದ ಕಾರ್ಯಕರ್ತರು ನಮ್ಮೊಂದಿಗೇ ಇದ್ದಾರೆ" ಎನ್ನುತ್ತಾರೆ ಕಾಂಗ್ರೆಸ್ ನಾಯಕರು. ಇದು ಸತ್ಯ ಕೂಡ.


ಕೃಷ್ಣಬೈರೇಗೌಡ

ಅನಂತು ಕೋಟೆಗೆ ಕನ್ನ!

ಜೆಡಿಎಸ್‌ನಿಂದ ಸ್ಪರ್ಧಿಸಿರುವ ಪ್ರಚಾರದ ಹುಚ್ಚನ ಪ್ರೊ. ರಾಧಾಕೃಷ್ಣ ಮತ್ತು ಪಕ್ಷೇತರರಾಗಿ ಕಣಕ್ಕಿಳಿದಿರುವ ಉದ್ಯಮಿ ಗೋಪಿನಾಥ್ ಅನಂತು ಮತ ಕೋಟೆಗೆ ಕನ್ನ ಹಾಕುವುದು ಗ್ಯಾರಂಟಿಯಾಗಿದೆ.

ಸುರಾನಾ ಕಾಲೇಜಿನ ಪ್ರಾಂಶುಪಾಲರಾಗಿದ್ದ 'ಖ್ಯಾತ ಲೇಖಕ' ಪ್ರೊ. ರಾಧಾಕೃಷ್ಣ ಬೀದಿ ಬೀದಿ ಅಲೆಯುತ್ತಾ, ಬ್ರಾಹ್ಮಣರ ಮತ್ತು ಮೇಲ್ವರ್ಗದ ಮತಗಳನ್ನು ಸೆಳೆಯುವ ಕಸರತ್ತು ನಡೆಸಿದ್ದಾರೆ. ಇವರ ಜೊತೆಗೆ ಮಾಜಿ ಮುಖ್ಯಮಂತ್ರಿ ಮಗ ರಾಜೇಶ್ ಗುಂಡೂರಾವ್ ಮತ್ತು ಮಾಜಿ ಕ್ರಿಕೆಟಿಗ ದೊಡ್ಡ ಗಣೇಶ್ ಪ್ರಚಾರದಲ್ಲಿ ಸಕ್ರಿಯರಾಗಿದ್ದು, ಜೆಡಿಎಸ್‌ನ ಸಾಂಪ್ರದಾಯಿಕ ಮತಗಳಿಗಿಂತ ಬೇರೆ ಮತಗಳೇ ಇವರ ಬುಟ್ಟಿ ತುಂಬುವ ಸಾಧ್ಯತೆಗಳಿವೆ.

ಇತ್ತ ಏರ್ ಡೆಕ್ಕನ್ ಎಂಬ ಡಕೋಟ ವಿಮಾನ ಹಾರಿಸಿ ದುಡ್ಡು ಮಾಡಿಕೊಂಡಿರುವ ಕ್ಯಾಪ್ಟನ್ ಗೋಪಿನಾಥ್ ಕೂಡ ಅನಂತು ಕೊರಳಿಗೆ ಹಗ್ಗ ಹಾಕುವುದು ಖಚಿತವಾಗಿದೆ. ಬಿಜೆಪಿ ಕೋಮುವಾದಿ, ನೈತಿಕ ಪೊಲೀಸ್‌ಗಿರಿ ಮಾಡುವ ಪಕ್ಷ ಎಂದೆಲ್ಲಾ ಆ ಪಕ್ಷವನ್ನು ಬೈಯುತ್ತಾ ಪ್ರಚಾರ ನಡೆಸಿರುವ ಗೋಪಿನಾಥ್ ಬಿಜೆಪಿಯನ್ನು ಅನಿವಾರ್ಯವಾಗಿ ಬೆಂಬಲಿಸುತ್ತಾ ಬಂದಿದ್ದ ಉದ್ಯಮಿಗಳ, ವ್ಯಾಪಾರಸ್ಥರ, ಮೇಲ್ವರ್ಗದವರ ಬುರುಡೆಗೇ ಕೈಹಾಕುತ್ತಿದ್ದಾರೆ. ಒಟ್ಟಾರೆ ಕ್ಯಾಪ್ಟನ್ ಈ ಕ್ಷೇತ್ರ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು ಎಂದು ನಿರೀಕ್ಷಿಸಲಾಗುತ್ತಿದೆ.

ಕೃಷ್ಣ ಬ್ರಾಹ್ಮಣರ ಅಭ್ಯರ್ಥಿಯೂ ಹೌದು!

ಕುತೂಹಲದ ವಿಷಯವೆಂದರೆ ಒಕ್ಕಲಿಗ ಜಾತಿಗೆ ಸೇರಿದ ಕೃಷ್ಣ ಬೈರೇಗೌಡರ ಪರವಾಗಿ ಬ್ರಾಹ್ಮಣರ ದೊಡ್ಡ ಗುಂಪೊಂದು 'ಇವ ನಮ್ಮವ' ಎಂದು ಪ್ರಚಾರ ನಡೆಸುತ್ತಿರುವುದು! ಕೃಷ್ಣ ಬೈರೇಗೌಡ ವಿದೇಶದಲ್ಲಿ ಓದುತ್ತಿದ್ದಾಗ ಬೆಂಗಳೂರಿನ ಮೊದಲ ಮೇಯರ್ ಆಗಿದ್ದ ಎಚ್.ಎಸ್. ಸೀತಾರಾಂ (ಎಚ್.ಎಸ್. ದೊರೆಸ್ವಾಮಿ ಸಹೋದರ)ರ ಮೊಮ್ಮಗಳು ಮೀನಾಕ್ಷಿಯನ್ನು ಪ್ರೀತಿಸಿ ಮದುವೆಯಾಗಿದ್ದಾರೆ.. ಇದರಿಂದಾಗಿ ರಾಜಕೀಯದಲ್ಲಿ ಹೆಸರು ಮಾಡಿರುವ ದೊಡ್ಡ ಕುಟುಂಬವೊಂದು ಕೃಷ್ಣರನ್ನು ನಮ್ಮವ ಎಂದು ಹೇಳುತ್ತಾ ಮತ ನೀಡುವಂತೆ ಪ್ರಚಾರ ನಡೆಸಿದೆ. ಸೀತಾರಾಂರ ಪತ್ನಿ 89ರ ಹರೆಯದ ರತ್ನಮ್ಮ ಬೀದಿಗಿಳಿದಿದ್ದಾರೆ. ಇನ್ನು ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಉದ್ಯೋಗದಲ್ಲಿರುವ ಕೃಷ್ಣ ಬೈರೇಗೌಡರ ಪತ್ನಿ ಮೀನಾಕ್ಷಿ ಈ ಕ್ಷೇತ್ರಕ್ಕೆ ಅವಶ್ಯಕವಾಗಿರುವ ಹೈಟೆಕ್ ಪ್ರಚಾರದ ನೇತೃತ್ವ ವಹಿಸಿದ್ದಾರೆ.

ಕಾಂಗ್ರೆಸ್ ನಾಯಕರೂ ಒಗ್ಗಟ್ಟಿನಿಂದ ಹೋರಾಟಕ್ಕಿಳಿದಿದ್ದು, ಕ್ಷೇತ್ರದಲ್ಲಿ ಬಿರುಸಿನ ಪ್ರಚಾರ ನಡೆಸಿದ್ದಾರೆ. ಈ ವ್ಯವಸ್ಥಿತ ಪ್ರಚಾರದಿಂದ ಸಂಘಪರಿವಾರ ಬೆಚ್ಚಿಬಿದ್ದಿದೆ. ಅನಂತು ದಗೆಯನ್ನು ರಾಮನವಮಿಯ ಪಾನಕ ಕಡಿಮೆ ಮಾಡುವ ಸೂಚನೆಗಳಿಲ್ಲ! ■

ಒಕ್ಕಲಿಗರ ಪ್ರಾಬಲ್ಯವಿರುವ ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಇಬ್ಬರು ನಾಯಕರ ನಡುವೆ ಜಂಗೀಕುಸ್ತಿ ನಡೆಯುತ್ತಿದೆ. ಬಿಜೆಪಿಯಲ್ಲಿ ಈ ಕ್ಷೇತ್ರದಿಂದ ಕಣಕ್ಕಿಳಿಸಲು ಅಭ್ಯರ್ಥಿಯೇ ಇರಲಿಲ್ಲ, ಹೀಗಾಗಿ ಕೊನೆಗಳಿಗೆಯಲ್ಲಿ ಹತ್ತು ಕೋಟಿ ಕೊಟ್ಟು ಕಾಂಗ್ರೆಸ್‌ನಲ್ಲಿದ್ದ ಡಿ.ಬಿ.ಚಂದ್ರೇಗೌಡ ಎಂಬ 'ವೈಟ್ ಕಾಲರ್' ಗೌಡನನ್ನು ಪರ್ಚೇಸ್ ಮಾಡಿ ಕಣಕ್ಕಿಳಿಸಿದೆ. ಹೀಗಾಗಿ ಮೇಲ್ನೋಟಕ್ಕೆ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕರಿಬ್ಬರ ನಡುವಿನ ಪೈಪೋಟಿಯಂತೆಯೇ ಕಾಣುತ್ತಿದೆ. ಕಾಂಗ್ರೆಸ್‌ನ ಜಾಫರ್ ಷರೀಫ್ "ನೀವು ಚಿಕ್ಕಮಗಳೂರಿನ ಗೌಡ ಆದರೆ ನಾನು ಬೆಂಗಳೂರಿನ ಗೌಡ" ಎಂದು ಹಳೆಯ ಗೆಳೆಯನ ಎದುರು ತೊಡೆತಟ್ಟಿ ನಿಂತಿದ್ದಾರೆ.

ಈ ಲೋಕಸಭಾ ಕ್ಷೇತ್ರದಲ್ಲಿನ ಎಂಟು ವಿಧಾನ ಸಭಾಕ್ಷೇತ್ರಗಳ ಪೈಕಿ ಐದು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದೆ. ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿದೆ. ಗೆದ್ದವರಲ್ಲಿ ನಾಲ್ವರು ಒಕ್ಕಲಿಗ ಸಮುದಾಯದವರು. ಹೀಗಾಗಿ ಇದೊಂದು ಒಕ್ಕಲಿಗರ ಪ್ರಾಬಲ್ಯವಿರುವ ಕ್ಷೇತ್ರ ಎಂಬುದು ಸ್ಪಷ್ಟ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಈ ಎಂಟು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಹೆಚ್ಚುಕಡಿಮೆ ಸಮಾನವಾಗಿ ಓಟು ಹಂಚಿಕೊಂಡಿವೆ. ಕಾಂಗ್ರೆಸ್ 3,80,963 ಮತಗಳನ್ನು ಪಡೆದಿದ್ದರೆ, ಬಿಜೆಪಿ 3,86,082 ಮತಗಳನ್ನು ಪಡೆದಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಸಮಬಲದ ಹೋರಾಟವಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ ಜೆಡಿಎಸ್ ಕೂಡ 1,45,294 ಮತಗಳನ್ನು ಪಡೆದಿದ್ದು ನಿರ್ಣಾಯಕ ಪಾತ್ರ ವಹಿಸಲಿದೆ.

ಷರೀಫ್ ಹೆಗಲ ಮೇಲೆ ಗೌಡರ ಕೈ


ಜಾಫರ್ ಷರೀಫ್ ನಿಜವಾಗಿಯೂ ಬೆಂಗಳೂರು ಸೆಂಟ್ರಲ್‌ನಿಂದ ನಿಲ್ಲಲು ಬಯಸಿದ್ದರು. ಆದರೆ ಅನಿವಾರ್ಯವಾಗಿ ಉತ್ತರಕ್ಕೆ ಶಿಫ್ಟ್ ಆಗಬೇಕಾಗಿ ಬಂದಿತು. ಮಾಜಿ ಪ್ರಧಾನಿ ದೇವೇಗೌಡರೊಂದಿಗೆ ಸತತ ಸಂಪರ್ಕದಲ್ಲಿರುವ ಷರೀಫ್ ಗೌಡರ ಸಲಹೆ ಪಡೆದೇ ಈ ಕ್ಷೇತ್ರದಲ್ಲಿ ನಿಂತಿದ್ದಾರೆ. ಹೀಗಾಗಿ ಒಕ್ಕಲಿಗರ ಪ್ರಾಬಲ್ಯವಿರುವ ಈ ಕ್ಷೇತ್ರದಲ್ಲಿ ಷರೀಫ್ ಸಾಹೇಬರನ್ನು ಗೆಲ್ಲಿಸುವ ಜವಾಬ್ದಾರಿ ದೇವೇಗೌಡರದ್ದು ಎನ್ನುತ್ತಿದ್ದಾರೆ ಕಾಂಗ್ರೆಸ್ ನಾಯಕರು.


ಬಿಜೆಪಿ ಅಭ್ಯರ್ಥಿ ಒಕ್ಕಲಿಗನೆಂಬ ಕಾರಣಕ್ಕೆ ಒಂದಿಷ್ಟು ಕಾಂಗ್ರೆಸ್ ಮತಗಳು ಆಚೆಗೆ ಹೋದರೂ ಜೆಡಿಎಸ್‌ನ


▶▶▶

ಬೆಂಗಳೂರು ಕೇಂದ್ರ:
ಜಮೀರ್ ಬಸ್ಸಿಗೆ ಬ್ರೇಕ್ ಹಾಕುವವರೇ ಇಲ್ಲ!

ಅಲ್ಪಸಂಖ್ಯಾತರ ಪ್ರಾಬಲ್ಯವಿರುವ ಬೆಂಗಳೂರು ...ಟ್ರಲ್ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಕಣಕ್ಕಿಳಿ...ರುವ ಜಮೀರ್ ಅಹ್ಮದ್ ಗೆಲ್ಲುವ ...ದುರೆ. ಕಳೆದ ಬಾರಿ ಬಿಜೆಪಿಯಿಂದ ...ಣಕ್ಕಿಳಿದು ಗೆದ್ದಿದ್ದ ಸೂಪರ್ ಕಾಪ್ ...ಂಗ್ಲಿಯಾನ ಈಗ ಕಾಂಗ್ರೆಸ್ ಅಭ್ಯರ್ಥಿ. ...ದರೆ ಗೆಲ್ಲುವ ಸಿದ್ಧತೆ ಅವರಲ್ಲಿ ಕಾಣಿಸುತ್ತಿಲ್ಲ.


ಸಾಂಗ್ಲಿಯಾನ


ಮೋಹನ್


ಜಮೀರ್


ಕ್ಷೇತ್ರದಾದ್ಯಂತ ಚುರುಕಿನಿಂದ ಓಡಾಡು...ರುವ ಜಮೀರ್ ಅಹ್ಮದ್ ಗೆಲುವು ಖಚಿತ ...ಾಗಿದೆ ಎಂದು ಕ್ಷೇತ್ರದ ಮತದಾರರು ...ಾತನಾಡಿಕೊಳ್ಳುತ್ತಿದ್ದಾರೆ. ಆದರೆ ಅದೇನು ...ಷ್ಟು ಸುಲಭದ ಮಾತಲ್ಲ. ಅಲ್ಪಸಂಖ್ಯಾತರ ...ತಗಳನ್ನು ಸಾಂಗ್ಲಿಯಾನ ಮತ್ತು ಜಮೀರ್ ...ಂಚಿಕೊಂಡಲ್ಲಿ, ತಾನು ಗೆಲ್ಲಬಹುದು ...ಂದು ಬಿಜೆಪಿಯ ಪಿ.ಸಿ. ಮೋಹನ್ ...ದು ಕುಳಿತಿದ್ದಾರೆ. ಹೀಗಾಗಿ ಅಲ್ಪ...ಖ್ಯಾತರು ಎಚ್ಚರಿಕೆಯ ತೀರ್ಮಾನ ತೆಗೆದು...ಂಡಲ್ಲಿ ಮಾತ್ರ ಜಾತ್ಯತೀತ ಶಕ್ತಿಗೆ ಬಲ ...ಲಿದೆ.

ಸರ್ವಜ್ಞನಗರ, ಸಿ.ವಿ.ರಾಮನ್ ನಗರ, ...ಾಜಿನಗರ, ಶಾಂತಿನಗರ, ಚಾಮರಾಜ...ಪೇಟೆ, ರಾಜಾಜಿನಗರ, ಗಾಂಧಿನಗರ ಮತ್ತು ...ಹದೇವಪುರ ವಿಧಾನಸಭಾ ಕ್ಷೇತ್ರಗಳು ... ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಕಳೆದ ...ಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ...ತ್ತು ಬಿಜೆಪಿ ಹೆಚ್ಚು ಕಡಿಮೆ ಸಮಾನ ...ತಗಳನ್ನು ಪಡೆದಿವೆ. ಒಟ್ಟು ಎಂಟು ...ತ್ರಗಳಲ್ಲಿ ಬಿಜೆಪಿ 3,15,179 ಮತ...ವನ್ನು ಪಡೆದಿದ್ದರೆ, ಕಾಂಗ್ರೆಸ್ 3,16,068 ...ತಗಳನ್ನು ಪಡೆದಿದೆ. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವು ಖಚಿತ ಎಂದು ಹೇಳಬಹುದು. ಆದರೆ ಕಳೆದ ಬಾರಿ ಕಾಂಗ್ರೆಸ್ ಬೆಂಬಲಿಸಿದ್ದ ಮುಸ್ಲಿಮರೆಲ್ಲಾ ಈ ಬಾರಿ ಜೆಡಿಎಸ್‌ನತ್ತ ವಾಲಿರುವುದರಿಂದ ಜಮೀರ್ ಗೆಲುವು ಖಚಿತ ಎಂದು ವಿಶ್ಲೇಷಿಸಲಾಗುತ್ತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಡೆದ ಮತ ಕೇವಲ ಅಲ ಸಾವಿರ.


ಜಾಫರ್ ಷರೀಫ್ ಮತ್ತು ದೇವೇಗೌಡರ ನಡುವಿನ ಹೊಂದಾಣಿಕೆಯಂತೆ ಷರೀಫ್ ಈ ಕ್ಷೇತ್ರದಲ್ಲಿ ಜಮೀರ್ ಪರ ಒಳಗೊಳಗೇ ಪ್ರಚಾರ ನಡೆಸಲಿದ್ದಾರೆಂಬ ಮಾತು ಇದೆ. ಸಾಂಗ್ಲಿಯಾನ ಬಿಜೆಪಿಯಿಂದ ಬಂದವರಾಗಿರುವುದರಿಂದ ಅವರ ಬಗ್ಗೆ ಅಲ್ಪಸಂಖ್ಯಾತರಿಗೆ ಅಷ್ಟೊಂದು ಭರವಸೆ ಇಲ್ಲ. ಹೀಗಾಗಿ ಒಟ್ಟಾಗಿ ಜಮೀರರನ್ನೇ ಬೆಂಬಲಿಸಿದರೆ ಆಶ್ಚರ್ಯವಿಲ್ಲ. ಚರ್ಚುಗಳ ಮೇಲೆ ಸಂಘ ಪರಿವಾರದ ದಾಳಿ, ನೈತಿಕ ಪೊಲೀಸ್‌ಗಿರಿ, ಮಹಿಳೆಯರ ಮೇಲಿನ ಹಲ್ಲೆ ಮತ್ತಿತರ ವಿಷಯಗಳು ಈ ಬಾರಿಯ ಚುನಾವಣೆಯಲ್ಲಿ ಕೆಲಸ ಮಾಡ ಲಿದ್ದು, ಮೇಲ್ವರ್ಗದ ಜನ ಕೂಡ ರಾಜ್ಯವನ್ನು ತಾಲಿಬಾನಿಕರಣಗೊಳಿಸುವ ಚೆಡ್ಡಿಗಳ ವಿರುದ್ಧ ಸಿಟ್ಟಿಗೆದ್ದಿದ್ದಾರೆ. ಹೀಗಾಗಿ ಅವರೆಲ್ಲ ಜಾತ್ಯತೀತ ಶಕ್ತಿಗಳಿಗೆ ಬೆಂಬಲ ನೀಡುವುದು ಖಚಿತ ಎನ್ನಲಾಗುತ್ತಿದೆ.

ಬಿಜೆಪಿ ಕಳೆದ ಬಾರಿ ಗೆದ್ದಿದ್ದ ಈ ಕ್ಷೇತ್ರವನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದೆ. ಮತದಾರರಿಗೆ ಆಮಿಷ ಒಡ್ಡುತ್ತಿದೆ. ಇದರ ಪ್ರಯತ್ನ ಎಷ್ಟು ಯಶಸ್ವಿಯಾಗಲಿದೆ ಎಂಬುದು ಚುನಾವಣೆ ನಂತರವೇ ಗೊತ್ತಾಗಲಿದೆ. ■

...ೆಂಗಳೂರು ಉತ್ತರ: ...ೆಂಗ್ಳೂರು ಗೌಡ ವರ್ಸಸ್ ...ಿಕ್ಕಮಗ್ಳೂರು ಗೌಡ


ಚಂದ್ರೇಗೌಡ

...ತಗಳು ಷರೀಫ್ ಪಾಲಾಗುವುದರಿಂದ ಷರೀಫ್ ...ಹೇಬರು ದೆಲ್ಲಿಗೆ ಹಾರಲೇನೂ ಅಡ್ಡಿ ಇಲ್ಲ ಎಂಬ ...ಶ್ಲೇಷಣೆ ನಡೆಯುತ್ತಿದೆ. ದೇವೇಗೌಡರು ...ಮಾತ್ರಕ್ಕೆ ಸುರೇಂದ್ರ ಬಾಬು ಎಂಬ ...ಟ್ಯಧಿಪತಿಯನ್ನು ಕಣಕ್ಕಿಳಿಸಿದ್ದು, ಆತ ...ಲಿಕಾ ಬಕ್ರಾ' ಆಗುವುದು ಗ್ಯಾರಂಟಿ. ...ನೆಯ ಕ್ಷಣದಲ್ಲಿ ದೇವೇಗೌಡರು ...ಗೊಳಗೇ ಈ ಕ್ಷೇತ್ರದಲ್ಲಿ ಹಳೆಯ ಗೆಳೆಯ ...ೀಫ್ ಪರವಾಗಿ ಪ್ರಚಾರ ನಡೆಸಲಿದ್ದು ...ಬಿ. ಚಂದ್ರೇಗೌಡ ಮತ ಭ್ರಷ್ಟರಾಗಿ ...ನೆಸೇರುವುದೂ ಅಷ್ಟೇ ಗ್ಯಾರಂಟಿ!


ವಿಮಲಾಗೌಡ

ಚಂದ್ರೇಗೌಡರನ್ನು ಪಕ್ಷಕ್ಕೆ ಕರೆದುಕೊಂಡು ...ದು ಅಭ್ಯರ್ಥಿ ಮಾಡಿರುವುದು ಸ್ಥಳೀಯ ಬಿಜೆಪಿ ...ರ್ಯಕರ್ತರನ್ನು ಕೆರಳಿಸಿದೆ. "ಮೊನ್ನೆ ಮೊನ್ನೆಯವರೆಗೂ ...ವನ್ನು ಬೈದಾಡಿಕೊಂಡು ಓಡಾಡುತ್ತಿದ್ದ ಈ ಹಗಲು ...ಮುಕನನ್ನು ಕರೆತಂದು ನಿಲ್ಲಿಸುವುದಕ್ಕಿಂತ ಪಕ್ಷದಲ್ಲಿ ಬೇರೆ ...ಾರೂ ನಾಯಕರಿರಲಿಲ್ಲವೇ" ಎಂದು ...ರ್ಯಕರ್ತರು ಎರಡನೇ ಹಂತದ ನಾಯಕರು ...ಸುತ್ತಿದ್ದಾರೆ.



ಬಿಜೆಪಿ ನಾಯಕಿ ವಿಮಲಾ ಗೌಡರಂತೂ ...ದ್ದು ಕೊಟ್ಟು, ಚಂದ್ರೇಗೌಡರನ್ನು ...ರುವುದಕ್ಕಿಂತ ನನಗೇ ದುಡ್ಡು ಕೊಟ್ಟು ...ಕ್ಕಿಳಿಸಿದ್ದರೆ ಗೆಲ್ಲುತ್ತಿರಲಿಲ್ಲವೇ" ಎಂದು ...ದ ವರಿಷ್ಠರನ್ನು ನೇರವಾಗಿ ಪ್ರಶ್ನಿಸಿದ್ದಾರೆ. ...ದ್ದರೆ ಬಿಜೆಪಿಯಲ್ಲಿ ಅಸಮಾಧಾನದ ಅಲೆ ...ನ್ನು ಇದು ಚಂದ್ರೇಗೌಡರಿಗೆ ಒಳಹೊಡೆತ ...ಬಿಂಬ ಸಾಧ್ಯತೆಗಳಿವೆ.

...ಭುಗಿಲೆದ್ದ ಮತದಾರರ ಆಕ್ರೋಶ

ಈ ಕ್ಷೇತ್ರಕ್ಕೆ ಬೆಂಗಳೂರು ಉತ್ತರ ಭಾಗದ ಗ್ರಾಮೀಣ ...ಪ್ರದೇಶವೂ ಸೇರಿಕೊಂಡಿದ್ದು, ಅಲ್ಲಿನ ರೈತರು ರಾಜ್ಯ ಸರ್ಕಾರದ ವಿರುದ್ಧ ದಂಗೆ ಎದ್ದಿದ್ದಾರೆ. "ಎಲ್ಲದಕ್ಕೂ ಬಿಜೆಪಿಯೇ ಪರಿಹಾರ ಎಂದು ಓಟು ಪಡೆದು ಹೋದ ಇವರು ಪರಿಹರಿಸಿದ್ದಾದರೂ ಏನನ್ನು?" ಎಂದು ಪ್ರಶ್ನಿಸುತ್ತಿದ್ದಾರೆ.


ಚನ್ನೇನಹಳ್ಳಿಯಲ್ಲಿ ನಿವೇಶನ ರಹಿತರಿಗೆ ಮಂಜೂರಾಗಿದ್ದ ಜಮೀನನ್ನು ಸರ್ಕಾರ ಆರ್‌ಎಸ್‌ಎಸ್‌ಗೆ ನೀಡಿರುವುದು ಈ ಭಾಗದ ಮಹಿಳೆಯರನ್ನು ಕೆರಳಿಸಿದೆ. ಕೆ. ಗೊಲ್ಲಹಳ್ಳಿ ಪಂಚಾಯತಿ ವ್ಯಾಪ್ತಿಯ ರೈತರ 1900 ಎಕರೆ ಜಮೀನನ್ನು ನೈಸ್ ಸಂಸ್ಥೆಗೆ ಕೊಡಿಸಿದ ಸರ್ಕಾರ ಸರಿಯಾದ ಪರಿಹಾರ ನೀಡದಿರುವುದು ಈ ಭಾಗದ ರೈತರನ್ನು ಕೆರಳಿಸಿದೆ. ಮೊನ್ನೆ ಇಲ್ಲಿನ ಜನರ ಮತ ಕೇಳಲು ಬಂದ ಸಚಿವೆ ಶೋಭಾ ಕರಂದ್ಲಾಜೆ, ಅಭ್ಯರ್ಥಿ ಡಿ.ಬಿ.ಚಂದ್ರೇಗೌಡರ ನೀರಿಳಿಸಿ ಕಳುಹಿಸಿದ್ದಾರೆ. ಗೊಲ್ಲಹಳ್ಳಿಯಲ್ಲಿ ಬಿಜೆಪಿಯ ಪ್ರಚಾರ ಸಭೆಯನ್ನೇ ರದ್ದು ಪಡಿಸದ ಘಟನೆಯೂ ನಡೆದಿದೆ.


ರಾಜ್ಯ ಸರ್ಕಾರ ವಿರುದ್ಧದ ಆಕ್ರೋಶ ಈ ಭಾಗದಲ್ಲಿ ಹೆಚ್ಚುತ್ತಿದ್ದು ಇದು ಬಿಜೆಪಿಯ ಸೋಲಿಗೆ ಕಾರಣವಾಗುವುದು ಗ್ಯಾರಂಟಿ. ಈ ಕ್ಷೇತ್ರದಲ್ಲಿ ಪಕ್ಷವನ್ನು ಗೆಲ್ಲಿಸುವ ಜವಾಬ್ದಾರಿಯನ್ನು ಸಚಿವರಾದ ಕಟ್ಟಾ ಸುಬ್ರಮಣ್ಯ ನಾಯ್ಡು ಮತ್ತು ಶೋಭಾ ಕರಂದ್ಲಾಜೆಗೆ ಪಕ್ಷ ವಹಿಸಿದೆ. ಹೀಗಾಗಿ ಡಿಬಿಸಿಯನ್ನು ಕಟ್ಟಿಕೊಂಡು ಇವರಿಬ್ಬರು ಕ್ಷೇತ್ರದಲ್ಲಿ ಅಲೆಯುತ್ತಿದ್ದಾರೆ. ತಣ್ಣಗೆ ಪ್ರಚಾರ ನಡೆಸಿರುವ ಷರೀಫ್ ನೆಮ್ಮದಿಯಾಗಿದ್ದಾರೆ.


● ವರದಿಗಾರ

ಶಿವಮೊಗ್ಗ: ಬಂಗಾರಿ-ಗೌಡ ಭಾಯಿ ಭಾಯಿ
ಬೇಳೂರು-ಹಾಲಪ್ಪ ಕೈಯಿ ಕೈಯಿ

ಶಿವಮೊಗ್ಗದಲ್ಲಿ ಯಡ್ಡಿ ಮಗನನ್ನು ಮಣ್ಣುಮುಕ್ಕಿಸಲು ಕಾಂಗ್ರೆಸ್, ಜೆಡಿಎಸ್ ಇಬ್ಬರೂ ಜಂಟಿಯಾಗಿಯೇ ಫೀಲ್ಡಿಗಿಳಿದಿದ್ದಾರೆ. ಇತ್ತ ಬಿಜೆಪಿ ಅಭ್ಯರ್ಥಿ ರಾಘವೇಂದ್ರನ ನಾಮಪತ್ರ ಸಲ್ಲಿಕೆಯ ದಿನವೇ ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ಬಂಡಾಯದ ದನಿ ಎತ್ತಿರುವುದು ಬಿಜೆಪಿ ಪಾಳಯದಲ್ಲಿ ಮಹಾಸ್ಫೋಟಕ್ಕೆ ಕಾರಣವಾಗಿದೆ. ದುಡ್ಡಿನ ದೌಲತ್ತಿನಲ್ಲೇ ನೂರಾರು ಜನರನ್ನು 'ಆಪರೇಷನ್ ಕಮಲ'ಕ್ಕೆ ಯಡ್ಡಿ ಕೆಡವುತ್ತಾ ಭಾರೀ ಸದ್ದು ಮಾಡುತ್ತಿರುವಾಗಲೇ ಬಂಗಾರಿ ಮಾತ್ರ ಅಷ್ಟೇ ಸೈಲೆಂಟಾಗಿ ಏಳೆಂಟು ಸಾವಿರ ಜನರ ಮೆರವಣಿಗೆಯಲ್ಲಿ ಬಂದು ನಾಮಪತ್ರ ಸಲ್ಲಿಸಿದ್ದಾರೆ. ಬಂಗಾರಪ್ಪನ ತಂತ್ರಗಾರಿಕೆಯನ್ನೇ ತಿಳಿಯದ ಬಿಜೆಪಿಯಲ್ಲಿ ನಿಧಾನ ತೊಳ್ಳೆನಡುಕ ಶುರುವಾಗಿದೆ.


ಹಾಲಪ್ಪ


ಬಂಗಾರಪ್ಪ


ರಾಘವೇಂದ್ರ

ಬಂ-ಗೌಡ ಮೈತ್ರಿ

ಕಳೆದ ಲೋಕಸಭಾ ಚುನಾವಣೆಯಲ್ಲಿ ದೇವೇಗೌಡರು ಶಿಕಾರಿಪುರ ಕ್ಷೇತ್ರದಲ್ಲಿ ಬಂಗಾರಪ್ಪನನ್ನು ಬೆಂಬಲಿಸಿದ್ದರು. ಯಡ್ಡಿಯ ಸೊಕ್ಕಡಗಬೇಕೆಂದರೆ ಈ ಚುನಾವಣೆಯಲ್ಲಿ 'ಯಡ್ಡಿ' ಮಗನನ್ನು ಸೋಲಿಸಬೇಕು ಎಂಬ ಯೋಚನೆಯಲ್ಲಿ ಈ ಬಾರಿಯೂ ಜೆಲ್ಲೆಯಲ್ಲಿ ಬಂಗಾರಿಗೆ ಫುಲ್ ಸಪೋರ್ಟ್ ನೀಡಿದ್ದಾರೆ. ಅದಕ್ಕಾಗಿ, ಮತಗಳು ಒಡೆಯಬಾರದೆಂಬ ಕಾರಣಕ್ಕೆ ಜೆಡಿಎಸ್‌ನಿಂದ ಅಭ್ಯರ್ಥಿಯನ್ನು ನಿಲ್ಲಿಸಿಲ್ಲ. ಬದಲಾಗಿ ನಾಮಪತ್ರ ಸಲ್ಲಿಸುವಾಗ ಮೆರವಣಿಗೆಯಲ್ಲಿ ಕಾಂಗ್ರೆಸ್, ಜೆಡಿಎಸ್ ಎರಡರ ಬಾವುಟಗಳೂ ಹಾರಾಡುತ್ತಿದ್ದವು.

ಬೇಳೂರು V/s ಹಾಲಪ್ಪ

ಮಹತ್ವದ ಬೆಳವಣಿಗೆಯೊಂದರಲ್ಲಿ ಬೇಳೂರು ಗೋಪಾಲಕೃಷ್ಣ ಮತ್ತು ಸಚಿವ ಹಾಲಪ್ಪ ನಡುವಿನ ವೈಮನಸ್ಯ ಎಂಟರಂದೇ ಸ್ಫೋಟಗೊಂಡಿದೆ. ಅಂದು ಸಾಗರದಲ್ಲಿ ನಡೆದ ಬಿಜೆಪಿ ಪಕ್ಷದ ಸಭೆಯಲ್ಲಿ ಕಾಂಗ್ರೆಸ್, ಜೆಡಿಎಸ್‌ನ ನೂರಾರು ಕಾರ್ಯಕರ್ತರ ಸೇರ್ಪಡೆ ಕಾರ್ಯಕ್ರಮಕ್ಕೆ ಬೇಳೂರು ಊರಲ್ಲೇ ಇದ್ದರೂ ಬರಲಿಲ್ಲ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಕೆ. ದಿವಾಕರ್, ಸಚಿವರಾದ ಬಸವರಾಜ ಬೊಮ್ಮಾಯಿ, ಹಾಲಪ್ಪ ಗಂಟೆಗಟ್ಟಲೆ ಕಾದಿದ್ದರೂ ಬೇಳೂರು ಬರಲಿಲ್ಲ. ಮಧ್ಯಾಹ್ನ ಆನಂದಪುರದಲ್ಲಿ ನಡೆಯಬೇಕಿದ್ದ ಯಡ್ಡಿ ಕಾರ್ಯಕ್ರಮವೂ ರದ್ದಾಯಿತು.

ಇಷ್ಟು ಮಾತ್ರವಲ್ಲ, ನೂರಾರು ಗೋಪಾಲಕೃಷ್ಣ ಬೆಂಬಲಿಗರು ಹರತಾಳ್ ಹಾಲಪ್ಪರಿಗೆ, ಬಿಜೆಪಿಗೆ, ಯಡಿಯೂರಪ್ಪನಿಗೆ ಧಿಕ್ಕಾರ ಕೂಗಿದ್ದಾರೆ. ಯಡ್ಡಿಯೇನಾದರೂ ಸ್ಥಳಕ್ಕಾಗಮಿಸಿದ್ದರೆ ವೇದಿಕೆಯೇರಿ ಗಲಾಟೆಯನ್ನೇ ಮಾಡುವ ಸಿದ್ಧತೆಯಲ್ಲಿದ್ದ ಯುವಕರು ಹಾಲಪ್ಪನಿಗೆ ಮನಬಂದಂತೆ ಬೈದಿದ್ದಾರೆ. ಮಾತ್ರವಲ್ಲ ರಾಘವೇಂದ್ರ ನಾಮಪತ್ರ ಸಲ್ಲಿಕೆಯ ದಿನ ಸಾಗರ ಬಿಜೆಪಿ ಕಚೇರಿ ಬಂದ್ ಆಗಿದೆ. ಬೇಳೂರು ಬೆಂಗಳೂರಿಗೆ ಕಳಚಿಕೊಂಡಿದ್ದಾರೆ.

ಮೂಗು ತೂರಿಸುವ ಹಾಲಪ್ಪ

ಹಾಗೆ ನೋಡಿದರೆ ಹಾಲಪ್ಪ ಬೇಳೂರು ನಡುವಿನ ವೈಮನಸ್ಯ ಕದ್ದುಮುಚ್ಚಿಯೇನೂ ನಡೆಯುತ್ತಿಲ್ಲ. ಈಗಾಗಲೇ ಹಲವಾರು ಸಲ ಬಹಿರಂಗವಾಗಿಯೇ ನಡೆದಿದೆ. ಇದಕ್ಕೆ ಪ್ರಮುಖ ಕಾರಣ ಗೋಪಾಲಕೃಷ್ಣನ ಕ್ಷೇತ್ರದಲ್ಲೂ ಹಾಲಪ್ಪ ಮೂಗು ತೂರಿಸುತ್ತಿರುವುದು. ಕಳೆದ ಚುನಾವಣೆಯಲ್ಲಿ ಸೊರಬ ಕ್ಷೇತ್ರದಿಂದ ಹಾಲಪ್ಪ ಗೆದ್ದು ಬಂದಿದ್ದನಾದರೂ ಅದು ಅವನ ವೈಯಕ್ತಿಕ ಸಾಮರ್ಥ್ಯದ ಗೆಲುವಾಗಿರಲೇ ಇಲ್ಲ. ಬೇಳೂರು ಪ್ರಭಾವವಿದ್ದ ತಾಳಗುಪ್ಪ ಕ್ಷೇತ್ರ ಸೊರಬಕ್ಕೆ ಸೇರ್ಪಡೆಯಾಗಿದ್ದು, ಬಂಗಾರಪ್ಪನ ಇಬ್ಬರು ಮಕ್ಕಳ ಕಚ್ಚಾಟ ಹಾಲಪ್ಪನಿಗೆ ವರವಾಗಿದ್ದು ಅವನ ಗೆಲುವಿಗೆ ಕಾರಣವಾಗಿತ್ತು. ಕಳೆದ ಸಲದಂತೆಯೇ ಮುಂದಿನ ಸಲವೂ ಗೆಲುವು ಅಸಾಧ್ಯ ಎಂಬುದು ಹಾಲಪ್ಪನಿಗೆ ಮನವರಿಕೆಯಾಗಿದೆ. ಆದ್ದರಿಂದಲೇ ಯಡ್ಡಿ ಪುತ್ರ ರಾಘುವಿನೊಂದಿಗೂ, ಸಲಹೆಗಾರ ಕೆ. ದಿವಾಕರನೊಂದಿಗೂ ಒಳ್ಳೆ ಸಂಬಂಧ ಇಟ್ಟುಕೊಂಡ ಹಾಲಪ್ಪ ತನ್ನ ಕ್ಷೇತ್ರಕ್ಕಿಂತಲೂ ಸಾಗರದಲ್ಲಿ ಮೂಗು ತೂರಿಸಲಾರಂಭಿಸಿದ್ದ. ಇದು ಬೇಳೂರಿಗೆ ಮೊದಲಿಂದಲೂ ಸಹಿಸಲಾಗಿರಲಿಲ್ಲ. ಅದರ ಜೊತೆಗೆ, ಹಾಲಪ್ಪನಿಗಿಂತಲೂ ಹೆಚ್ಚು ಜನಬೆಂಬಲ ಇರುವ ತನ್ನನ್ನು ಬಿಟ್ಟು ಹಾಲಪ್ಪನಿಗೆ ಸಚಿವ ಸ್ಥಾನ ನೀಡಿದ್ದು ಗೋಪಾಲಕೃಷ್ಣನಿಗೆ ಭಯಂಕರ ಉರಿ ತರಿಸಿತ್ತು. ಸಾಗರದಲ್ಲಿ ಬೇಳೂರು ಕಂಡರಾಗದ ಬಿಜೆಪಿಯ ಕೆಲವರೂ ಇಬ್ಬರ ಈ ಜಗಳವನ್ನು ಉಪಯೋಗಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಹಾಗಾಗಿಯೇ ಬೇಳೂರು ಕೆಲಬಾರಿ ಬಹಿರಂಗವಾಗಿಯೇ ಹಾಲಪ್ಪನಿಗೆ ಆವಾಜ್ ಹಾಕಿದ್ದೂ ಇದೆ. "ಅಂತಾ ಬಂಗಾರಪ್ಪನಿಗೇ ಕೇರ್ ಮಾಡದ ನನಗೆ ಈ ಹಾಲಪ್ಪ ಯಾವ ಲೆಕ್ಕ" ಅಂತ ಹದಿನೈದು ದಿನದ ಹಿಂದೆ ಕಿಡಿಕಾರಿದ್ದರು.

ಸರಿಯಾದ ಸಮಯ ನೋಡಿ....

ಇದೀಗ ಸರಿಯಾದ ಸಮಯ ನೋಡಿಯೇ ಬೇಳೂರು ಬಿಜೆಪಿ ಗಾಡಿಯ ಗಾಲಿಗೆ ಕುಂಟೆ ಇಟ್ಟಿದ್ದಾರೆ. ಭಾರೀ ಉತ್ಸಾಹದಲ್ಲಿದ್ದ ಯಡ್ಡಿ ಚೆಡ್ಡಿಯೊಳಗೆ ತೊಣಚಿ ಹೊಕ್ಕಂತಾಗಿದೆ. ಹಾಗಂತ ಯಡ್ಡಿ ಈಗ ಇಬ್ಬರನ್ನೂ ಕಡೆಗಣಿಸುವ ಸ್ಥಿತಿಯಲ್ಲಿ, ಮಗನ ಭವಿಷ್ಯದೊಂದಿಗೆ ತನ್ನ ಭವಿಷ್ಯವೂ ಇದೆ ಎನ್ನುವುದು ಗೊತ್ತು, ಮಾತ್ರವಲ್ಲ ಮುಂದೆಂದಾದರೂ ತನ್ನ ಮಗನನ್ನು ರಾಜ್ಯ ರಾಜಕೀಯಕ್ಕಿಳಿಸುವ ಯೋಜನೆ ಹಾಕಿದರೆ ಅದೂ ಸಾಗರ, ಸೊರಬ ಎರಡು ಕ್ಷೇತ್ರಗಳಲ್ಲೇ ಆಗಬೇಕು. ಹಾಗೆ ಮಾಡುವುದಾದರೆ ಬೇಳೂರು-ಹಾಲಪ್ಪ ಇಬ್ಬರಲ್ಲಿ ಒಬ್ಬರನ್ನು ಸೈಡ್‌ಲೈನ್ ಮಾಡಲೇಬೇಕು. ಆದರೆ ಅದಕ್ಕೆ ಬಹಳ ಪೂರ್ವ ತಯಾರಿಯೂ ಬೇಕಾಗುತ್ತದೆ. ಅಂತಹ ಒಂದು ಪ್ಲಾನ್ ಯಡ್ಡಿ ತಲೆಯಲ್ಲಿ ಇಲ್ಲದಿಲ್ಲ..

ಈಗ ಬೇಳೂರಿಗೆ ಸಚಿವ ಸ್ಥಾನಮಾನ ಅಥವಾ ಇನ್ನಾವುದೇ ಆಮಿಷ ಒಡ್ಡಿ ಎದುರಾಗಿರುವ ಕಂಟಕವನ್ನು ತಾತ್ಕಾಲಿಕವಾಗಿ ದೂರ ಮಾಡಬಹುದೇನೋ. ಆದರೆ ಈ ಸಂದರ್ಭದಲ್ಲಿ ಬೇಳೂರು-ಹಾಲಪ್ಪ ನಡುವಿನ ಜಗಳವನ್ನು ತನ್ನ ಅನುಕೂಲಕ್ಕೆ ಹೇಗೆ ಬಳಸಿಕೊಳ್ಳುವುದು ಎಂಬ ಯೋಚನೆಯಲ್ಲಿ ಬಂಗಾರಪ್ಪ ಕೂಡ ತೊಡಗಿದ್ದಾರೆ. ಈಗಾಗಲೇ ಬಹುತೇಕ ಈಡಿಗರು ಬಂಗಾರಪ್ಪನ ಕೈ ಹಿಡಿಯಲು ನಿಂತಿರುವಾಗ ಬಿಜೆಪಿಯಲ್ಲಿ ಸ್ಫೋಟಗೊಂಡಿರುವ ಜಗಳ ಬಂಗಾರಪ್ಪನಿಗೆ ಇನ್ನಷ್ಟು ಲಾಭ ತಂದುಕೊಡುವುದರಲ್ಲಿ ಸಂಶಯವಿಲ್ಲ.

ಹರ್ಷಕುಮಾರ್ ಕುಗ್ವೆ

ಮತದಾರ ಚೀಟಿಯಲ್ಲಿ ಗೋಲ್‌ಮಾಲ್




ಮಗನನ್ನು ಗೆಲ್ಲಿಸಲು ಎಲ್ಲಾ ಕಸರತ್ತು ನಡೆಸುತ್ತಿರುವ ಯಡ್ಡಿ ಹೆಂಡ ಹಂಚುವ ಜೊತೆಗೆ, ಮನೆಮನೆಗಳಿಗೆ ವಾಹನಗಳ ಟೈರು ಟ್ಯೂಬುಗಳನ್ನು ಹಂಚಿ ಮತದಾರರನ್ನು ಓಲೈಸುತ್ತಿರುವ ವಿಷಯ ಬೆಳಕಿಗೆ ಬಂದಿದೆ. ಆಯನೂರಿನಲ್ಲಿ ಲಂಬಾಣಿ ಜನರ ಮತದಾರರ ಚೀಟಿಗಳನ್ನು ಸಾರಾಸಗಟಾಗಿ ಕೊಂಡುಕೊಳ್ಳಲಾಗುತ್ತಿದೆ ಎಂಬ ಆರೋಪವನ್ನು ಇತ್ತೀಚೆಗೆ ಬಂಗಾರಪ್ಪ ಮಾಡಿದ್ದರು. ತನಿಖೆ ನಡೆದರೆ ಬೆಳಕಿಗೆ ಬರಬಹುದಾದ ಮತ್ತೊಂದು ತಂತ್ರಗಾರಿಕೆ ಎಂದರೆ ಕಾಂಗ್ರೆಸ್‌ಗೆ ಓಟು ಹಾಕಬಹುದಾದ ಮತದಾರರಿಗೆ ಗುರುತಿನ ಚೀಟಿಯನ್ನು ಸಿಗದಂತೆ ಮಾಡುವುದು. ಚೀಟಿ ಸಿಕ್ಕರೂ ವೋಟರ್‌ಲಿಸ್ಟ್‌ನಲ್ಲಿ ಹೆಸರನ್ನೇ ಸೇರಿಸದಿರುವುದು. ಇದನ್ನು ಸ್ವತಃ ಡಿ.ಸಿ. ಪಾಂಡೆಯ ನೆರವಿನಿಂದಲೇ ಮಾಡಲಾಗುತ್ತಿದೆ ಎಂಬ ಗುಮಾನಿ ಬಂದಿದೆ. ಕಳೆದ ವಿಧಾನಸಭೆಯ ಚುನಾವಣೆಯಲ್ಲಿ ಶಿವಮೊಗ್ಗದ ಸಾವಿರಾರು ಮುಸಲ್ಮಾನ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಸಿ ಹಾಕುವ ಕೆಲಸವನ್ನು ಕೆ.ಎಸ್. ಈಶ್ವರಪ್ಪ ಮಾಡಿದ್ದರು. ಈ ಸಲವೂ ಶೇ. 60 ರಷ್ಟು ಗುರುತಿನ ಚೀಟಿಗಾಗಿನ ಅರ್ಜಿಗಳನ್ನು ಬುಟ್ಟಿಗೆಸೆಯುವಂತೆ ಜಿಲ್ಲಾಧಿಕಾರಿಯೇ ಹೇಳಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಎನ್‌ಕೌಂಟರ್ ನಡೆದದ್ದು ಹೇಗೆ?

ಮೆಂಟಲ್ ಪರಂಧಾಮನ ಸಂಹಾರ


ಪರಂಧಾಮ



ಪೊಲೀಸರಿಗೆ ಬೇರೆ ದಾರಿಯಾದರೂ ಎಲ್ಲಿತ್ತು?

ಬನಶಂಕರಿಯ ರೌಡಿ 'ಮೆಂಟಲ್ ಪರಂಧಾಮ'ನ ಹುಚ್ಚಾಟ, ರಕ್ತಪಿಪಾಸೆ ಮತ್ತು ವಸೂಲಿಬುದ್ಧಿಗೊಂದು ಅಂತ್ಯ ಕಾಣಿಸದೇ ಹೋಗಿದ್ದರೆ ಕಮೀಷನರ್ ಶಂಕರ್ ಬಿದರಿಗೆ ಎಲ್ಲಿ ಮುಖವಿರುತ್ತಿತ್ತು?

ಏಪ್ರಿಲ್ ಆರರ ಸೋಮವಾರದ ಬೆಳ್ಳಂಬೆಳಿಗ್ಗೆ ಪರಪ್ಪನ ಅಗ್ರಹಾರದ ನಾಗನಾಥಪುರ ಕ್ರಾಸ್‌ನಲ್ಲಿ ಸಿಸಿಬಿ ಪೊಲೀಸರ ಗುಂಡೇಟಿಗೆ ಬಲಿಯಾದ ಪರಂಧಾಮ ನಾಯ್ಡು ಉರ್ಫ್ 'ಮೆಂಟಲ್ ಪರಂಧಾಮ' ಬಿಜೆಪಿ ಸರ್ಕಾರಕ್ಕೆ ತಲೆದಂಡ ತೆತ್ತ ಬೆಂಗಳೂರಿನ ಮೊದಲ ರೌಡಿ!

ಆತನಷ್ಟೇ ಅಲ್ಲ, ಸಿಕ್ಕಿದ್ದರೆ ಆತನ ಗುರು ಸೈಕಲ್ ರವಿಯನ್ನೂ ಪರಂಧಾಮಕ್ಕೆ ಕಳಿಸಲು ಪೊಲೀಸರು ಅಣಿಯಾಗೇ ಇದ್ದರು. ಬಹುಶಃ ಸೈಕಲ್ ರವಿಯ ಆಯಸ್ಸು ಇನ್ನೂ ಬಾಕಿಯಿತ್ತೇನೊ. ಬೆಂಗಳೂರು ಪಾಪಕೂಪದ ಎಲ್ಲಾ ಅಲಿಖಿತ ನಿಯಮಾವಳಿಗಳನ್ನು ಮೀರಿ ಹಾವಳಿಗಿಳಿದ ಸೈಕಲ್ ರವಿ ಮತ್ತು ಪರಂಧಾಮ ಕೇವಲ ತಮ್ಮ ದುಷ್ಮನ್ ಕತ್ರಿಗುಪ್ಪೆ ಲಿಂಗನ ತಲೆ ತೆಗೆಯಲಷ್ಟೇ ನಿಂತಿದ್ದರೆ ಆ ಮಾತು ಬೇರೆ. ಕತ್ರಿಗುಪ್ಪೆ ಲಿಂಗನ ಬೆನ್ನಿಗಿದ್ದ ಬನಶಂಕರಿಯ ಬಿಜೆಪಿ ನಾಯಕ ಇಟ್ಟಮಡು ಬಾಬು ಅಲಿಯಾಸ್ ಚಂದ್ರಶೇಖರ ಬಾಬುವನ್ನು ಏಪ್ರಿಲ್ ನಾಲ್ಕರ ಶನಿವಾರದ ಮುಂಜಾನೆ ಪ್ರತಿಷ್ಠಿತ ಲಾಲ್‌ಬಾಗ್‌ಗೇ ನುಗ್ಗಿ ಕೊಚ್ಚಿ ಹಾಕಿದ ಸೈಕಲ್ ರವಿ ಮತ್ತು ಪರಂಧಾಮರಿಗೆ ತಾವು ಅಧಿಕಾರಾರೂಢ ಬಿಜೆಪಿಯ ಹುತ್ತಕ್ಕೇ ಕೈಹಾಕುತ್ತಿದ್ದೇವೆಂಬುದು ಕೂಡ ಚೆನ್ನಾಗೇ ಗೊತ್ತಿತ್ತು.



ಏಕೆಂದರೆ ಇಟ್ಟಮಡು ಬಾಬು ಕೇವಲ ಲಿಂಗನ ಗಾಡ್‌ಫಾದರ್ ಮಾತ್ರವೇ ಅಲ್ಲ, ಪದ್ಮನಾಭನಗರದ ಬಿಜೆಪಿ ಕೌನ್ಸಿಲರ್ ಎಲ್. ಶ್ರೀನಿವಾಸರ ಸ್ವಂತ ದೊಡ್ಡಪ್ಪನ ಮಗ ಮತ್ತು ಸಾರಿಗೆ ಮಂತ್ರಿ ಆರ್. ಅಶೋಕ್ ಪಾಲಿಗೆ ಬಲಗೈ ಬಂಟನಂತಿದ್ದ. ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಪದ್ಮನಾಭನಗರದ ಇಟ್ಟಮಡು ವಾರ್ಡಿಗೆ ಬಿಜೆಪಿಯ ಅಧಿಕೃತ ಅಭ್ಯರ್ಥಿಯೆಂದೇ ಘೋಷಿಸಲ್ಪಟ್ಟಿದ್ದ ಚಂದ್ರಶೇಖರ್ ಬಾಬು ಮತ್ತಾತನ ಶಿಷ್ಯ ಹೊಸಕೆರೆಹಳ್ಳಿ ನಾರಾಯಣ ಇಲ್ಲದೇ ಹೋಗಿದ್ದರೆ ಕಳೆದ ಚುನಾವಣೆಯಲ್ಲಿ ಕಬಡ್ಡಿ ಬಾಬು ವಿರುದ್ಧ ಆರ್. ಅಶೋಕ್ ಗೆಲ್ಲುತ್ತಿರಲಿಲ್ಲ.

ಅಂಥಾ ಇಟ್ಟಮಡು ಬಾಬುವನ್ನೇ ಲಾಲ್‌ಬಾಗ್‌ಗೆ ನುಗ್ಗಿ ಕೊಚ್ಚಿ ಹಾಕಿದ ಸೈಕಲ್ ರವಿ ಮತ್ತು ಪರಂಧಾಮರನ್ನು ಕಳೆದೊಂದು ತಿಂಗಳಿನಿಂದಲೂ ಸಿಸಿಬಿಯ ಇನ್ಸ್‌ಪೆಕ್ಟರ್‌ಗಳಾದ ಬಾಳೇಗೌಡ, ರವಿ ಪ್ರಕಾಶ್ ಮತ್ತು ಅಶೋಕನ್ ತಂಡ ಬೆನ್ನಟ್ಟಿಕೊಂಡೇ ಬಂದಿತ್ತು. ಹಾಗೊಮ್ಮೆ ಇಟ್ಟಮಡು ಬಾಬುವನ್ನು ಕೊಲ್ಲದೇ ಹೋಗಿದ್ದರೂ ಪರಂಧಾಮ ಅಥವಾ ಸೈಕಲ್ ರವಿ ಇಬ್ಬರಲ್ಲೊಬ್ಬರು ಎನ್‌ಕೌಂಟರ್ ಆಗುವುದು ನಿಶ್ಚಿತವಾಗಿತ್ತು. ಸ್ವತಃ ಆರ್. ಅಶೋಕ್ ಡಿಸಿಪಿ ರವಿಯನ್ನು ಕರೆಸಿಕೊಂಡು, ಪರಂಧಾಮನ ಹಾವಳಿ ತಡೆಗಟ್ಟುವಂತೆ ಒತ್ತಡ ಹಾಕಿದ್ದು, ಬನಶಂಕರಿ-ಪದ್ಮನಾಭನಗರದ ಇಡೀ ಬಿಜೆಪಿ ಘಟಕವೇ ಈ ಇಬ್ಬರು ರೌಡಿಗಳ ವಿರುದ್ಧ ಮಂತ್ರಿ ಅಶೋಕ್ ಬಳಿಗೆ ದೂರು ತಂದಿದ್ದು ಮತ್ತು ಆ ಭಾಗದ ಅನೇಕ ಬಿಲ್ಡರುಗಳ ಪಾಲಿಗೆ ಪರಂಧಾಮ 'ಸಿಂಹಸ್ವಪ್ನ'ವಾಗಿದ್ದು ಇಂಥದೊಂದು ಎನ್‌ಕೌಂಟರ್‌ನ ಮುನ್ಸೂಚನೆಯಂತಿತ್ತು.

ಇಲ್ಲಿಗೆ ಏಳು ತಿಂಗಳ ಹಿಂದೆ ಜೈಲಿಂದ ಒಟ್ಟೊಟ್ಟಿಗೆ ಹೊರಬಿದ್ದವರು ಸೈಕಲ್ ರವಿ ಮತ್ತು ಪರಂಧಾಮ. ಅದಕ್ಕೂ ಮೊದಲೇ ಮಂತ್ರಿ ಕಟ್ಟಾಸುಬ್ರಹ್ಮಣ್ಯ ನಾಯ್ಡುಗೆ ಸಂಬಂಧಿಯಾಗಿದ್ದ ಗಜೇಂದ್ರ ನಾಯ್ಡು ಎಂಬ ಬಿಲ್ಡರ್‌ನನ್ನು ಎತ್ತಾಕಿಕೊಂಡು ಹೋಗಿದ್ದ ಪರಂಧಾಮನ ಹುಡುಗರು ಹತ್ತು ಲಕ್ಷದ ಒತ್ತೆ ಹಣಕ್ಕಾಗಿ ಪೀಡಿಸಿದ್ದರು. ಬನಶಂಕರಿ, ಪದ್ಮನಾಭನಗರದ ಸಮಸ್ತ ಕಮ್ಮಾ ನಾಯ್ಡುಗಳನ್ನೆಲ್ಲ ಪೊಲೀಸ್ ಕಮೀಷನರ್ ಕಚೇರಿ ಮುಂದೆ ಜಮಾಯಿಸಿದ ಮಂತ್ರಿ ಕಟ್ಟಾನಾಯ್ಡು ತಾವೇ ಖುದ್ದಾಗಿ ಬಂದು ಪರಂಧಾಮನ ವಿರುದ್ಧ ಪೊಲೀಸ್ ಕಮೀಷನರ್‌ಗೆ ದೂರು ಕೊಟ್ಟಿದ್ದರು. ಆಗಿನ್ನೂ ಜೈಲಲ್ಲೇ ಇದ್ದ ಪರಂಧಾಮ, ಒಳಗಿದ್ದುಕೊಂಡೇ ಇಷ್ಟೆಲ್ಲ ಅನಾಹುತವೆಸಗಿದ್ದ.

ಆಗಲೂ ಅಷ್ಟೇ, ಪರಂಧಾಮನ ಮೂಲಕ ಇದೆಲ್ಲವನ್ನೂ ಮಾಡಿಸುತ್ತಿರುವುದೇ ಸೈಕಲ್ ರವಿ ಎಂಬುದು ಪೊಲೀಸರಿಗೆ ಚೆನ್ನಾಗಿ ಗೊತ್ತಿತ್ತು. ಸೈಕಲ್ ರವಿ ಬೆಂಗಳೂರು ಕಂಡ ಅತ್ಯಂತ ಖತರ್‌ನಾಕ್ ಸುಪಾರಿ ಹಂತಕ ಎಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿಗೆ ಏಳು ತಿಂಗಳ ಹಿಂದಷ್ಟೇ ಜೈಲಿಂದ ಹೊರಬಿದ್ದ ಪರಂಧಾಮ ಮತ್ತು ಸೈಕಲ್ ರವಿಯ ಮುಖ್ಯ ಗುರಿ ಕತ್ರಿಗುಪ್ಪೆ ಲಿಂಗನನ್ನು ಮುಗಿಸುವುದೇ ಆಗಿತ್ತಾದರೂ ಲಿಂಗ ಸುಲಭಕ್ಕೆ ಸಿಗುವ ಆಸಾಮಿಯಲ್ಲ.

ಕತ್ರಿಗುಪ್ಪೆ, ಹೊಸಕೆರೆ ಹಳ್ಳಿ, ಇಟ್ಟಮಡು, ಪದ್ಮನಾಭನಗರ ಮತ್ತು ಬನಶಂಕರಿ ಏರಿಯಾಗಳಲ್ಲಿ ಆಳವಾಗಿ ಬೇರೂರಿದ ಲಿಂಗ ಮಹಾನ್ ಚಾಣಾಕ್ಷ. ಯಾವುದೋ ಆರಂತಸ್ತಿನ ಕಟ್ಟಡದ ತುತ್ತ ತುದಿಯಲ್ಲಿರುವ ತನ್ನ ಅಡ್ಡೆ ಹೊಕ್ಕಿ ಕೂತನೆಂದರೆ ಸುತ್ತಮುತ್ತಲ ಅಷ್ಟೂ ರಸ್ತೆಗಳಲ್ಲಿ ಆತನ ಶಿಷ್ಯರ ಸರ್ಪಗಾವಲಿರುತ್ತದೆ. ಯಾರೋ ತರಕಾರಿ ಗಾಡಿ ಇಟ್ಟುಕೊಂಡು, ಕೆಲವೆಡೆ ಪಾನಿಪೂರಿ ಗಾಡಿಗಳಲ್ಲಿ, ಇನ್ನೂ ಹಲವೆಡೆ ರಸ್ತೆಬದಿಯ ಟೀ ಅಂಗಡಿಗಳಿದ್ದಂತೆ ಲಿಂಗನ ಶಿಷ್ಯರು ಕವರ್ ಆಗಿರುತ್ತಾರೆ. ಇತ್ತೀಚೆಗಷ್ಟೇ ಸಿಸಿಬಿ ಪೊಲೀಸರು ಕತ್ರಿಗುಪ್ಪೆಯ ಲಿಂಗನ ಅಡ್ಡೆಯನ್ನು ಸುತ್ತುವರಿದು ಇನ್ನೇನು ಲಿಂಗನನ್ನು ಹಿಡಿದೇ ಬಿಟ್ಟರೆಂದು ಕೊಂಡರೆ; ಸಿಕ್ಕಿಬಿದ್ದವನು ಸಾಕ್ಷಾತ್ ಲಿಂಗನಂತೆ ಕಾಣುವ ಆತನ ತದ್ರೂಪಿ!

■ ರಾ. ಸೋಮನಾಥ್

ಇನ್ನೇನು ಲಿಂಗ ಕೈಗೆ ಸಿಗುವುದು ಕಷ್ಟ ಎಂಬುದು ಸೈಕಲ್ ರವಿಗೆ ಮನದಟ್ಟಾಗಿ ಹೋಗಿತ್ತು. ಹಾಗಂತ ಕೈಕಟ್ಟಿ ಕೂರುವ ಜಾಯಮಾನ ಆತನದಲ್ಲ. ಯಾರೆಲ್ಲ ಲಿಂಗನಿಗೆ ದುಡ್ಡುಕಾಸಿನ ನೆರವಾಗುತ್ತಾರೋ, ಯಾರು ಆತನ ಓಡಾಟಕ್ಕೆ ಕಾರು ಕೊಡುತ್ತಾರೋ, ಆತ ಜೈಲಲ್ಲಿರುವಾಗ ಯಾರೆಲ್ಲ ಊಟ ಕಳಿಸುತ್ತಾರೋ ಅಂಥವರನ್ನೆಲ್ಲ ಒಬ್ಬೊಬ್ಬರನ್ನಾಗಿ ಮುಗಿಸಿಬಿಟ್ಟರೆ ಲಿಂಗನ ಅರ್ಧ ಶಕ್ತಿ ಉಡುಗುತ್ತದೆ. ಆದರೆ ಲಿಂಗನ ಬೆನ್ನಿಗಿರುವವರ್‍ಯಾರೂ ಕಮ್ಮಿಯ ಆಸಾಮಿಗಳಲ್ಲ. ಪದ್ಮನಾಭನಗರದ ಮಾಜಿ ಬಿಜೆಪಿ ಕೌನ್ಸಿಲರ್ ಎಲ್. ಶ್ರೀನಿವಾಸ್, ಇಟ್ಟಮಡು ಬಾಬು, ಲ್ಯಾಂಡ್ ಡೀಲರ್ ಮತ್ತು ಕಾಂಗ್ರೆಸ್ ಪುಢಾರಿ ಕತ್ರಿಗುಪ್ಪೆ ಮುನಿರಾಜು, ಪುರಾಣಾ ಪಾಂಡು; ಹೀಗೆ ಪದ್ಮನಾಭನಗರ, ಚಿಕ್ಕಲ್ಲಸಂದ್ರ, ಇಟ್ಟಮಡು ಭಾಗದ ಮಂತ್ರಿ ಅಶೋಕ್ ಸಂಬಂಧಿಗಳಾದ ಸಮಸ್ತ ಮರಸು ಒಕ್ಕಲಿಗರೆಲ್ಲ ಲಿಂಗನ ಬೆನ್ನಿಗೇ ಇದ್ದಾರೆ.



ಕತ್ರಿಗುಪ್ಪೆ ಲಿಂಗ

ಕತ್ರಿಗುಪ್ಪೆ ಮುನಿರಾಜು ಮೇಲುನೋಟಕ್ಕೆ ಕಾಂಗ್ರೆಸ್ ಪುಢಾರಿಯಾದರೂ ಬಿಜೆಪಿಯ ಎಲ್. ಶ್ರೀನಿವಾಸ್ ಮತ್ತು ಇಟ್ಟಮಡು ಬಾಬುಗೆ ಆತ ಸಂಬಂಧಿಯೇ. ಬಿಲ್ಡರ್ ಗಜೇಂದ್ರ ನಾಯ್ಡುವನ್ನು ಕಿಡ್ನಾಪ್ ಮಾಡಿ ಬನಶಂಕರಿ ಭಾಗದ ಅಷ್ಟೂ ಕಮ್ಮಾ ನಾಯ್ಡುಗಳ ದುಷ್ಮನಿ ಕಟ್ಟಿಕೊಂಡ ಸೈಕಲ್ ರವಿ ಮತ್ತು ಪರಂಧಾಮರಿಗೆ ಆ ಭಾಗದ ಮರಸು ಗೌಡರೂ ಲಿಂಗನ ಬೆನ್ನಿಗಿರುವುದು ಹತಾಶೆಯನ್ನು ಉಲ್ಬಣಿಸಿದೆ. ಅದರಲ್ಲೂ ಪರಂಧಾಮನಿಗೆ ಇಟ್ಟಮಡು ಬಾಬು ಎಂದರೇನೇ ಭಯಂಕರ ಸಿಟ್ಟು. ತನ್ನ ಅಣ್ಣ ಜಗ್ಗನನ್ನು ಲಿಂಗನ ಗ್ಯಾಂಗ್ ಕೊಚ್ಚಿ ಕೊಂದಿದ್ದಕ್ಕೆ ಬಾಬುವೇ ಕಾರಣ ಎಂಬುದು ಪರಂಧಾಮನ ನಂಬಿಕೆ. ಜೈಲಿಂದ ಹೊರಬಿದ್ದವನೇ ಐದು ಲಕ್ಷ ಕೊಡುವಂತೆ ಬಾಬು ಮೊಬೈಲಿಗೆ ಕರೆ ಮಾಡಿದ್ದಾನೆ.

ಆದರೆ ಬಾಬು ಚಾಣಾಕ್ಷ. ಒಂದೆಡೆ ಇಡೀ ಪರಂಧಾಮನ ಪಡೆಯನ್ನು ಪೋಷಿಸುತ್ತಲೇ ಮತ್ತೊಂದೆಡೆ ಜೈಲಿಂದ ಹೊರಬಿದ್ದ ಸೈಕಲ್ ರವಿಯನ್ನೂ ಸರಿಮಾಡಿಕೊಂಡ. ಸಮಾಧಾನಕ್ಕೆ ಅಂತ ಒಂದಷ್ಟು ಕಾಸನ್ನೂ ಕೊಟ್ಟ. ಹೇಗಿದ್ದರೂ ಪರಂಧಾಮ ಸೈಕಲ್ ರವಿಯ ಶಿಷ್ಯ. ರವಿಯನ್ನು ಸರಿ ಮಾಡಿಕೊಂಡರೆ ಪರಂಧಾಮನೂ ಸರಿಹೋಗುತ್ತಾನೆ. ಮುಂಬರುವ ಪಾಲಿಕೆ ಚುನಾವಣೆಯಲ್ಲಿ ತನ್ನ ವಿರುದ್ಧ ಯಾವ ಗ್ಯಾಂಗೂ ಬೀದಿಗಿಳಿಯದಂತಾದರೆ ತಾನು ಗೆದ್ದು ಕೌನ್ಸಿಲರ್ ಆಗುವುದು ಸಲೀಸು.

ಇದು ಬಾಬು ಲೆಕ್ಕಾಚಾರವಾಗಿತ್ತು. ಆದರೆ ಸೈಕಲ್ ರವಿ ಮಹಾನ್ ಪಾಖಂಡಿ. ಎಲ್ಲೂ ತಾನು ಕಾಣಿಸಿಕೊಳ್ಳದ ಹಾಗೆ ಎಚ್ಚರಿಕೆ ವಹಿಸುತ್ತಾನೆ. ಮೇಲುನೋಟಕ್ಕೆ ತಾನು ರಾಜಿಯಾದಂತೆ ದೋಸ್ತಿ ನಟಿಸುತ್ತಾನೆ. ಒಳಗಿಂದೊಳಗೇ ಪರಂಧಾಮನನ್ನು ಛೂ ಬಿಡುತ್ತಾನೆ. ಕೊನೆಗೆ ತಾನೇ ನಿಂತು ಪರಂಧಾಮನನ್ನು ಕರೆಸಿ ರಾಜಿ ಮಾಡಿಸಿದಂತೆ ಮಾಡಿ ಪರಂಧಾಮನಿಗೂ ಒಂದಷ್ಟು ಕಾಸು ಕೊಡಿಸುತ್ತಾನೆ. ಬನಶಂಕರಿ ಭಾಗದ ಅನೇಕ ಬಿಲ್ಡರುಗಳು, ಲ್ಯಾಂಡ್ ಡೀಲರುಗಳನ್ನು ಸೈಕಲ್ ರವಿ ಸುಲಿದದ್ದೇ ಈ ರೀತಿ.

ಇದನ್ನು ಅರ್ಥ ಮಾಡಿಕೊಳ್ಳದೇ ಹೋದವನು ಇಟ್ಟಮಡು ಬಾಬು. ರೋಲ್‌ಕಾಲ್ ಕೊಡುವಂತೆ ಪದೇಪದೇ ಪರಂಧಾಮನ ಬೆದರಿಕೆ ಕರೆಗಳು ಬಂದಾಗ ಅದನ್ನು ನಿರ್ಲಕ್ಷಿಸಿದ್ದಾನೆ. 'ನೋಡಯ್ಯಾ... ಅದೇನಿದ್ರೂ ನೀನು ಸೈಕಲ್ ರವಿ ಹತ್ತಿರ ಮಾತಾಡಿಕೊ. ಈಗಾಗಲೇ ಆತನಿಗೆ ಕಾಸು ಕೊಟ್ಟಾಗಿದೆ' ಎಂದಿದ್ದಾನೆ ಇಟ್ಟಮಡು ಬಾಬು. ಹಾಗಂತ ಪರಂಧಾಮ ಸುಮ್ಮನಾಗಬೇಕಲ್ಲ, 'ಸೈಕಲ್ ರವಿಯ ಲೆಕ್ಕಾಚಾರವೇ ಬೇರೆ, ನನ್ನ ಸ್ಟೈಲೇ ಬೇರೆ. ಮುಚ್ಕೊಂಡು ಐದು ಲಕ್ಷ ಮಡಗು' ಎಂದುಬಿಟ್ಟ.


ಸೈಕಲ್ ರವಿ

ಯಾವತ್ತು ಪರಂಧಾಮನ ಧಮಕಿ ಅತಿಯಾಯಿತೋ ಬಾಬು ಅದನ್ನು ಮಂತ್ರಿ ಅಶೋಕ್ ಗಮನಕ್ಕೆ ತಂದಿದ್ದಾನೆ. ಜೊತೆಗೆ ಬಿಜೆಪಿಯ ಕೌನ್ಸಿಲರ್ ಎಲ್. ಶ್ರೀನಿವಾಸ್, ಬಿಜೆಪಿಯ ಮತ್ತೊಬ್ಬ ನಾಯಕ ಹೊಸಕೆರೆಹಳ್ಳಿ ನಾರಾಯಣ ಮುಂತಾದವರೆಲ್ಲ ಸೇರಿ ಪರಂಧಾಮನ ಕಾಟ ತಪ್ಪಿಸುವಂತೆ ಮಂತ್ರಿ ಅಶೋಕ್ ಮುಂದೆ ಗೋಳಿಟ್ಟದ್ದಾರೆ. ಇಲ್ಲಿಗೆ ತಿಂಗಳ ಹಿಂದೆಯೇ ಅಶೋಕ್ ಡಿಸಿಪಿ ರವಿಯನ್ನು ಕರೆಸಿಕೊಂಡು ಪರಂಧಾಮನ ಕಾಟ ತಪ್ಪಿಸುವಂತೆ ದಬಾಯಿಸಿದ್ದಾರೆ. ಬನಶಂಕರಿ, ಚನ್ನಮ್ಮನ ಕೆರೆ ಅಚ್ಚುಕಟ್ಟು ಮತ್ತು ಸುಬ್ರಹ್ಮಣ್ಯಪುರ ಪೊಲೀಸರಷ್ಟೇ ಅಲ್ಲ; ಇಡೀ ಸಿಸಿಬಿಯೇ ಸೈಕಲ್ ರವಿ ಮತ್ತು ಪರಂಧಾಮನ ಬೇಟೆಗೆ ನಿಂತಿತ್ತು. ಅದೇ ಹೊತ್ತಿಗೆ ಮೈಸೂರಿನಲ್ಲಿ ಮನೆ ಮಾಡಿಕೊಂಡಿದ್ದ ಕತ್ರಿಗುಪ್ಪೆ ಲಿಂಗ ಸಿಸಿಬಿ ಪೊಲೀಸರಿಗೆ ಸಿಕ್ಕು ಜೈಲು ಪಾಲಾದ.

ಇನ್ನು ಲಿಂಗ ಕೈಗೆ ಸಿಗುವುದು ಕಷ್ಟ ಎಂಬ ನಿರ್ಧಾರಕ್ಕೆ ಬಂದ ಸೈಕಲ್ ರವಿಗೆ ಇಷ್ಟರಲ್ಲೇ ಪೊಲೀಸರು ಪರಂಧಾಮನ ಎನ್‌ಕೌಂಟರ್ ಮಾಡುತ್ತಾರೆಂಬ ಸುದ್ದಿ ಸಿಕ್ಕಿದೆ. ಇಟ್ಟಮಡು ಬಾಬು ತಮ್ಮ ವಿರುದ್ಧ ಪೊಲೀಸರನ್ನು ಛೂ ಬಿಟ್ಟದ್ದೇ ಇಷ್ಟೆಲ್ಲಕ್ಕೂ ಕಾರಣ ಎಂದೂ ಅದಕ್ಕೆ ಬಾಬುವನ್ನೇ ಮುಗಿಸಿಬಿಡುವುದೆಂದೂ ರವಿ ನಿರ್ಧರಿಸಿಬಿಟ್ಟ. ಇದು ಬಾಬುವಿಗೂ ಗೊತ್ತಿತ್ತು. ಅದಕ್ಕೇ ಆತ ಬನಶಂಕರಿ, ಇಟ್ಟಮಡು, ಹೊಸಕೆರೆಹಳ್ಳಿ ಸುತ್ತಮುತ್ತಲ ಪಾರ್ಕುಗಳನ್ನೆಲ್ಲ ಬಿಟ್ಟು ವಾಕಿಂಗ್‌ಗೆಂದು ಲಾಲ್‌ಬಾಗ್‌ಗೆ ಬರುತ್ತಿದ್ದ. ಪರಂಧಾಮ ಇಪ್ಪತ್ತು ದಿನಗಳ ಹಿಂದಿನಿಂದಲೇ ಇದನ್ನೆಲ್ಲ ಗಮನಿಸಿದ್ದ. ಏಪ್ರಿಲ್ 3 ರ ಸಂಜೆಯೇ ಒಂದು ಟಾಟಾ ಸುಮೋ ತಂದು ಲಾಲ್‌ಬಾಗ್ ಪಾರ್ಕಿಂಗ್‌ನಲ್ಲಿ ಹಾಕಿಕೊಂಡಿದ್ದ. ಏಪ್ರಿಲ್ 4 ರ ಬೆಳ್ಳಂಬೆಳಿಗ್ಗೆಯೇ ನಾಲ್ಕು ಬೈಕುಗಳಲ್ಲಿ ಪರಂಧಾಮನ ಹುಡುಗರು ಬಾಬುವನ್ನು ಹಿಂಬಾಲಿಸಿದ್ದಾರೆ. ಸ್ವತಃ ಸೈಕಲ್ ರವಿಯೇ ತನ್ನ ಸುಮೋ ಡ್ರೈವ್ ಮಾಡಿಕೊಂಡು ಲಾಲ್‌ಬಾಗ್‌ನ ಹೊರಭಾಗದಲ್ಲಿ ಹೊಂಚಿ ಕೂತಿದ್ದ. ಮತ್ತೊಂದೆಡೆ ಪರಂಧಾಮ ಮತ್ತು ಗುಟ್ಟಹಳ್ಳಿಯ ಕರಿಯ ರಾಜೇಶ ಒಳಗೆ ನಿಲ್ಲಿಸಿದ್ದ ಸುಮೋ ಬಳಿ ಜಾಗಿಂಗ್ ಡ್ರೆಸ್ ಹಾಕಿಕೊಂಡು ನಿಂತಿದ್ದಾರೆ.

ದುರಾದೃಷ್ಟವೋ ಎಂಬಂತೆ ಬಾಬು ತನ್ನ ತಾಯಿ ರುಕ್ಮಿಣಮ್ಮ ಮತ್ತು ಚಿಕ್ಕಮ್ಮ ಜಯಂತಿಯ ಜೊತೆ ಫೋರ್ಡ್ ಕಾರಿನಲ್ಲಿ ಬಂದವನೇ ಪರಂಧಾಮನ ಹಂತಕರು ನಿಲ್ಲಿಸಿಕೊಂಡಿದ್ದ ಸುಮೋ ಪಕ್ಕಕ್ಕೆ ಪಾರ್ಕ್ ಮಾಡಿದ್ದಾನೆ. ತಾಯಿ ಮತ್ತು ಚಿಕ್ಕಮ್ಮ ಕಾರಿನಿಂದಿಳಿದು ವಾಕಿಂಗ್‌ಗೆ ಹೋದರೆ, ತನ್ನ ಗಾಡಿಯನ್ನು ಪಾರ್ಕ್ ಮಾಡಿದ ಬಾಬು ಇನ್ನೇನು ಅರ್ಧ ಫರ್ಲಾಂಗ್ ಕ್ರಮಿಸಬೇಕು. ಅಷ್ಟರಲ್ಲೇ ಜಾಗಿಂಗ್ ಡ್ರೆಸ್ಸಿನಲ್ಲಿದ್ದ ಪರಂಧಾಮನ ಗ್ಯಾಂಗ್ ಮುತ್ತಿಕೊಂಡಿದೆ. ತಲೆ ಚಿಪ್ಪೇ ಎಗರಿ ಹೋಗುವಂತೆ ಕತ್ತರಿಸಿ ಕೊಂದಿದೆ ಹಂತಕ ಪಡೆ.

ಏಪ್ರಿಲ್ ನಾಲ್ಕರ ಐದೂ ಮುಕ್ಕಾಲರ ಹೊತ್ತಿಗೇ ಇಟ್ಟಮಡು ಬಾಬು ಹೆಣವಾಗಿ ಬಿದ್ದಿದ್ದ. ಜಂಟಿ ಕಮೀಷನರ್ ಅಲೋಕ್‌ಕುಮಾರ್, ಎಂ.ಆರ್. ಪೂಜಾರ್ ಮತ್ತು ಡಿಸಿಪಿ ರವಿ ಸ್ಥಳಕ್ಕೆ ಬರುವಷ್ಟರಲ್ಲೇ ಇಡೀ ಲಾಲ್‌ಬಾಗ್ ಸ್ಮಶಾನ ಸದೃಶವಾಗಿತ್ತು. ಅಲ್ಲಿಗೆ ಪರಂಧಾಮನ ಪಾಪದ ಕೊಡ ತುಂಬಿಬಂದಿತ್ತು. ■

ರಣರಂಗವಾದ ರಾಯಸಂದ್ರ ಸರ್ಕಲ್

ಇಟ್ಟಮಡು ಬಾಬುವನ್ನು ಕೊಂದ ನಲವತ್ತೆಂಟು ಗಂಟೆಗಳೊಳಗೇ ಪೊಲೀಸರ ಕೈಯಲ್ಲಿ ನಿಕಾಲಿಯಾದವನು ಪರಂಧಾಮ. ಪಾಪಕೂಪದ ಅನೇಕರ ಪ್ರಕಾರ ಪರಂಧಾಮನಿಗಿಂತಲೂ ಸೈಕಲ್ ರವಿ ಹೆಚ್ಚು ಅಪಾಯಕಾರಿಯಾಗಿದ್ದ. ಪರಂಧಾಮ ಹುಂಬ ಮತ್ತು ಪುಕ್ಕಲ. ತನ್ನನ್ನು ಮುಂದೆ ಬಿಟ್ಟು ತನ್ನ ಹೆಸರಲ್ಲಿ ಸೈಕಲ್ ರವಿ ನಡೆಸುತ್ತಿರುವ ವಸೂಲಿ ಕ್ರಿಮಿನಲ್ ಕೃತ್ಯಗಳಿಗೆ ತಾನೇ ತಲೆಕೊಡಬೇಕಾಗುತ್ತದೆ ಎಂಬ ಕನಿಷ್ಠ ಪಜ್ಞೆ ಕೂಡ ಆತನಿಗಿರಲಿಲ್ಲ.

ಯಾವತ್ತು ಜೈಲಿಂದ ಬಂದವನು ಇಟ್ಟಮಡು ಬಾಬುಗೆ ಧಮಕಿ ಶುರುಹಚ್ಚಿಕೊಂಡನೋ ಆಗಲೇ ಸಿಸಿಬಿ ಪೊಲೀಸರ ಕಣ್ಣು ಆತನ ಮೇಲೆ ಬಿದ್ದಿತ್ತು. ವೈಟ್ ಫಿಲ್ಡ್ ಸಮೀಪ ಆತ ಮನೆ ಮಾಡಿಕೊಂಡಿದ್ದು ಪೊಲೀಸರಿಗಾಗಲೇ ಗೊತ್ತಾಗಿತ್ತು. ಏಪ್ರಿಲ್ ನಾಲ್ಕರ ಬೆಳ್ಳಂಬೆಳಿಗ್ಗೆ ಲಾಲ್‌ಬಾಗ್‌ನಲ್ಲಿ ಇಟ್ಟಮಡು ಬಾಬುವನ್ನು ಮುಗಿಸಿದ್ದೇ ಮತ್ತೆ ತನ್ನ ವೈಟ್‌ಫೀಲ್ಡ್ ಸಮೀಪದ ಕೂಡ್ಲು ಮನೆಯನ್ನೇ ಹೊಕ್ಕಿ ಕೂತಿದ್ದಾನೆ. ಸಮೀಪದಲ್ಲೆಲ್ಲೋ ಸೈಕಲ್ ರವಿ ಕೂಡ ಮನೆ ಮಾಡಿದ್ದು ಮತ್ತು ತಾನು ರಹಸ್ಯವಾಗಿ ವಾಸಿಸುತ್ತಿರುವುದು ಪೊಲೀಸರಿಗೆ ಗೊತ್ತಿಲ್ಲವೆಂದೇ ಭಾವಿಸಿದ್ದ.


ಇಟ್ಟಮಡು ಬಾಬು ಕೊಲೆಯಾದ ಸಂಜೆಯೇ ಇಡೀ ಬಿಜೆಪಿಯ ಮರಸು ಗೌಡರ ಬುಡಕ್ಕೆ ಬೆಂಕಿ ಬಿದ್ದಂತಾಗಿತ್ತು. ಅದರಲ್ಲೂ ಲ್ಯಾಂಡ್ ಗ್ರ್ಯಾಬರ್ ಕತ್ರಿಗುಪ್ಪೆ ಮುನಿರಾಜು ನೇರವಾಗಿ ಶಂಕರ್ ಬಿದರಿಯವರ ಛೇಂಬರಿಗೇ ನುಗ್ಗಿ ಪರಂಧಾಮನನ್ನು ಎನ್‌ಕೌಂಟರ್ ಮಾಡುವಂತೆ ಬಾಯಿಬಡಿದುಕೊಂಡ. ಮತ್ತೊಂದೆಡೆ ಮಂತ್ರಿ ಅಶೋಕ್ ಗೃಹಸಚಿವ ಆಚಾರ್ಯರನ್ನೇ ಕಂಡು ಕೂಗಾಡಿಬಿಟ್ಟರು. ಮೊದಲೆ ಎನ್‌ಕೌಂಟರ್ ಲಿಸ್ಟ್‌ನಲ್ಲಿದ್ದ ಪರಂಧಾಮನನ್ನು ಇಂಥದೊಂದು ರಕ್ತಪಾತದ ನಂತರವೂ ಬಿಡುವುದುಂಟೆ?

ಬಾಬು ಹತ್ಯೆ ನಡೆದ ಮರುದಿನ ಅಂದರೆ ಏಪ್ರಿಲ್ 5 ರ ರಾತ್ರಿಯೇ ಸಿಸಿಬಿ ಪೊಲೀಸರ ಪಡೆ ಪರಂಧಾಮನ ಕೂಡ್ಲು ಮನೆ ಸುತ್ತುವರಿದಿದೆ. ಸಿಸಿಬಿಯ ಇನ್ಸ್‌ಪೆಕ್ಟರ್‌ಗಳಾದ ರವಿಪ್ರಕಾಶ್, ಬಾಳೇಗೌಡ, ಅಶೋಕನ್ ಮತ್ತು ಒಂದು ಡಜನ್ ಕ್ರೈಂ ಪೇದೆಗಳಿದ್ದ ತಂಡಕ್ಕೆ ಚಳ್ಳೆಹಣ್ಣು ತಿನ್ನಿಸಿ ತನ್ನ ಸ್ಯಾಂಟ್ರೋ ಕಾರನ್ನೇರಿ ಪರಾರಿಯಾಗಿದ್ದಾನೆ ಪರಂಧಾಮ. ಬಹುಶಃ ತಪ್ಪಿಸಿಕೊಳ್ಳಲಿ ಅಂತಲೇ ಸಿಸಿಬಿ ಪೊಲೀಸರೂ ಯಾಮಾರಿದಂತೆ ನಟಿಸಿದ್ದಾರೆ. ಪರಂಧಾಮನ ಜೊತೆ ಸೈಕಲ್ ರವಿ ಕೂಡ ಸ್ಯಾಂಟ್ರೋ ಕಾರನ್ನೇರಿದ್ದಾನೆ. ಕಾರು ಕೋರಮಂಗಲ ದಾಟಿ ಎಲೆಕ್ಟ್ರಾನಿಕ್ ಸಿಟಿಯತ್ತ ಓಡುತ್ತಿರುವ ಸುದ್ದಿ ಸಿಸಿಬಿ ಪೊಲೀಸರಿಗೆ ಸಿಕ್ಕಿದ್ದೇ ಇನ್ಸ್‌ಪೆಕ್ಟರ್ ರವಿಪ್ರಕಾಶ್ ನೇತೃತ್ವದ ಒಂದು ತಂಡ ನಾಗನಾಥಪುರದ ರಾಯಸಂದ್ರ ಸರ್ಕಲ್‌ನಲ್ಲಿ ಹೊಂಚಿ ಕೂತಿದೆ.

ಬೆಳಿಗ್ಗೆ ನಾಲ್ಕು ಗಂಟೆಯ ಹೊತ್ತಿಗೆ ನೇರವಾಗಿ ಪರಪ್ಪನ ಅಗ್ರಹಾರದ ರಾಯಸಂದ್ರ ಸರ್ಕಲ್‌ಗೇ ಬಂದಿದ್ದಾನೆ ಪರಂಧಾಮ. ಪೊಲೀಸರು ಅಡ್ಡ ಗಟ್ಟಿದ್ದು ಗೊತ್ತಾಗಿದ್ದೇ ಸೈಕಲ್ ರವಿ ಮತ್ತು ಮೂವರು ಕಾರಿನಿಂದ ನೆಗೆದು ನಾಪತ್ತೆಯಾಗಿದ್ದಾರೆ. ಆದರೆ ಡ್ರೈವಿಂಗ್ ಮಾಡುತ್ತಿದ್ದ ಪರಂಧಾಮ ತನ್ನ ರಿವಾಲ್ವರ್ ತೆಗೆದದ್ದೇ ರವಿಪ್ರಕಾಶ್‌ರತ್ತ ಗುಂಡು ಹಾರಿಸಲಾರಂಭಿಸಿದ್ದಾನೆ. ಗುಂಡು ರವಿಪ್ರಕಾಶ್ ಕೈಗೆ ಬಡಿದಿದೆ. ಮತ್ತೊಂದು ಗುಂಡು ಪೇದೆ ನವಾಜ್‌ನನ್ನು ಗಾಯಗೊಳಿಸಿದೆ. ಆದರೆ ಅಷ್ಟೊತ್ತಿಗಾಗಲೇ ಪೊಲೀಸರು ಹಾರಿಸಿದ ಗುಂಡೊಂದು ಪರಂಧಾಮನ ಹೊಟ್ಟೆಯನ್ನು ಹೊಕ್ಕಾಗಿತ್ತು. ಮತ್ತೊಂದು ಗುಂಡು ಆತನ ಕತ್ತನ್ನೇ ಸೀಳಿತ್ತು. ನೆಲಕ್ಕೆ ಬಿದ್ದು ಚೀರಾಡುತ್ತಿದ್ದ ಪರಂಧಾಮನನ್ನು ಪೊಲೀಸರೇ ಸಮೀಪದ 'ಅಸ್ಕರ್' ಆಸ್ಪತ್ರೆಗೆ ಸೇರಿಸಿದ್ದಾರೆ. ಪರಂಧಾಮ ಬದುಕುವ ಯಾವುದೇ ಲಕ್ಷಣಗಳಿರಲಿಲ್ಲ. ಅಲ್ಲಿಂದ ವಿಕ್ಟೋರಿಯಾ ಆಸ್ಪತ್ರೆಗೆ ತರುವ ಹೊತ್ತಿಗಾಗಲೇ ಪರಂಧಾಮ ಹೆಣವಾಗಿದ್ದ. ಪಾಪಿ ಚಿರಾಯು ಎಂಬಂತೆ ಸೈಕಲ್ ರವಿ ಹೇಗೋ ಬಚಾವಾಗಿಬಿಟ್ಟ. ■


ಶಶಿಶೇಖರ್ ನಾಯ್ಕ್ ಎಂಬ ರಾಜಕೀಯ ಅಚ್ಚರಿ

ಚಿತ್ರದುರ್ಗ ಲೋಕಸಭಾ ಚುನಾವಣೆ ನಿಧಾನವಾಗಿ ರಂಗೇರುತ್ತಿದೆ. ಜೆಡಿಎಸ್‌ನ ರತ್ನಾಕರ ಬಾಬು, ಬಜೆಪಿಯ ಜನಾರ್ಧನಸ್ವಾಮಿ, ಬಿಎಸ್‌ಪಿಯ ಜಯಣ್ಣ, ಕಾಂಗ್ರೆಸ್‌ನ ಡಾ. ತಿಪ್ಪೇಸ್ವಾಮಿ ಸೇರಿದಂತೆ ಹಲವಾರು ಪಕ್ಷೇತರರು ಹುರಿಯಾಳುಗಳಾಗಿ ಕಣಕ್ಕಿಳಿದಿದ್ದಾರೆ. ಇಡೀ ಲೋಕಸಭಾ ಕ್ಷೇತ್ರದಾದ್ಯಂತ ಹಾಲಿ, ಮಾಜಿ, ರಾಜಕಾರಣಿಗಳೆಲ್ಲಾ ಸಕ್ರಿಯವಾಗಿ ಬಿಟ್ಟಿದ್ದಾರೆ.


ಶಶಿಶೇಖರ

ಬಿಜೆಪಿಯ ಅಭ್ಯರ್ಥಿ ಜನಾರ್ಧನಸ್ವಾಮಿಯನ್ನು ಯದ್ವಾತದ್ವಾ ವೈಭವೀಕರಿಸಿ, ಜನರಲ್ಲಿ ಸಂಶಯ ಮೂಡುವಷ್ಟು ಉತ್ಪ್ರೇಕ್ಷೆಯ ಸಂಗತಿಗಳನ್ನು ಬಿಜೆಪಿಗಳು ಬಿತ್ತುತ್ತಿದ್ದಾರೆ. ಜೆಡಿಎಸ್ ಅಭ್ಯರ್ಥಿ ರತ್ನಾಕರ್ ಬಾಬು ಜೆಡಿಎಸ್‌ನ ಜಿಲ್ಲಾಧ್ಯಕ್ಷ ಎಸ್.ಕೆ. ಬಸವರಾಜನ್, ಕಾರ್ಯಾಧ್ಯಕ್ಷ ಎಂ.ಕೆ. ತಾಜ್‌ಫೀರ್, ಹಿರಿಯೂರಿನ ಜಯಣ್ಣ, ಮಾಜಿ ಶಾಸಕ ತಿಮ್ಮರಾಯಪ್ಪ ಮುಂತಾದವರ ದಂಡು ಕಟ್ಟಿಕೊಂಡು ಮತಯಾಚನೆಗೆ ಇಳಿದಿದ್ದಾರೆ. ಬಿಎಸ್‌ಪಿಯ ಜಯಣ್ಣ ತಮ್ಮ ನೀರಾವರಿ ಹೋರಾಟ ಹಾಗೂ ಜಿಲ್ಲೆಯ ಅಭಿವೃದ್ಧಿಯ ಭರವಸೆ ನೀಡುತ್ತಾ ಹೋರಾಟ ಮನೋಭಾವದ ಕಾರ್ಯಕರ್ತರೊಂದಿಗೆ ಅಖಾಡಕ್ಕಿಳಿದಿದ್ದಾರೆ. ಕಾಂಗ್ರೆಸ್‌ನ ತಿಪ್ಪೇಸ್ವಾಮಿ ತುಂಬಾ ಉತ್ಸುಕರಾಗಿ ಪ್ರಚಾರ ಸಭೆಗಳನ್ನು ಮಾಡುತ್ತಿದ್ದರೂ ಘಟಾನುಘಟಿಗಳೆಲ್ಲಾ ಪಕ್ಷ ತ್ಯಜಿಸಿರುವುದು ದೊಡ್ಡ ತಲೆನೋವಾಗಿದೆ.

ಈ ನಡುವೆ ನಿಜಕ್ಕೂ ಚರ್ಚೆಗೆ ಗ್ರಾಸವಾಗಿರುವವರು ರಾಷ್ಟ್ರೀಯ ಜನತಾದಳದಿಂದ ಸ್ಪರ್ಧಿಸಿರುವ ಶಶಿಶೇಖರ ನಾಯ್ಕ್. ಕಳೆದ ಚುನಾವಣೆಯಲ್ಲಿ ಇದೇ ಶಶಿಶೇಖರ್ ನಾಯ್ಕ್, ಹಿರಿಯೂರು ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆಗ ಅಷ್ಟಾಗಿ ಗಮನ ಸೆಳೆಯದ ಶಶಿಶೇಖರ ನಾಯ್ಕ್, ಲೋಕಸಭೆ ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಪುಟಗಟ್ಟಲೆ ಜಾಹೀರಾತು ನೀಡಿ ಭರ್ಜರಿ ಎಂಟ್ರಿ ಕೊಟ್ಟಿದ್ದಾರೆ. ಮೊದಲು ಭಾರತೀಯ ಜನತಾ ಪಕ್ಷ, ಅನಂತರ ಜನತಾದಳ, ಪ್ರಜಾರಾಜ್ಯಂ ಹೀಗೆ ಎಲ್ಲಾ ಪಕ್ಷಗಳ ಬಾಗಿಲು ಬಡಿದು ಟಿಕೆಟ್‌ಗೆ ಪ್ರಯತ್ನಿಸಿ ಕೊನೆಗೆ ಆರ್‌ಜೆಡಿಯಿಂದ ಕಣಕ್ಕಿಳಿದಿದ್ದಾರೆ. ಈತ ಒಂದೊಂದು ಬಾರಿ ಒಂದೊಂದು ಪಕ್ಷದ ಜಾಹೀರಾತು ನೀಡಿ ಶಾಕ್ ನೀಡುತ್ತಿದ್ದಾಗಲೇ ಎಲ್ಲಾ ಕಡೆ ಯಾರೀ ಶಶಿಶೇಖರ್ ನಾಯ್ಕ್ ಎಂಬಂತಹ ಚರ್ಚೆಗಳು ಚಾಲನೆ ಪಡೆದುಕೊಂಡವು.


ತಿಪ್ಪಾರೆಡ್ಡಿ

ಜಿಲ್ಲೆಯ ಲಕ್ಷಾಂತರ ಜನ ಆರಾಧಿಸುವ ಪವಾಡ ಪುರುಷ ಶ್ರೀಗುರು ತಿಪ್ಪೇರುದ್ರಸ್ವಾಮಿಯ ಧ್ವಜವನ್ನು ಹರಾಜಿನಲ್ಲಿ 26 ಲಕ್ಷ ರೂಪಾಯಿಗಳ ದಾಖಲೆ ಮೊತ್ತಕ್ಕೆ ಖರೀದಿಸಿದ ಶಶಿಶೇಖರ್ ನಾಯ್ಕ್, ಇಡೀ ಜಿಲ್ಲೆಯ ಜನರ ಮೂಗಿನ ಮೇಲೆ ಬೆರಳಿಟ್ಟು ಅಚ್ಚರಿಪಡುವಂತೆ ಮಾಡಿದ್ದರು. ಆನಂತರ ಗೊತ್ತಾದದ್ದೇ ಈತ ಚಳ್ಳಕೆರೆ ತಾಲ್ಲೂಕಿನ ಮನಮೈನಹಟ್ಟಿಯವ ಎಂಬುದು. ಲಂಬಾಣಿ ಸಮುದಾಯಕ್ಕೆ ಸೇರಿದ ಶಶಿಶೇಖರ ನಾಯ್ಕ್, ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಹಾಗೂ ಔದ್ಯಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರಂತೆ, ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಾರಂತೆ ಎಂಬ ಅಭಿಪ್ರಾಯಗಳು ಕೇಳಿಬರತೊಡಗಿದವು.

ಆರಂಭದಲ್ಲಿ ಶಶಿಶೇಖರ್ ನಾಯ್ಕ ಸ್ಪರ್ಧೆಯನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ, ಆದರೆ ಈಗ ಪರಿಸ್ಥಿತಿ ಬದಲಾಗಿದ್ದು ಕಣದಲ್ಲಿರುವ ಅಭ್ಯರ್ಥಿಗಳು ಶಶಿಶೇಖರ್ ನಾಯ್ಕರನ್ನು ಗಂಭೀರವಾಗಿ ಪರಿಗಣಿಸಬೇಕಾದ ವಾತಾವರಣ ನಿರ್ಮಾಣವಾಗಿದೆ. ಇಡೀ ಕ್ಷೇತ್ರದಾದ್ಯಂತ ಸರಿಸುಮಾರು ಒಂದು ಲಕ್ಷಕ್ಕೂ ಅಧಿಕ ಲಂಬಾಣಿ ಸಮುದಾಯದ ಮತಗಳಿವೆ. ಹೇಗಿದ್ದರೂ ಜಾತಿಗಳ ಧ್ರುವೀಕರಣ ಈ ಚುನಾವಣೆಯಲ್ಲಿ ನಿಚ್ಚಳವಾಗಿ ಕಂಡುಬರುತ್ತಿದೆ. ಬಿಜೆಪಿಯಿಂದ ಸ್ಪರ್ಧಿಸಿರುವ ಜನಾರ್ಧನಸ್ವಾಮಿಗೆ ಬೋವಿ ಸಮುದಾಯದವರೆಲ್ಲಾ ಒಗ್ಗಟ್ಟಾಗಿ ಮತ ಚಲಾಯಿಸುವುದಾದರೆ ತಮ್ಮದೇ ಸಮುದಾಯದ ಶಶಿಶೇಖರ್ ನಾಯ್ಕರನ್ನು ಏಕೆ ಬೆಂಬಲಿಸಬಾರದು ಎಂಬುದು ಲಂಬಾಣಿ ಸಮುದಾಯದ ಮುಖಂಡರ ಪ್ರಶ್ನೆ.

ಲೋಕಸಭಾ ಕ್ಷೇತ್ರದಲ್ಲಿ ಈಗಿರುವ ಪರಿಸ್ಥಿತಿಯಲ್ಲಿ ಲಂಬಾಣಿ ಸಮುದಾಯದ ಮತಗಳನ್ನು ಯಾವುದೇ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷದ ಪರವಾಗಿ ಹೋಲ್‌ಸೇಲ್ ಆಗಿ ಪ್ರಭಾವಿಸಿ ಹಾಕಿಸುವಷ್ಟು ಸಾಮರ್ಥ್ಯ ಯಾರಿಗೂ ಇಲ್ಲ.


ಪಾವಗಡ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಶಾಸಕ ಸೋಮ್ಲಾ ನಾಯ್ಕ್, ಬಿಜೆಪಿಯಲ್ಲಿದ್ದರೂ ತಾವು ಹೆಚ್ಚೆಚ್ಚು ಸಕ್ರಿಯವಾಗಿ ಮತ ಹಾಕಿಸಿದಷ್ಟೂ ಅದರ ಕ್ರೆಡಿಟ್ ಸಚಿವ ವೆಂಕಟರಮಣಪ್ಪನಿಗೆ ಹೋಗುತ್ತದೆ ಎಂಬ ಅಳುಕು ಅವರಿಗೆ ಇದ್ದೇ ಇದೆ. ಅಷ್ಟಕ್ಕೂ ಸಮುದಾಯದ ಅಭ್ಯರ್ಥಿಯೊಬ್ಬರನ್ನು ನಿರಾಕರಿಸಿ ಮತ ಚಲಾಯಿಸಿ ಎಂದು ಹೇಳಿ ತಮಗಿರುವ ರಾಜಕೀಯ ನೆಲೆಯನ್ನು ಕಳೆದುಕೊಳ್ಳಲು ಸ್ವತಃ ಸೋಮ್ಲಾನಾಯ್ಕ್‌ಗೆ ಇಷ್ಟವಿಲ್ಲ. ಚಿತ್ರದುರ್ಗ ಜಿ.ಪಂ.ನ ಮಾಜಿ ಸದಸ್ಯ ರಾಜಾನಾಯ್ಕ ಮತ್ತು ಅವರ ಪತ್ನಿ ಸರೋಜಾ ಬಾಯಿ ಕೂಡ ಸಮುದಾಯದ ವಿರೋಧ ಕಟ್ಟಿಕೊಳ್ಳಲು ತಯಾರಿಲ್ಲ. ಇನ್ನೂ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಿಂದ ಕಳೆದ ಬಾರಿ ಸ್ಪರ್ಧಿಸಿದ್ದ ದೇವೇಂದ್ರ ನಾಯಕ್‌ಗೆ ಲಂಬಾಣಿ ಸಮುದಾಯದ ಮತಗಳನ್ನು ಪ್ರಭಾವಿಸುವಷ್ಟು ಸಾಮರ್ಥ್ಯ ವಿಲ್ಲ.

ಚುನಾವಣೆ ಕಣದಲ್ಲಿ ಇರುವ ಲಂಬಾಣಿ ಸಮುದಾಯದ ಏಕೈಕ ಅಭ್ಯರ್ಥಿ ಶಶಿಶೇಖರ್ ನಾಯ್ಕ್ ಆಗಿರುವುದರಿಂದ ಇದು ನಮ್ಮ ಸಮುದಾಯದ ರಾಜಕೀಯ ಒಗ್ಗಟ್ಟು ಪ್ರದರ್ಶನಕ್ಕೊಂದು ಸವಾಲು ಎಂದು ಲಂಬಾಣಿ ಸಮುದಾಯ ಭಾವಿಸಿದರೆ ಅಚ್ಚರಿಯೇನಿಲ್ಲ. ಯಾವ್ಯಾವುದೋ ಲೆಕ್ಕಾಚಾರದಲ್ಲಿ ಲಂಬಾಣಿ ಸಮುದಾಯದ ಮತಗಳ ಮೇಲೆ ಕಣ್ಣಿಟ್ಟಿದ್ದವರಿಗೆ ಶಶಿಶೇಖರ ನಾಯ್ಕ್ ದೊಡ್ಡ ತಲೆನೋವಾಗಿ ಪರಿಗಣಿಸಿದ್ದಾರೆ. ಇದರ ಜೊತೆಗೆ ಆರ್‌ಜೆಡಿ ಎಂಬುದು ಕರ್ನಾಟಕದ ಮಟ್ಟಿಗೆ ಅಸ್ತಿತ್ವ ಇಲ್ಲದ ಪಾರ್ಟಿಯಾದರೂ ಚಿತ್ರದುರ್ಗದಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಲಾಲೂ ಪ್ರಸಾದ್ ಯಾದವ್ ಇಲ್ಲಿನ ಯಾದವ ಸಮುದಾಯಕ್ಕೆ ಬಹುದೊಡ್ಡ ರಾಜಕೀಯ ಸ್ಫೂರ್ತಿ. ಕೋದಂಡ ರಾಮಯ್ಯ ಮೊದಲ ಬಾರಿ ಸಂಸದರಾಗಿ ಆಯ್ಕೆಯಾದಾಗ ನಿರ್ಣಾಯಕ ಪ್ರಭಾವ ಬೀರಿದ್ದೆ ಲಾಲೂ ಪ್ರಸಾದ್ ಯಾದವ್. ಒಕ್ಕಲಿಗರಿಗೆ ತಮ್ಮ ನಾಯಕ ಯಾರು ಎಂದಾಕ್ಷಣ ದೇವೇಗೌಡರು ಹೇಗೆ ನೆನಪಿಗೆ ಬರುತ್ತಾರೋ ಹಾಗೆಯೇ ಇಲ್ಲಿನ ಯಾದವ ಸಮುದಾಯಕ್ಕೆ ಲಾಲೂ ಪ್ರಸಾದ್ ಯಾದವ್ ಸ್ಫೂರ್ತಿ ಪಟಲದಲ್ಲಿ ಅಚ್ಚೊತ್ತಿರುವ ರಾಜಕೀಯ ನಾಯಕ. ಹಾಗಾಗಿ ಆರ್‌ಜೆಡಿಯನ್ನು ಇಲ್ಲಿ ಹಗುರವಾಗಿ ಪರಿಗಣಿಸುವಂತಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡ ಕೋದಂಡರಾಮಯ್ಯನವರಿಗೆ ಆರ್‌ಜೆಡಿ ರಾಜ್ಯಾಧ್ಯಕ್ಷ ಕೃಷ್ಣಪ್ಪ ಕೂಡಾ ತಡೆಯಾಗಿದ್ದರೂ ಎಂಬುದು ಇಲ್ಲಿ ಸ್ಮರಣಾರ್ಹ.

ಇದೆಲ್ಲಾ ಲೆಕ್ಕಾಚಾರಗಳನ್ನಾಧರಿಸಿ ಶಶಿಶೇಖರ ನಾಯ್ಕ್ ತುಂಬಾ ಉತ್ಸುಕತೆಯಿಂದಲೇ ಆರ್‌ಜೆಡಿಯಿಂದ ಸ್ಪರ್ಧೆಗಿಳಿದಿದ್ದಾರೆ. ಲಂಬಾಣಿ ತಾಂಡಾಗಳು ಮತ್ತು ಗೊಲ್ಲರಹಟ್ಟಿಗಳನ್ನು ಪ್ರಧಾನವಾಗಿರಿಸಿಕೊಂಡು ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ. ಯಾದವ ಸಮುದಾಯದ ಮತಗಳು ನಿರ್ಣಾಯಕ ಸಂಖ್ಯೆಯಲ್ಲಿರುವ ಹಿರಿಯೂರು ವಿಧಾನಸಭಾ ಕ್ಷೇತ್ರವನ್ನು ವಿಶೇಷವಾಗಿ ಕೇಂದ್ರೀಕರಿಸಿರುವ ಶಶಿಶೇಖರ ನಾಯ್ಕ್, ತಮ್ಮ ಪರವಾಗಿ ಕಾರ್ಯನಿರ್ವಹಿಸುವಂತೆ ಪ್ರಮುಖ ಯಾದವ ಮುಖಂಡರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶಶಿಶೇಖರ ನಾಯ್ಕ್ ಹೋದಲ್ಲಿ ಬಂದಲ್ಲಿ "ನೋಡ್ತಾ ಇರಿ.... ನಾನು ಎಷ್ಟು ಓಟು ತಗೋತೀನಿ...!'' ಎಂದು ಹೇಳಿದರೆ ಅದನ್ನು ನಿರ್ಲಕ್ಷಿಸುವ ಧೈರ್ಯ ಯಾರೂ ಮಾಡುತ್ತಿಲ್ಲ. ಈ ನಡುವೆ ಪಾವಗಡ, ಚಳ್ಳಕೆರೆ, ಮೊಳಕಾಲ್ಮೂರುಗಳಲ್ಲಿ ಚಿರಂಜೀವಿ ಅಭಿಮಾನಿಗಳು ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ಪ್ರಜಾರಾಜ್ಯಂ ಬೆಂಬಲವೂ ಶಶಿಶೇಖರ್ ನಾಯ್ಕ್ ಬೆನ್ನಿಗಿದೆ.

ಯಾವುದೇ ಪ್ರಭಾವಿ ಪಕ್ಷಗಳ ಹಂಗಿಲ್ಲದೆ ಆರ್‌ಜೆಡಿಯಿಂದ ಕಣಕ್ಕಿಳಿದಿರುವ ಶಶಿಶೇಖರ್ ನಾಯ್ಕ್, ಹೋದಲ್ಲಿ ಬಂದಲ್ಲಿ ಯುವಕರ ದಂಡು ಅಣಿನೆರೆಯುತ್ತಿದೆ. ಚುನಾವಣಾ ಫಲಿತಾಂಶ ಏನೇ ಇರಲಿ, ಸದ್ಯದ ಮಟ್ಟಿಗೆ ಶಶಿಶೇಖರ್ ನಾಯ್ಕ ರಾಜಕೀಯವಾಗಿ ಅಚ್ಚರಿ ಮೂಡಿಸಿದ್ದಾರೆ. ■

ಹಾವು ಮುಂಗುಸಿಗಳಿಗೆ ಹೆದರಿದ ಗೌಡರ 'ಕಪ್ಪೆ ಜಿಗಿತ'


ಸದಾನಂದಗೌಡ

"ರಾಜ್ಯದಲ್ಲಿ ಈ ಬಾರಿ ಎಲ್ಲಾ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸ್ತೇವೆ. ನಿಜ ಹೇಳ್ಬೇಕಂದ್ರೆ ನಮಗೆ ಎದುರಾಳಿಗಳೇ ಇಲ್ಲ, ಇದ್ದರೂ ಎಲ್ಲೋ ಸಣ್ಣಮಟ್ಟಿಗೆ ಕಾಂಗ್ರೆಸಷ್ಟೆ" - ಇದು ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದ ಗೌಡರು ಮೊನ್ನೆ TV9 ಗೆ ಹೇಳಿದಂತಹ ಮಾತುಗಳು. Dead body ಎದುರಿಗಿದ್ದಾಗಲೂ ಹಲ್ಲು ಕಿಸಿದುಕೊಂಡೇ ಇರುವ ಗೌಡರ ಈ ಮಾತುಗಳನ್ನು ಕೇಳಿದ ಕರಾವಳಿಯ ಜನ ಹೊಟ್ಟೆ ಹಿಡಿದುಕೊಂಡು ನಕ್ಕಿದ್ದು ಸುಳ್ಳಲ್ಲ.

ಯಾಕೆಂದರೆ ತಮ್ಮ ಪಕ್ಷಕ್ಕೆ ಎದುರಾಳಿಯೇ ಇಲ್ಲ ಎಂದಿರುವ ಗೌಡರು ಸ್ವತಃ ತಮ್ಮ ಗುರು ರಾಮಭಟ್ಟರೆಂಬ ಎದುರಾಳಿಗೆ ಹೆದರಿ ಸ್ವಕ್ಷೇತ್ರವನ್ನೇ ಬಿಟ್ಟು ಓಡಿಹೋಗಿದ್ದಾರೆ. ಅಷ್ಟೇ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸುತ್ತೇವೆ ಎಂದಿರುವ ಗೌಡರು ಅಳೆದೂ ತೂಗಿ ಕೊನೆಗೆ ಸೇಫ್ ಎಂದು ಉಡುಪಿ ಕ್ಷೇತ್ರವನ್ನು ಪರಿಗಣಿಸಿ ಇಲ್ಲಿಂದ ಈಗ ಸ್ಪರ್ಧಿಸುತ್ತಿದ್ದಾರೆ.

ಬಿಜೆಪಿಯ ರಾಜ್ಯಾಧ್ಯಕ್ಷ ಎಷ್ಟು ಹಾಸ್ಯಾಸ್ಪದ ವ್ಯಕ್ತಿಯಾಗಿ ಗೋಚರಿಸುತ್ತಿದ್ದಾರೆ ಎಂದರೆ ಇವರ ಕೃಪೆಯಿಂದಾಗಿ ಕರಾವಳಿಯ ಜನ ಪುಕ್ಕಟೆ ಮನರಂಜನೆ ಪಡೆಯುತ್ತಿದ್ದಾರೆ.

ಸ್ವಯಂಘೋಷಿತ ಶಿಸ್ತಿನ ಪಕ್ಷವಾದ ಬಿಜೆಪಿಯ ಚುನಾವಣಾ ಅಭ್ಯರ್ಥಿಗಳ ಆಯ್ಕೆಗಾಗಿ ಕಮಿಟಿಗಳನ್ನು ನೇಮಿಸಲಾಗಿತ್ತು. ಇಂತಹ ಬರೋಬ್ಬರಿ ಎಂಟು ಕಮಿಟಿಗಳೂ ಮಂಗಳೂರು ಕ್ಷೇತ್ರಕ್ಕಾಗಿ ಸದಾನಂದ ಗೌಡರನ್ನೇ ಸೂಚಿಸಿದ್ದವು. ಆದರೆ ಭಟ್ಟರನ್ನು ಕಂಡು ಗೌಡರು ಎಷ್ಟು ಹೆದರಿದರೆಂದರೆ ಅವರು ಈ ಕಮಿಟಿಗಳ ಅಭಿಪ್ರಾಯವನ್ನೇ ತಿರಸ್ಕರಿಸಿ ಉಡುಪಿಗೆ ಓಡಿಹೋದರು.

ಅಂದಹಾಗೆ ಈಗ ಮಂಗಳೂರಿನಿಂದ ಬಿಜೆಪಿ ಪರವಾಗಿ ಸ್ಪರ್ಧಿಸುತ್ತಿರುವ ನಳಿನ್‌ಕುಮಾರ್ ಹೆಸರು ಯಾವ ಕಮಿಟಿಯೂ ಸೂಚಿಸದೇ ಇದ್ದರೂ ಗೌಡರು ಆತನನ್ನೇ ಕಣಕ್ಕೆ ಇಳಿಸಿದ್ದಾರೆ. ಆ ಮೂಲಕ ತಮ್ಮ ಪಕ್ಷದ ಕಮಿಟಿಗಳಿಗೆ ಯಾವ ಬೆಲೆಯೂ ಇಲ್ಲದಂತೆ ನೋಡಿಕೊಂಡಿದ್ದಾರೆ. ಇಷ್ಟಕ್ಕೂ ಗೌಡರ ಭಯಕ್ಕೆ ಕಾರಣವಾದರೂ ಏನು?

ಹೇಳಿಕೇಳಿ ಶಾಸಕ ರಘುಪತಿ ಭಟ್ಟ ಮತ್ತು ಗೃಹ ಮಂತ್ರಿ ವಿ.ಎಸ್. ಆಚಾರ್ಯರಂಥವರು ಈಗಾಗಲೇ ಬಿಜೆಪಿಯ 'ಕೀರ್ತಿ ಪತಾಕೆ'ಯನ್ನು ಮಂಗಳೂರಿನಲ್ಲಿ ಹಾರಿಸಿ ಜನರಲ್ಲಿ ದಿಗಿಲು ಹುಟ್ಟಿಸಿದ್ದಾರೆ. ಅದಕ್ಕೇ ಗೌಡರು ಪಲಾಯನ ಮಾಡಿದ್ದಾರೆ.

ಆದರೆ ಉಡುಪಿ ಗೌಡರಿಗೆ ಒಲಿಯುತ್ತದೆಯೇ ಎಂಬುದರ ಬಗ್ಗೆಯೂ ಅನುಮಾನಗಳಿವೆ. ಮೊದಲೇ ಗೌಡರಿಗೆ ಸ್ವಂತ ಚರಿಷ್ಮಾ ಎಂಬುದೇ ಇಲ್ಲ. ಇನ್ನು ಉಡುಪಿಯಲ್ಲಿ ಗೌಡರಿಗೆ ಜಾತಿ ಬಲವೂ ಇಲ್ಲ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳದಿಂದ ಸುಳ್ಯ ತನಕವಷ್ಟೇ ಗೌಡರ ಜಾತಿ ಕಾಣಿಸಿಕೊಳ್ಳುತ್ತಾ ಮಂಗಳೂರು, ಉಡುಪಿ, ಕಾರ್ಕಳ, ಕುಂದಾಪುರದಲ್ಲಿ ಗೌಡರೆಂದರೆ ಧಾರವಾಡದವರೆಂಬ ಭಾವನೆ ಇದೆ. (ಕಚ್ಚೆಪಂಚೆ ಉಟ್ಟ ಉತ್ತರ ಕರ್ನಾಟಕದ ಎಲ್ಲರನ್ನು ಸಾರಾಸಗಟಾಗಿ ಇಲ್ಲಿಯವರು "ಗೌಡ್ರು - ಏನ್ ಗೌಡ್ರೇ'' ಎಂದೇ ಕರೆಯುತ್ತಾರೆ).

ಇನ್ನು ಉಡುಪಿ ಲೋಕಸಭಾ ಕ್ಷೇತ್ರಕ್ಕೆ ಈಗ ಸೇರ್ಪಡೆಯಾಗಿರುವ ಚಿಕ್ಕಮಗಳೂರಿನ ಗೌಡರಿಗೂ ಸದಾನಂದ ಗೌಡರ ತುಳುಗೌಡಿಕೆಗೂ ಹೇಳುವಂತಹ ಸಂಬಂಧವೇನಿಲ್ಲ. ಹಾಗಿದ್ದೂ ತನ್ನ ಸ್ವಕ್ಷೇತ್ರಕ್ಕಿಂತ ಉಡುಪಿಯೇ ಬೆಟರ್ ಎಂದುಕೊಂಡಿದ್ದಾರೆ ಸದಾನಂದ ಗೌಡರು. ಇದು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆ ಎಂಬುದನ್ನು ಫಲಿತಾಂಶಗಳೇ ಹೇಳಬೇಕು.

ಗೌಡರ ಎಲ್ಲಾ ನಡವಳಿಕೆಗೆ "ಮಾಡಿದ್ದುಣ್ಣೋ ಮಹಾರಾಯ" ಎಂದೇ ಜನತೆ ಇದೀಗ ಆಡಿಕೊಂಡು ತಿರುಗುತ್ತಿದ್ದಾರೆ. ಭಯಂಕರ posing ಮಾಸ್ಟರ್ ಆಗಿರುವ ಗೌಡರು 'ಮಂಗಳೂರಿಗೆ ಹಗಲು ರೈಲು ಓಡಿಸ್ತೇನೆ' ಎಂಬ ಆಶ್ವಾಸನೆ ನೀಡಿದ್ದರು. ಅದಿನ್ನೂ ಅನುಷ್ಠಾನಕ್ಕೆ ಬಾರದೆ ಇನ್ನೂ ಮಾತಿನ ರೈಲಾಗಿಯೇ ಉಳಿದಿದೆ. ಹಾಗೆಯೇ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಿಂದ 75 ಲಕ್ಷ ರೂ.ಗಳನ್ನು RSS ನ ಕೇಶವಸ್ಮೃತಿ ಸಂವರ್ಧನ ಸಮಿತಿಗೆ ನೀಡಿ ನಿಧಿಯನ್ನು ದುರ್ಬಳಕೆ ಮಾಡಿಕೊಂಡ ಆರೋಪವೂ ಇವರ ಮೇಲಿದೆ.

ಕೋಮು ದ್ವೇಷಿ ಹಿಂದುತ್ವ ಸಿದ್ಧಾಂತದ ಮೇಲೆ ಅಧಿಕಾರ ಗಿಟ್ಟಿಸಿದ್ದರೂ ತನ್ನ ಊರಲ್ಲಿ ತಾನೊಬ್ಬನೇ ಗುತ್ತಿಗೆ ಹಿಡಿದಿರಬೇಕೆಂದೇ ಗೌಡರು ಶ್ರೀರಾಮ ಸೇನೆಯ ಅರುಣ್ ಕುಮಾರ್ ಪುತ್ತಿಲರ ಸಾರ್ವಜನಿಕ ಶನಿಪೂಜೆ ಮೇಲೆ ಪೊಲೀಸ್ ದಾಳಿ ನಡೆಸಿದ್ದರು. ಆ ಮೂಲಕ ಸಾರ್ವಜನಿಕರ ಕೋಪಕ್ಕೂ ತುತ್ತಾದರು (ಕಳೆದ ವರ್ಷ ಗೌಡರ ಪುತ್ರ ಕಾರ್ತಿಕ್ ಗೌಡ ಕುಡಿದು ಅಪಘಾತ ಮಾಡಿಕೊಂಡು ಮಣಿಪಾಲದಲ್ಲಿ ತುರ್ತು ಚಿಕಿತ್ಸೆ ಪಡೆಯುತ್ತಿದ್ದಾಗ "ಇದು ಶನಿಯ ಶಾಪ" ಎಂದೇ ಪುತ್ತೂರಿಗರು ಆಡಿಕೊಂಡಿದ್ದರು.) ಅಷ್ಟೇ ಅಲ್ಲ, ಜಿಲ್ಲೆಯಲ್ಲಿ ತನಗೆ ಪ್ರತಿಯಾಗಿ ಶ್ರೀರಾಮಸೇನೆ ಬೆಳೆಯದಿರಲಿ ಎಂದೇ ಜಿಲ್ಲಾಡಳಿತದ ಮೂಲಕ ಅದರ ಅಧ್ಯಕ್ಷ ಪ್ರಮೋದ್ ಮುತಾಲಿಕನ ಮೇಲೆ ನಿರ್ಬಂಧ ಹೇರಿ ಕಡಿವಾಣ ಹಾಕಿಸಿದ್ದರು.

ಕಳೆದ ವರ್ಷ ಪುತ್ತೂರಿನಲ್ಲಿ ಲಕ್ಷಾಂತರ ಜನ (ಮುಖ್ಯವಾಗಿ ಬಡ ಕೂಲಿ ಕಾರ್ಮಿಕರು) ಚಿಕುನ್ ಗುನ್ಯಾ ಪೀಡಿತರಾಗಿ ನರಳುತ್ತಿದ್ದಾಗ ಅಧಿಕಾರದಲ್ಲಿದ್ದ ಇದೇ ಗೌಡರು ಊರಿನ ಜನರನ್ನೇ ಮರೆತಿದ್ದರಲ್ಲದೇ ಜಿಲ್ಲೆಯ ಉಸ್ತುವಾರಿ ಹೊತ್ತಿದ್ದ ಪಾಲೆಮಾರ್ "ಪುತ್ತೂರಿನಲ್ಲಿ ಒಂದೇ ಒಂದು ಚಿಕುನ್‌ಗುನ್ಯ ಪ್ರಕರಣ ದಾಖಲಾಗಿಲ್ಲ'' ಎಂದು ಹೇಳಿಕೆ ನೀಡುವಂತೆ ಮಾಡಿದ್ದರು. ಹೀಗೆ ತಿಪ್ಪೆ ಸಾರಿಸುವುದರ ಮೂಲಕ ಜನರ ಗಾಯಕ್ಕೆ ಉಪ್ಪು ಸವರಿದ್ದನ್ನು ಜನರು ಇನ್ನೂ ಮರೆತಿಲ್ಲ.

ನಗುಮುಖದೊಂದಿಗೆ ಒಳ್ಳೆಯವನಂತೆ ತೋರಿಸಿಕೊಳ್ಳುವ ಗೌಡರ ಅಸಲಿಯತ್ತು ಅವರ ಬಗ್ಗೆ ಗೊತ್ತಿದ್ದವರಿಗೆ ಅಪರಿಚಿತವೇನಲ್ಲ. ಹಿರಿಯ ಸಾಹಿತಿ ಯು.ಆರ್. ಅನಂತಮೂರ್ತಿ ಬಗ್ಗೆ ಕೀಳಾಗಿ ಮಾತಾಡಿದ್ದು ಬದಿಗಿರಲಿ, ತನ್ನನ್ನು ಸುಳ್ಯದಿಂದ ಪುತ್ತೂರಿಗೆ ತಂದು ರಾಜಕೀಯ ಕಲಿಸಿದ ಗುರು ರಾಮಭಟ್ಟರನ್ನೇ "ಅರೆಗ್ ಮರ್ಲ್ ಪತ್‌ದಂಡ್ (ಅವರಿಗೆ ಹುಚ್ಚು ಹಿಡಿದಿದೆ)'' ಎಂದು ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಿ ಹೀಯಾಳಿಸಿದ್ದರು.


ಇಂತಹ ಮಹಾಶಯನನ್ನು ಇಲ್ಲಿನ ಜನ ಒದ್ದು ಜಾರಿಸದಿದ್ದರೆ ದೊಡ್ಡ ತಪ್ಪು ಮಾಡಿದಂತಾಗುತ್ತದೆ.

● ಶಶಿ ಪುತ್ತೂರು, ದಕ್ಷಿಣ ಕನ್ನಡ



ಮಲ್ಲಿಕಾರ್ಜುನ್

ದಾವಣಗೆರೆ: ಮಲ್ಲಿಕಾರ್ಜುನ ನಾಗಾಲೋಟ



ಶಾಮನೂರು


ಕಾಂಗ್ರೆಸ್ ಗ್ಯಾರಂಟಿಯಾಗಿ ಗೆದ್ದೇಗೆಲ್ಲುವ ಕ್ಷೇತ್ರಗಳಲ್ಲಿ ದಾವಣಗೆರೆಯೂ ಒಂದೆಂದು ಭಾವಿಸಿದೆ. ಇದಕ್ಕೆ ಹಲವಾರು ಕಾರಣಗಳಿವೆ.

ಬಿಜೆಪಿಯ ಸಿದ್ದೇಶ್‌ಗೆ ಬಡವರಿರಲಿ ಶ್ರೀಮಂತರನ್ನೂ ಹತ್ತಿರಕ್ಕೆ ಸೇರಿಸದಷ್ಟು ಮೈತುಂಬಾ ಅಹಂಕಾರವಿದೆ. ದಿನಬೆಳಗಾದರೆ ಹಣ ಮಾಡುವ ಹೊಸದಾರಿ ಹುಡುಕುವುದನ್ನು ಬಿಟ್ಟರೆ ಕ್ಷೇತ್ರದ ಜನರ ಕಷ್ಟಗಳೇನು, ಒಬ್ಬ ಎಂ.ಪಿ. ಯಾಗಿ ತನ್ನ ಜವಾಬ್ದಾರಿಗಳೇನೆಂದು ಒಂದು ದಿನವೂ ಯೋಚಿಸಿದವರಲ್ಲ. ಮತ್ತೊಂದೆಡೆ ಕಾಂಗ್ರೆಸ್‌ನ ಮಲ್ಲಿಕಾರ್ಜುನ್‌ಗೆ ಅಧಿಕಾರವಿರಲಿ, ಇಲ್ಲದಿರಲಿ ಸದಾ ಜನರೊಂದಿಗೆ ಬೆರೆತು ಕೆಲಸ ಮಾಡುವುದು ಗೊತ್ತಿದೆ. ರಸ್ತೆ, ಸೇತುವೆ, ಕ್ರೀಡಾಂಗಣ ನಿರ್ಮಾಣಗಳ ಕೆಲಸ ಮಾಡಿಸಿ ಇಡೀ ದಾವಣಗೆರೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸಿರುವುದನ್ನೂ ಜನ ನೆನೆಯುತ್ತಿದ್ದಾರೆ. ಶಾಮನೂರು ಫ್ಯಾಮಿಲಿಗೆ ಹಣ ದುಡಿಯುವುದೂ ಗೊತ್ತಿದೆ. ದುಡಿದ ಹಣವನ್ನು ಜನರಿಗಾಗಿ ಖರ್ಚು ಮಾಡುವುದೂ ಗೊತ್ತಿದೆ. ಹಾಗಾಗಿ ಕಾಂಗ್ರೆಸ್ ಪಾಳೆಯದಲ್ಲಿ ಹಾಗೂ ಮತದಾರರಲ್ಲಿ ಮಲ್ಲಿಕಾರ್ಜುನ್ ಬಗ್ಗೆ ಈ ಬಾರಿ ಭಾರೀ ವಿಶ್ವಾಸ ಕಾಣುತ್ತಿದೆ.

ಇಲ್ಲಿ ಬಿಜೆಪಿಗಳು ತಾವೇ ಅನೇಕ ಸಮಸ್ಯೆಗಳನ್ನು ಸೃಷ್ಟಿಸಿಕೊಂಡಿದ್ದಾರೆ. ದಲಿತರು, ಮುಸ್ಲಿಂ, ಕ್ರಿಶ್ಚಿಯನ್ನರ ಮೇಲಿನ ನಿರಂತರ ದಾಳಿಗಳಿಂದಾಗಿ ಈ ಸಮುದಾಯಗಳ ಅಂದಾಜು 5 ಲಕ್ಷ ಮತದಾರರಿಗೆ ಬಿಜೆಪಿ ಬಗ್ಗೆ ದ್ವೇಷ ಹುಟ್ಟಿಕೊಂಡಿದೆ. ಅದೇ ರೀತಿ ಸಿದ್ದೇಶ್ವರರ ಕೆಟ್ಟ ಜಾತಿ ರಾಜಕೀಯ ನೋಡಿ ಬೇಸತ್ತಿರುವ 2 ಲಕ್ಷದಷ್ಟು ಪಂಚಮಸಾಲಿ ಲಿಂಗಾಯತರು ಈ ಬಾರಿ ಕಾಂಗ್ರೆಸ್‌ನತ್ತ ತಿರುಗುತ್ತಿದ್ದಾರೆ. ಪಂಚಮಸಾಲಿಗಳು ದಾವಣಗೆರೆಯಲ್ಲಿ ಅಂದಾಜು 40 ಸಾವಿರ, ಹರಪನಹಳ್ಳಿಯಲ್ಲಿ 50 ಸಾವಿರ, ಹರಿಹರದಲ್ಲಿ 40, ಚನ್ನಗಿರಿಯಲ್ಲಿ 30, ಹೊನ್ನಾಳಿಯಲ್ಲಿ 20 ಸಾವಿರದಷ್ಟು ಇದ್ದಾರೆ. ಈ ಬಾರಿ ಇವರೆಲ್ಲರೂ ಒಗ್ಗಟ್ಟಾಗುತ್ತಿದ್ದು, ಜನಾಂಗದ ಲೀಡರ್‌ಗಳಾದ ಎಂ.ಟಿ.ಸುಭಾಷ್‌ಚಂದ್ರ ಹಾಗೂ ಕೆಂಚ ಪಾಟೀಲ್ ಜೊತೆಗೂಡಿ ಕಾಂಗ್ರೆಸ್ ಪರ ಕಾಣಿಸಿಕೊಂಡಿದ್ದಾರೆ.



ಸುಭಾಷ್‌ಚಂದ್ರ



ಸಿದ್ದೇಶ್‌ಗೆ ಇನ್ನೊಂದು ಹೊಡೆತ ಕುರುಬ ಜನಾಂಗದ್ದು. ಸುಮಾರು 2 ಲಕ್ಷದಷ್ಟಿರುವ ಇವರು ಸಿದ್ದರಾಮಯ್ಯನವರ ಮಾತಿಗೆ ಬೆಲೆ ಕೊಟ್ಟು ಈ ಬಾರಿ ಸಾಲಿಡ್ಡಾಗಿ ಕಾಂಗ್ರೆಸ್ ಹಿಂದೆ ನಿಲ್ಲುತ್ತಿದ್ದಾರೆ.

ಇದೆಲ್ಲದರ ಜೊತೆಗೆ ಬಿಜೆಪಿಯ ಕೋಮುವಾದಿ ಹಿಂಸೆಯ ರಾಜಕೀಯದಿಂದ ರೊಚ್ಚಿಗೆದ್ದಿರುವ ಜಿಲ್ಲೆಯ ರೈತರು, ಪ್ರಗತಿಪರರು, ದಲಿತರೆಲ್ಲಾ ಅನಿವಾರ್ಯವಾಗಿ ಕಾಂಗ್ರೆಸ್ ಗೆಲ್ಲಲಿ ಎನ್ನುತ್ತಿದ್ದಾರೆ.

ಸಾದರ ವೋಟುಗಳು ಹೇಗೂ ವಿಭಜನೆಯಾಗಲಿವೆ. ಬಿಜೆಪಿಯ ಸಿದ್ದೇಶ್ ಸೋತು ಮೂಲೆ ಸೇರಲು ಇಷ್ಟು factorಗಳು ಮೇಲ್ನೋಟಕ್ಕೆ ಕಾಣುತ್ತಿವೆ. ■

ಸಿದ್ದೇಶ್ ಪೀಕಲಾಟ

ಕೋಮುವಾದಿ ಬಿಜೆಪಿಯ ಜಾತಿವಾದಿ ಸಿದ್ದೇಶ್‌ಗೆ ಸೋಲು?

■ ಚಂದ್ರಶೇಖರ ತೋರಣಘಟ್ಟ

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ನಿಧಾನವಾಗಿ ರಂಗೇರುತ್ತಿವೆ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ನೇರ ಸ್ಪರ್ಧೆ ನಡೆಯಲಿದ್ದು ಕಾಂಗ್ರೆಸ್ ಪಕ್ಷದಿಂದ ಶಾಮನೂರು ಶಿವಶಂಕರಪ್ಪನವರ ಮಗ ಎಸ್.ಎಸ್. ಮಲ್ಲಿಕಾರ್ಜುನ್ ಕಣಕ್ಕಿಳಿದಿದ್ದಾರೆ. ಬಿಜೆಪಿ ಪಕ್ಷದ ವತಿಯಿಂದ ಮಾಜಿ ಸಂಸದ ದಿವಂಗತ ಮಲ್ಲಿಕಾರ್ಜುನಯ್ಯನವರ ಮಗ ಮತ್ತು ಹಾಲಿ ಸಂಸದ ಜಿ.ಎಂ. ಸಿದ್ದೇಶ್ ಇದ್ದಾರೆ.

ಈ ಹಿಂದೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ತನ್ನ ಪ್ರತಿಸ್ಪರ್ಧಿಯಾಗಿ ಮಲ್ಲಿಕಾರ್ಜುನ್ ನಿಲ್ಲುತ್ತಾರೆನ್ನುವ ವದಂತಿಯಿಂದಲೇ ಈಗಿನ ಕೃಷಿ ಮಂತ್ರಿ ಎಸ್.ಎ. ರವೀಂದ್ರನಾಥರವರ ತಳ ಅದುರಿತ್ತು. ಆದರೆ ನಾಮಪತ್ರ ಕ್ಕಾಗಿನ ಕಿತ್ತಾಟದಿಂದಾಗಿ ತನ್ನ ವಿರುದ್ಧ ಪ್ರಬಲ ಅಭ್ಯರ್ಥಿಯೇ ಇಲ್ಲವಾದಾಗ ರವೀಂದ್ರನಾಥ್ ಸುಲಭವಾಗಿ ಗೆದ್ದುಬಂದಿದ್ದರು. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ, ಅಂದಿನ ಸ್ವಯಂಕೃತಾಪರಾಧದಿಂದ ಪಾಠ ಕಲಿತ ಕಾಂಗ್ರೆಸ್ ಸಿದ್ದೇಶ್ ವಿರುದ್ಧ ಮಲ್ಲಿಕಾರ್ಜುನ್‌ರಂತಹ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದು ಆ ಪಕ್ಷದ ಗೆಲುವಿಗೆ ಮುನ್ಸೂಚನೆ ನೀಡಿದಂತಾಗಿದೆ.

"ಸೋನಿಯ ಗಾಂಧಿ ನನ್ನ ವಿರುದ್ಧ ನಿಂತರೂ ನಾನು ಗೆಲ್ಲುತ್ತೇನೆ" ಎಂದು ಸಿದ್ದೇಶ್ ದುರಹಂಕಾರದಿಂದ ಹೇಳುತ್ತಿದ್ದಾರೆ. ಇನ್ನು ಮುಖ್ಯಮಂತ್ರಿ ಯಡಿಯೂರಪ್ಪ ಘನತೆ ಮರೆತ ತನ್ನ ದೈನಂದಿನ ಶೈಲಿಯಲ್ಲಿ "ಸಿದ್ದೇಶ್ ಈಗಾಗಲೇ ಗೆದ್ದಾಗಿದೆ, ಲೀಡ್ ಎಷ್ಟು ಎಂದು ನೋಡಬೇಕಷ್ಟೆ" ಎಂದಿದ್ದಾರೆ. ವಾಸ್ತವವಾಗಿ ಸಿದ್ದೇಶ್ ಮತ್ತು ಯಡಿಯೂರಪ್ಪನ ಹೇಳಿಕೆಗಳು ಸೋಲಿನ ಭಯದ ಹತಾಶೆಯಿಂದ ಕೂಡಿವೆ ಎಂದು ಇಲ್ಲಿನ ಚುನಾವಣಾರಂಗ ನೋಡಿದರೆ ಅರ್ಥವಾಗುತ್ತವೆ.



ಸಿರಿಗೆರೆ ಸ್ವಾಮೀಜಿ

ಪರಿಸ್ಥಿತಿ ಮತ್ತು ಕ್ಷೇತ್ರದ ವಾಸ್ತವಗಳೇನು?

ಆಪರೇಷನ್ 'ಕಮಲ'ದ ಮೂಲಕವೇ ರೂಪುಗೊಂಡ ಬಿಜೆಪಿ ಸರ್ಕಾರ ಮತ್ತದರ ನಾಯಕರು ಸರ್ವಾಧಿಕಾರಿಗಳಂತೆ, ಪಕ್ಕಾ ಜಾತಿವಾದಿಗಳಂತೆ, ನೈಸರ್ಗಿಕ ಸಂಪತ್ತಿನ ಲೂಟಿಗೆ ರತ್ನಗಂಬಳಿ ಹಾಸಿರುವ ದಗಾಕೋರರಂತೆ, ಬಹಳಷ್ಟು ಸಾರಿ ಬಫೂನ್‌ಗಳಂತೆ ವರ್ತಿಸಿರುವುದರಿಂದ ಮತದಾರರು ಈಗ ಅವರ ಬಗ್ಗೆ ಭ್ರಮನಿರಸನಗೊಂಡಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪರವಾಗಿದ್ದ ಮಧ್ಯಮ ವರ್ಗ ಮತ್ತು ದಲಿತ, ಹಿಂದುಳಿದ ಜನಾಂಗದವರು ಈ ಲೋಕಸಭಾ ಚುನಾವಣೆಯಲ್ಲಿ ಬೆಂಬಲಿಸುತ್ತಿಲ್ಲ ಎಂಬ ವಾಸ್ತವ ಕ್ಷೇತ್ರದಲ್ಲಿ ಎದ್ದು ಕಾಣುತ್ತಿದೆ.

ಜಿಲ್ಲೆಯ ತಾಲ್ಲೂಕುಗಳ ಪರಿಸ್ಥಿತಿ ಏನು?

ಇಡೀ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕಾಗಿರುವ ಜಗಳೂರಿನ ಜನ ಭದ್ರಾ ಮೇಲ್ದಂಡೆ ಯೋಜನೆ ಮತ್ತು 32 ಕೆರೆ ನೀರಾವರಿ ಯೋಜನೆಗಳಲ್ಲಿ ವಂಚನೆಗೊಳಗಾಗಿರುವುದರಿಂದ ಬಿಜೆಪಿ ಸರ್ಕಾರದ ವಿರುದ್ಧ ಸಂಘಟನಾತ್ಮಕ ಹೋರಾಟ ನಡೆಸಿದ್ದಾರೆ. ಬಿಜೆಪಿಯ ಅನಾಚಾರಗಳ ವಿರುದ್ಧ ಜನಾಭಿಪ್ರಾಯ ರೂಪಿಸಿ ಗೆದ್ದು ಬಂದಿರುವ ಕಾಂಗ್ರೆಸ್ ಶಾಸಕ ಎಸ್.ವಿ. ರಾಮಚಂದ್ರರ ಬಗೆಗಿರುವ ವಿಶ್ವಾಸ ಬಿಜೆಪಿ ವಿರುದ್ಧದ ಶಕ್ತಿಯಾಗಿ ಈ ಚುನಾವಣೆಯಲ್ಲಿ ನೆರವಾಗಲಿದೆ.

ಹರಪನಹಳ್ಳಿ ತಾಲ್ಲೂಕಿನ ಜನ ಗಣಿ ಲೂಟಿಕೋರ ಕರುಣಾಕರ ರೆಡ್ಡಿ ಹರಿಸಿದ ಹಣದ ಹೊಳೆಗೆ ಮರುಳಾಗಿ ಮತ್ತು ಅಂದಿನ ಶಾಸಕ ಪರಮೇಶ್ವರ ನಾಯಕನ ಅಂದಾದುಂದಿ ಕೆಲಸಗಳಿಂದ ಬೇಸತ್ತು ಬಿಜೆಪಿಯನ್ನು ಬೆಂಬಲಿಸಿದ್ದರು. ಮಾತ್ರವಲ್ಲ, ಆ ಪಕ್ಷವನ್ನು ಅಧಿಕಾರಕ್ಕೆ ತಂದರೆ ತಾಲ್ಲೂಕಿನ ಭವಿಷ್ಯ ಬದಲಾಗುತ್ತೆಂದು ಕನಸು ಕಂಡು ಕರುಣಾಕರ ರೆಡ್ಡಿಯನ್ನು ಗೆಲ್ಲಿಸಿದ್ದರು. ಆದರೆ ಕರುಣಾಕರ ರೆಡ್ಡಿಯಿಂದ ಈ ಕ್ಷೇತ್ರಕ್ಕೆ ಒಳ್ಳೆಯದಾಗುವ ಮಾತು ಒತ್ತಟ್ಟಿಗಿರಲಿ, ಬಿಜೆಪಿಯ ಶಾಸಕರೇ ಇವನ ಭೇಟಿಗಾಗಿ ನಾಲ್ಕಾರು ದಿನಗಳ ಕಾಲ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಕ್ಷೇತ್ರದ ಜನರಿಗೆ ಆತನ ದರ್ಶನವಂತೂ ಸಾಧ್ಯವೇ ಇಲ್ಲ, ಇದು ಜನರನ್ನು ಕೆರಳಿಸಿದೆ.

ಚನ್ನಗಿರಿ ಕ್ಷೇತ್ರದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಗೆದ್ದ ಹೊಸತರಲ್ಲಿ ಬಹಳ ಸಭ್ಯನಂತೆ ಪೋಸ್ ಕೊಡುತ್ತಿದ್ದ. ಆದರೆ ಒಂದೆರಡು ತಿಂಗಳಲ್ಲೇ ಈತನ ಮುಖವಾಡ ಕಳಚಿಬಿದ್ದು ಈಗ ದುರಹಂಕಾರಗಳ ಪ್ರತಿರೂಪದಂತೆ ವರ್ತಿಸುತ್ತಿದ್ದಾನೆ. ತನ್ನ ಜಾತಿಯವರು ಮಾತ್ರ ಮನುಷ್ಯರಂತೆ ನೋಡುವ ದುಷ್ಟನೀತ. ವಿರೂಪಾಕ್ಷಪ್ಪ ಮತ್ತು ಆತನ ಮಗ ನಡೆದುಕೊಳ್ಳುವ ರೀತಿಯೇ ಚುನಾವಣೆಯಲ್ಲಿ ಬಿಜೆಪಿಗೆ ಶಾಪವಾಗಿ ಪರಿಣಮಿಸಲಿದೆ.

ದಾವಣಗೆರೆ ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಲ್ಪಸಂಖ್ಯಾತರ ಪ್ರಾರ್ಥನ ಮಂದಿರಗಳ ಮೇಲೆ ಹಿಂದೂ ಮತಾಂಧರು ನಡೆಸಿದ ದಾಳಿಗಳು ಆ ಸಮುದಾಯಗಳಲ್ಲಿ ಗಾಯಗಳಾಗಿ ಉಳಿದಿವೆ. ಮುಸ್ಲಿಂರ ಸುಮಾರು 2.25 ಲಕ್ಷ ಓಟುಗಳು ಮತ್ತು ಕ್ರಿಶ್ಚಿಯನ್ನರ 50-60 ಸಾವಿರ ಓಟುಗಳು ಬಿಜೆಪಿಯ ವಿರುದ್ಧ ನಿರ್ಣಾಯಕ ಮಾತ್ರ ವಹಿಸಲಿವೆ.

ಚೆಡ್ಡಿಗಳ ಕಿತ್ತಾಟ


ಬಿಜೆಪಿಯಲ್ಲಿನ ಭಿನಾಭಿಪ್ರಾಯ ಬರೀ ರಾಜ್ಯಮಟ್ಟದಲ್ಲಿಲ್ಲ, ಅದು ಸ್ಥಳೀಯವಾಗಿಯೂ ನಡೆಯುತ್ತಿದ್ದು ಇಲ್ಲಿ ಸಂಸದ ಸಿದ್ದೇಶ್ ಮತ್ತು ಕೃಷಿ ಮಂತ್ರಿ ರವೀಂದ್ರನಾಥ್ ನಡುವಿನ ಕಿತ್ತಾಟವಾಗಿ ರೂಪುಗೊಂಡಿದೆ. ಇತ್ತೀಚೆಗೆ ತುರ್ಚಘಟ್ಟ ಮತ್ತು ಚಂದ್ರನಹಳ್ಳಿ ಜನರು ನೀರಾವರಿ ಇಲಾಖೆಯಿಂದ ತಮಗಾಗುತ್ತಿರುವ ತೊಂದರೆಯನ್ನು ಹೇಳಿಕೊಳ್ಳಲು ರವೀಂದ್ರನಾಥ ಹತ್ತಿರ ಬಂದಾಗ ಈತ "ನೀವು ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವುದಿಲ್ಲ ಶಿವಶಂಕರಪ್ಪನ ಹತ್ತಿರ ಹೋಗಿ" ಎಂದು ನಿರ್ದಾಕ್ಷಿಣ್ಯವಾಗಿ ಗದರಿದ್ದಾನೆ. ಪರಿಣಾಮವಾಗಿ ಮೊನ್ನೆ ಚುನಾವಣೆ ಪ್ರಚಾರಕ್ಕೆಂದು ಇದೇ ರವೀಂದ್ರನಾಥ್ ಮತ್ತು ಸಿದ್ದೇಶ್ ತುರ್ಚಘಟ್ಟಕ್ಕೆ ಹೋದಾಗ ಅಲ್ಲಿನ ಜನರೇ ಇವರನ್ನು ಬಯ್ದು ಗದರಿದ್ದಾರೆ. ಸಿದ್ದೇಶ್‌ರನ್ನು ಸೋಲಿಸಲೆಂದೇ ತುರ್ಚಘಟ್ಟದವರನ್ನು ನಿಂದಿಸುವ ನಾಟಕವನ್ನು ರವೀಂದ್ರನಾಥ್ ಆಡಿದ್ದಾರೆ ಎಂದು ಚೆಡ್ಡಿಗಳೇ ಪಿಸುಗುಡುತ್ತಿದ್ದಾರೆ.



ಸಿದ್ದೇಶ್

ರವೀಂದ್ರನಾಥ್ ವರಸೆ ಹೀಗಾದರೆ ಅಡಿಕೆ ವ್ಯಾಪಾರಿ ಸಿದ್ದೇಶರ ದುರಹಂಕಾರ ಸ್ಥಳೀಯ ಕಾರ್ಪೊರೇಟರ್‌ಗಳನ್ನೇ ದೂರ ಮಾಡಿದೆ. ಹೀಗಾಗಿ ಸಿದ್ದೇಶ್ ಪರವಾಗಿ ಮನಸ್ಫೂರ್ತಿಯಿಂದ ಚುನಾವಣಾ ಪ್ರಚಾರಕ್ಕಿಳಿಯಬೇಕಾದ ಕಾರ್ಯಕರ್ತರು ಸುಮ್ಮನಿದ್ದಾರೆ. ಕೋಟಿ ಕೋಟಿ ರೂ.ಗಳ ದೈನಂದಿನ ವಹಿವಾಟನ್ನು ಹೊಂದಿರುವ ಸಿದ್ದೇಶ್ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡಿಲ್ಲ, ಇಲ್ಲಿನ ರಸ್ತೆ ಮತ್ತಿತರೇ ಕಾಮಗಾರಿಗಳು ಅದ್ವಾನವೆದ್ದು ಹೋಗಿವೆ.

ಜೊತೆಗೆ ಈತ ಅತ್ಯಂತ ಜಾತಿವಾದಿ. ಲಿಂಗಾಯತರೂ ಈತನ ಹತ್ತಿರ ಹೋದಾಗ ಅವರು ಲಿಂಗಾಯತರಲ್ಲಿ ಯಾವ ಗುಂಪಿನವರೆಂದು ಕೇಳಿ, ತನ್ನ ಸಾದರ ಗುಂಪಿನವರಾದರೆ ಮಾತ್ರ ಸಹಕರಿಸುತ್ತಾನೆ. ಇತರೆ ಲಿಂಗಾಯತರಿಗೆ ಈತನಿಂದ ಸಿಗುವುದು ಬರೀ ವಿಭೂತಿ. ಹೀಗಾಗಿಯೇ ಪಂಚಮಸಾಲಿಗಳು ಸೇರಿದಂತೆ ಇತರೆ ಲಿಂಗಾಯತರು ಸಿದ್ದೇಶ್ ವಿರುದ್ಧ ಕತ್ತಿ ಮಸಿಯುತ್ತಿದ್ದಾರೆ.



ಸೈಫುಲ್ಲಾ

ಜನತಾ ದಳದ ಪೂರಕ ನಿರ್ಧಾರ

ಜನತಾದಳದಿಂದ ದಾಸಕರಿಯಪ್ಪ ಅಥವಾ ಕೊಳೆನಳ್ಳಿ ಸತೀಶ್‌ಗೆ ಟಿಕೆಟ್ ಕೊಟ್ಟಿದ್ದರೆ ಲಕ್ಷಾಂತರ ಓಟುಗಳು ಛಿದ್ರಗೊಳ್ಳುವ ಅಪಾಯವಿತ್ತು. ಆದರೆ ಬಿಜೆಪಿಯವರು ಹೇಳುವಂತೆ ಒಳಒಪ್ಪಂದವೋ? ಅಥವಾ ದೇವೇಗೌಡರ ಚಾಣಕ್ಯ ತಂತ್ರಗಾರಿಕೆಯೋ? ಗೊತ್ತಿಲ್ಲ, ಕಲ್ಲೇರುದ್ರೇಶ್‌ಗೆ ಜೆಡಿಎಸ್ ಟಿಕೆಟ್ ಸಿಕ್ಕಿದೆ. ಈತ 10-15 ಸಾವಿರಕ್ಕಿಂತ ಹೆಚ್ಚು ಮತ ಕೀಳಲಾರರೆಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಒಟ್ಟಾರೆ ಇವರಿಗೆ ಟಿಕೆಟ್ ಕೊಟ್ಟು ಚುನಾವಣೆಗೆ ನಿಲ್ಲಿಸುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲಕರವಾದ ವಾತಾವರಣ ನಿರ್ಮಾಣವಾಗಿದೆ.

ತರಳಬಾಳು ಮಠದ ಆಶೀರ್ವಾದ

ಸಿರಿಗೆರೆಯ ತರಳಬಾಳು ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಈ ಚುನಾವಣೆಯಲ್ಲಿ ನಿರ್ಲಿಪ್ತರಾಗಿದ್ದಾರೆಂಬ ಅಭಿಪ್ರಾಯಗಳು ಇದ್ದರೂ ವಾಸ್ತವವಾಗಿ ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅವರು ಬಿಜೆಪಿಯನ್ನು ಬೆಂಬಲಿಸಿದಾಗಲೇ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿ ಮಲ್ಲಿಕಾರ್ಜುನ್‌ರನ್ನು ಬೆಂಬಲಿಸುತ್ತಾರೆಂದು ತೀರ್ಮಾನವಾಗಿತ್ತು. ಈ ಹಿನ್ನಲೆಯಲ್ಲಿ ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ ತರಳಬಾಳು ಹುಣ್ಣಿಮೆಗೆ ಶಾಮನೂರು ಕುಟುಂಬವು ಅತೀ ಹೆಚ್ಚು ಸಹಕಾರ ನೀಡಿದ್ದು, ಆ ಕಾರ್ಯಕ್ರಮದ ನಂತರವೂ ತರಳಬಾಳು ಶ್ರೀಗಳೊಂದಿಗಿನ ಸಖ್ಯ ಯಾವುದೇ ವಿಭೇದಗಳಿಲ್ಲದೆ ಸಾಗುತ್ತಿರುವುದು ಮಲ್ಲಿಕಾರ್ಜುನರ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ.

ಬಿಜೆಪಿ ಪಾಳಯದಲ್ಲಿನ ಭಿನ್ನಮತದಿಂದಾಗಿ ಸಿದ್ದೇಶ್‌ಗೆ ಪೀಕಲಾಟ ಪ್ರಾರಂಭವಾಗಿದ್ದರೆ ಕಾಂಗ್ರೆಸ್ ಪಕ್ಷದ ನಾಯಕರು ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಮಲ್ಲಿಕಾರ್ಜುನರ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ. ಇದು ಕಾಂಗ್ರೆಸ್ ಪಾಳೆಯದಲ್ಲಿ ಹೊಸ ಚೈತನ್ಯವನ್ನು ತಂದುಕೊಟ್ಟಿದೆ. ಅಲ್ಪಸಂಖ್ಯಾತ ನಾಯಕರುಗಳಾದ ಸೈಯದ್ ಸೈಫುಲ್ಲಾ, ಅಬ್ದುಲ್ ಜಬ್ಬಾರ್, ಹಾಲಿ ಶಾಸಕ ಎಸ್.ವಿ. ರಾಮಚಂದ್ರ, ಮಾಜಿ ಶಾಸಕ ಮಲ್ಲಪ್ಪ, ಮಾಜಿ ಮಂತ್ರಿ ನಾಗಪ್ಪ ಮೋಹನ್ ಕೊಂಡಜ್ಜಿ ಪಂಚಮಸಾಲಿ ಸಮಾಜದ ನಾಯಕರಾದ ತೇಜಸ್ವಿ ಪಟೇಲ್ ಮತ್ತು ಎಂ.ಟಿ. ಸುಭಾಷ್ ಚಂದ್ರ ಮತ್ತಿತರೆ ನಾಯಕರೆಲ್ಲಾ ಸೇರಿ ಮಲ್ಲಿಕಾರ್ಜುನ್ ಪರ ಕೆಲಸ ಮಾಡುತ್ತಿರುವುದು ಕಾಂಗ್ರೆಸ್ ಪಕ್ಷದ ಗೆಲುವಿನ ಹಾದಿಯನ್ನು ಇನ್ನಷ್ಟು ಗಟ್ಟಿ ಮಾಡಿದೆ.

ಹೊನ್ನಾಳಿ ಕ್ಷೇತ್ರದ ಶಾಸಕ ನರ್ಸ್ ರೇಣುಕಾಚಾರ್ಯ ಎರಡನೇ ಬಾರಿಗೆ ಬಿಜೆಪಿ ಶಾಸಕನಾಗಿದ್ದಾನೆ. ಇವನ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಈ ಕ್ಷೇತ್ರದ ಅಭಿವೃದ್ಧಿಗಾಗಿ ಇವನು ಕಿಸಿದಿದ್ದು ಏನೂ ಇಲ್ಲವಾದರೂ ಕಾಲಕಾಲಕ್ಕೆ ಕಾಲು ಕೆರೆದುಕೊಂಡು ಗಾಯಮಾಡಿಕೊಳ್ಳುವುದಲ್ಲದೇ ಬಿಜೆಪಿ ಪಕ್ಷಕ್ಕೂ ರಣಗಾಯಗಳನ್ನು ಮಾಡುತ್ತಿದ್ದಾನೆ. ಈಗ "ಹಿಂದೂ ವಿರೋಧಿಗಳ ತಲೆ ಕತ್ತರಿಸುತ್ತೇನೆ" ಎಂಬ ವಿವಾದಾತ್ಮಕ ಹೇಳಿಕೆ ನೀಡಿ ಚುನಾವಣಾಧಿಕಾರಿಗಳಿಂದ ಕ್ರಿಮಿನಲ್ ಕೇಸು ಜಡಿಸಿಕೊಂಡಿದ್ದಾನೆ. ಈತ ಎಂತಹ ಪೆದ್ದನೆಂದರೆ ಈ ಕ್ಷಣ ತನ್ನ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಾನೆ, ಹಾಗೆಯೇ ಮರುಕ್ಷಣ "ನಾನು ಅಂತಹ ಹೇಳಿಕೆ ಕೊಟ್ಟಿಲ್ಲ" ಎಂದು ಪ್ರಲಾಪಿಸುತ್ತಾನೆ. ಇಂತಹ ಮೂರ್ಖತನದಿಂದಾಗಿಯೇ ತನ್ನನ್ನು ಮತ್ತು ತನ್ನ ಪಕ್ಷವನ್ನು ನಗೆಪಾಟಲಿಗೀಡು ಮಾಡುತ್ತಿರುವ ನರ್ಸ್ ರೇಣುಕಾಚಾರ್ಯ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ನೆರವಾಗುತ್ತಾನೆಂಬುದರಲ್ಲಿ ಅನುಮಾನವಿಲ್ಲ. ■

...ರೆಡ್ಡಿ ಗ್ಯಾಂಗಿನ ಸ್ತ್ರೀ ಮುಖ ...ಯಾರೀ ಶಾಂತಾ?



...ಕೆ ಶಾಂತಾ!

...ಳ್ಳಾರಿ ರೌಡಿ ರೆಡ್ಡಿಗಳ ಹೊಸ ರಾಜಕೀಯ ...ದ್ಯಕ್ಕೆ ಬಳ್ಳಾರಿ ಲೋಕಸಭಾ ಕ್ಷೇತ್ರದ ಬಜೆಪಿ ...ೕ. ಜೊತೆಗೆ ರೆಡ್ಡಿಗಳ ಮನೆ ಕಾವಲುಗಾರ ... ಶ್ರೀರಾಮುಲುನ ಕಿರಿಯ ಸೋದರಿ ಬೇರೆ. ...ಷ್ಟೆಲ್ಲಾ ಆಗಿರುವ ಈ ಶಾಂತಾರನ್ನು ... ದರಾಶಿ ಶಾಂತಾ ಎನ್ನುತ್ತಾರೆ. ...ಂತಾ ಅಂತಲೂ ಹೆಸರಿದೆ. ...ಲ್ಲೂ ಮೂವತ್ತಾರು ವಯಸ್ಸಿನ ... ಹದಿನಾರನೇ ವಯಸ್ಸಲ್ಲಿ ...ಸಿ ಓದಿ ನೆರೆಯ ಆಂಧ್ರದ ಗುಂತಕಲ್‌ನಲ್ಲಿ ...ಬ ತರಕಾರಿ ಅಂಗಡಿ ಇಟ್ಟುಕೊಂಡಿದ್ದ ...ಂಡ ಎಂಬ ನರಪೇತಲನನ್ನು ಮದುವೆಯಾಗಿ ... ನೆಲೆಸಿದ್ದರು.

...999 ರಲ್ಲಿ ಕೂಗುಮಾರಿ ಸುಷ್ಮಾ ಸ್ವರಾಜ್ ...ಯಿಂದ ಸ್ಪರ್ಧಿಸಿದ್ದಾಗ ತಾನೂ ಪ್ರಚಾರ ...ದ್ದೆ ಎಂದು ಈಗ ಹೇಳುತ್ತಿದ್ದಾರಾದರೂ ಕಳೆದ ... ವರೆಗೂ ಬಳ್ಳಾರಿಯ ಜನ ಈ ... ಮುಖ ಎಂದೂ ಕಂಡಿರಲಿಲ್ಲ. ...ನೂ ಈಗ ಅದೇ ಶಾಂತಾರನ್ನು ...ಯ ಲೋಕನಾಯಕಿ ಮಾಡಲು ...ನ ರೆಡ್ಡಿ, ಕರುಣಾಕರ ರೆಡ್ಡಿಗಳು ...ನಾಗಿದ್ದಾರೆ. ಇವರ ಅಕ್ಕಪಕ್ಕದಲ್ಲೇ ...ದೂರದಲ್ಲಿ ರಾಮುಲು ...ಮೋರೆ ಹಾಕಿಕೊಂಡು ...ರುವ ಫೋಟೋಗಳು ಎಲ್ಲಾ ಕಡೆ ...ದಾಗುತ್ತಿವೆ.



ದಿವಾಕರ್ ಬಾಬು

...ೀಗೆ ಶಾಂತಾ ಎಂಬ ಹೆಣ್ಣು ...ಬಳ್ಳಾರಿ ಎಲೆಕ್ಷನ್ ಸೀನ್‌ನಲ್ಲಿ ಸಡನ್ನಾಗಿ ...ಕೊಂಡಿರುವುದರ ಹಿಂದೆ ಒಂದು ಕತೆಯೇ ...ಅತ್ತ ರಾಯಚೂರಿನಲ್ಲಿ ಬಜೆಪಿಯ ಅಧಿಕೃತ ... ರಾಜ ಅಮರೇಶ ನಾಯಕ ನಾಮಪತ್ರ ...ದೆದು ರೆಡ್ಡಿಗಳ ಹಿಟ್‌ಮ್ಯಾನ್ ಸಣ್ಣ ...ಪ್ಪನೆಂಬ ಗೂಂಡಾ ನಾಮಪತ್ರ ...ಟುವುದಕ್ಕೂ ನೇರಾನೇರಾ ಸಂಬಂಧವಿದೆ. ...ಾಳಗೇನೆ ರಾಮುಲುನ ಕೋಪ, ರೆಡ್ಡಿಗಳ ...ಗಳು, ರಾಮುಲು ಮಾವ ಸಣ್ಣ ಫಕೀರಪ್ಪನ ...ಯದ ಬೆಂಕಿಗಳೆಂಬ ರಹಸ್ಯ ಘಟನೆಗಳೂ ...ಹೋಗಿವೆ.

ಫಕೀರಪ್ಪನಿಗೆ ಟಾಂಗ್

... ಗಣಿ ರೆಡ್ಡಿಗಳಿಗೆ ತಾವು ಹಾಕುವ ಬಿಸ್ಕತ್ ...ಕೊಂಡು ಬಾಲ ಅಲ್ಲಾಡಿಸಿಕೊಂಡು ಯಾರು ...ನಿರುತ್ತಾರೆ ಎಂದು ಗೊತ್ತಿದೆ. ಅದೇರೀತಿ ...ನೊಂದು ದಿನ ಯಾರು ತಿರುಗಿ ...ಹುದು ಎಂತಲೂ ಒಂದು ಅಂದಾಜಿರುತ್ತದೆ. ...ಲ್ಲಾ ಫಕೀರಪ್ಪನನ್ನು ಕುತ್ತಿಗೆ ಹಿಡಿದು ...ಯಿಂದ ಆಚೆ ದಬ್ಬಲು ಇದೇ ಪ್ರಮುಖ ಕಾರಣ. ಎಲೆಕ್ಷನ್ ಅನೌನ್ಸ್ ಆಗುವ ಕೆಲ ತಿಂಗಳ ಮೊದಲೇ ಈ ಬಾರಿ ಫಕೀರಪ್ಪನಿಗೇ ಬಜೆಪಿ ಟಿಕೆಟ್ ಎಂಬುದೂ ಗ್ಯಾರಂಟಿಯಾಗಿತ್ತು. ಬಳ್ಳಾರಿ ಲೋಕಲ್‌ನಲ್ಲಿ ರೆಡ್ಡಿಗಳ ಹೊಡಿ-ಬಡಿ ವಿಭಾಗದ ಲೀಡರ್ ಆಗಿದ್ದ ಸಣ್ಣ ಫಕೀರಪ್ಪ ಇನ್ನೇನು ತಾನು ಎಂಪಿ ಆಗೇಬಿಟ್ಟೆ ಎಂತಲೂ ನಂಬಿಕೊಂಡಿದ್ದ.

ಈಗೊಂದೆರಡು ತಿಂಗಳ ಹಿಂದೆ ರೆಡ್ಡಿಗಳ ಅಕ್ಕನ ಮಗಳ ಮದುವೆಯೊಂದು ಬೆಂಗಳೂರಲ್ಲಿ ನಡೆಯಿತು. ಅವತ್ತು ಅಲ್ಲಿಗೆ ಬಂದಿದ್ದ ಕರ್ನಾಟಕ-ಆಂಧ್ರದ ಕೆಲ ಪುಢಾರಿಗಳಿಗೆ, ವ್ಯಾಪಾರಿಗಳಿಗೆಲ್ಲಾ ರೆಡ್ಡಿಗಳು ಸಣ್ಣ ಫಕೀರಪ್ಪನನ್ನು ಪರಿಚಯಿಸುತ್ತಾ 'ಬಳ್ಳಾರಿಯ ಮುಂದಿನ ಎಂಪಿ ಇವರೆ' ಅಂತಲೂ ಹೇಳಿದ್ದರು. ಆದರೆ ಅದೇನಾಯಿತೋ ಏನೋ ರೆಡ್ಡಿ ಬ್ರದರ್ಸ್ ನಿರ್ಧಾರ ರಾತ್ರೋರಾತ್ರಿ ಬದಲಾಗಿಹೋಯಿತು. ಪಕ್ಕದಲ್ಲೇ ಇದ್ದ ಸಣ್ಣ ಫಕೀರಪ್ಪನನ್ನು ದೂರತಳ್ಳಿ, ದೂರದ ಗುಂತಕಲ್ಲಿನಲ್ಲಿ ತರಕಾರಿ ಮಾರಿಕೊಂಡಿದ್ದ ಶಾಂತಾರನ್ನು ಎತ್ತಾಕಿಕೊಂಡು ಬಂದು ಬಳ್ಳಾರಿಗೆ ಕ್ಯಾಂಡಿಡೇಟ್ ಮಾಡಿಬಿಟ್ಟರು ರೆಡ್ಡಿಗಳು. ಮೊನ್ನೆ ಇದನ್ನೆಲ್ಲಾ ಮಾತಾಡುತ್ತಾ ಈ ಶಾಂತಾ ಎಂಬಾಕೆ "ಯಾರೋ ಜನಗಳು ಬಂದು ನೀನೇ ಬಳ್ಳಾರಿ ಕ್ಯಾಂಡಿಡೇಟು ಅಂದ ಮೇಲೇನೆ ನನಗೂ ವಿಷಯ ಗೊತ್ತಾಯ್ತು" ಅಂತಾ ಭಾಷಣದಲ್ಲೇ ಹೇಳಿಕೊಂಡಿದ್ದಾರೆ.



ಜನಾರ್ದನ ರೆಡ್ಡಿ

ರೆಡ್ಡಿಗಳ ಸಸ್ಪೆನ್ಸ್ ರಾಜಕೀಯ ಹೇಗಿರುತ್ತೆ ನೋಡಿದಿರಾ?

ಅದಿರಲಿ, ಈ ರೆಡ್ಡಿಗಳಿಗೆ ಫಕೀರಪ್ಪ ಯಾಕೆ ಬೇಡವಾದ?

ಇದಕ್ಕೆ ಫಕೀರಪ್ಪನ ಜೊತೆಯಲ್ಲಿರುವ ಜನ ಹೇಳುವುದೇನೆಂದರೆ ಸ್ವಲ್ಪ ಸ್ವಾಭಿಮಾನಿಯಾಗಿರುವ ಫಕೀರಪ್ಪ ತಲೆ ಕೆಟ್ಟರೆ ರೆಡ್ಡಿಗಳಿಗೂ ಡೋಂಟ್ ಕೇರ್ ಅಂದುಬಿಡಬಲ್ಲ, ಅಂದರೆ ರಾಮುಲು ತರ ಬರೀ ಬಾಲ ಅಲ್ಲಾಡಿಸಿಕೊಂಡು, ಕಾಲು ನೆಕ್ಕುವ ತರದವನಲ್ಲ ಎಂದು. ವಾಸ್ತವವಾಗಿ ಬಳ್ಳಾರಿಯನ್ನು ರೆಡ್ಡಿಗಳು ಹಣ ಚೆಲ್ಲಿ ಕಂಟ್ರೋಲಿನಲ್ಲಿಟ್ಟುಕೊಂಡಿದ್ದರೆ ಈ ಫಕೀರಪ್ಪ ಜನರನ್ನು ಇಟ್ಟುಕೊಂಡಿದ್ದಾನೆ. ಈ ಹಿಂದೆ ಕತ್ತೆ ನಾಗನ ಕ್ರಿಮಿನಲ್ ಕೇಸು, 2008 ರ ಮಾರ್ಚ್‌ನಲ್ಲಿ ರೆಡ್ಡಿಗಳು ನಡೆಸಿದ ಮಧುಗಿರಿ ದಂಡಯಾತ್ರೆ, 2008 ರ ಏಪ್ರಿಲ್‌ನಲ್ಲಿ ಅನಿಲ್ ಲಾಡ್‌ಗೆ ಸೇರಿದ ಕಾರು ಜೀಪುಗಳಿಗೆ ಬೆಂಕಿ ಇಟ್ಟು ದಾಂಧಲೆ ಮಾಡಿದ ಪ್ರಕರಣಗಳಲ್ಲೆಲ್ಲಾ ಈ ಸಣ್ಣ ಫಕೀರಪ್ಪನ ಕೈವಾಡವಿತ್ತು.



ಫಕೀರಪ್ಪ

ರೆಡ್ಡಿಗಳಿಗೆ ಇಷ್ಟು ಪರಮಾಪ್ತ ಬಂಟನಾಗಿದ್ದ ಫಕೀರಪ್ಪ ನಾಳೆ ತಾನು ಎಂಪಿಯಾದರೆ ಬೇಕಾಗುತ್ತದೆಂದು ಇಂಗ್ಲಿಷ್-ಹಿಂದಿ ಕಲಿಯಲೂ ಹೊರಟಿದ್ದ ಎಂದರೆ ನೀವು ನಂಬಲೇಬೇಕು!

ಆದರೆ ಅದ್ಯಾಕೊ ರೆಡ್ಡಿಗಳಿಗೆ ಫಕೀರಪ್ಪ ಸದಾ ತಮ್ಮ ಕಂಟ್ರೋಲಿಗೆ ಸಿಗುವ ಆಸಾಮಿಯಲ್ಲ ಎಂಬ ಡೌಟು ಶುರುವಾಯಿತು. ತೀರಾ ಇತ್ತೀಚೆಗೆ ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಸ್ಫೋಟಿಸಿದ ರೈತರ ಪ್ರತಿಭಟನೆ, ಜಾಥಾಗಳನ್ನು ಹತ್ತಿಕ್ಕುವಂತೆ ಫಕೀರಪ್ಪನಿಗೆ ಹುಕುಂ ಕೊಟ್ಟರೂ ಆತ ದಿವಾಕರ ಬಾಬು ಗುಂಪಿಗೆ ಹೆದರಿಕೊಂಡನೆಂಬ ಕೋಪವೂ ಬಂದಿತ್ತು. ಇದೆಲ್ಲಾ ಸೇರಿ ಫಕೀರಪ್ಪನಿಗೆ ಟಾಂಗು ಕೊಡಲು ರೆಡ್ಡಿಗಳು ತೀರ್ಮಾನಿಸಿಕೊಂಡಿದ್ದರು. ಆದರೆ ಯಾವಾಗ ಗುಂತಕಲ್ಲಿನಿಂದ ಶಾಂತಮ್ಮ ಹೊಸ ರೇಷ್ಮೆ ಸೀರೆ ಉಟ್ಟುಕೊಂಡು ಬಳ್ಳಾರಿಗೆ ಕಾಲಿಟ್ಟರೊ ಅವತ್ತೆ ಫಕೀರಪ್ಪ ತಕತಕ ಕುದ್ದು ಹೋದ. ಒಂದು ವಾರ ಕಾಲ ರೆಡ್ಡಿಗಳ ಮುಖ ನೋಡಲೂ ಹೋಗದೆ ಉಳಿದುಬಿಟ್ಟ. ಬಳ್ಳಾರಿಯಿಂದ ಸುಲಭವಾಗಿ ಗೆದ್ದು ಎಂಪಿಯಾಗಲು ಛಾನ್ಸ್ ಇತ್ತು. ಈಗ ಅವಕಾಶ ಕೈತಪ್ಪಿತಲ್ಲಾ ಎಂಬ ಕ್ರೋಧ ಅದು. ಆದರೆ ಜನಾರೆಡ್ಡಿಗೆ ಇದರಿಂದ ಆತಂಕವಾಗಿ ತಾವೇ ಫಕೀರಪ್ಪನ ಮನೆಗೆ ಹೋಗಿ 2 ಕೋಟಿ ರೂ. ಪರಿಹಾರ ಆಫರ್ ಕೊಟ್ಟನಂತೆ. ಆಗ ಫಕೀರಪ್ಪನು 'ಹೊಡೆದಾಟ, ಜಗಳಕ್ಕೆ ನಾನು ಬೇಕು. ಎಂಪಿಯಾಗಲು ಶಾಂತಾ ಬೇಕಾಯಿತಾ?' ಎಂದು ಕಿರುಚಿದನಂತೆ. ಬಹುಶಃ ಅವಾಗಲೇ ರೆಡ್ಡಿಗಳು ಫಕೀರಪ್ಪನಿಗೆ ರಾಯಚೂರು ದಾರಿ ತೋರಿಸುವ ತೀರ್ಮಾನ ಮಾಡಿಕೊಂಡರು.



ಶ್ರೀರಾಮುಲು

ರಾಯಚೂರನ್ನೇ ಯಾಕೆ ಆರಿಸಿಕೊಂಡರೆಂದರೆ ಕೊಪ್ಪಳದಲ್ಲಿ ಅಷ್ಟರಲ್ಲಾಗಲೇ ಪಂಚಮಸಾಲಿ ಶಿವನಗೌಡ ಪಾಟೀಲನಿಗೆ ಬಜೆಪಿ ಟಿಕೆಟ್ ಕೊಟ್ಟಾಗಿತ್ತು. ರೆಡ್ಡಿಗಳಿಗೆ ಉಳಿದದ್ದು ರಾಯಚೂರು ಮಾತ್ರ. ಹಾಗಾಗಿ ರಾತ್ರೋರಾತ್ರಿ ಅಲ್ಲಿನ ಬಜೆಪಿ ಕ್ಯಾಂಡಿಡೇಟ್ ರಾಜಾ ಅಮರಪ್ಪ ನಾಯಕ, ಮನೋಹರ ಮಸ್ಕಿ ಇನ್ನಿತರ ಲೀಡರ್‌ಗಳನ್ನು ಕರೆಸಿ ಅವರವರ ಯೋಗ್ಯತಾನುಸಾರ ಹಣದ ಚೀಲ ಬಿಸಾಕಿ ಫಕೀರಪ್ಪನನ್ನೇ ಅಭ್ಯರ್ಥಿಯಾಗಿಸಿದ್ದಾರೆ. ಈ ಅಮರಪ್ಪ ನಾಯಕನ ಹೆಸರಿನಲ್ಲೇ ರಾಜಾ ಅಂತಿದ್ದರೂ ಆತ ರೆಡ್ಡಿಗಳು ಎಸೆದ ದುಡ್ಡು ಬಾಚಿಕೊಂಡಿದ್ದನ್ನು ನೋಡಿದ ಜನ 'ಇಂವಾ ರಾಜಾ ಅಲ್ಲ, ಗುಲಾಮ' ಎಂದು ಗೇಲಿ ಮಾಡುತ್ತಿದ್ದಾರೆ.

ಈ ಇಡೀ ಘಟನಾವಳಿಗಳ ಕ್ಲೈಮಾಕ್ಸ್ ಏನು ಗೊತ್ತೆ?

ಬಳ್ಳಾರಿಯಿಂದ ರೇಷ್ಮೆ ಸೀರೆ ಶಾಂತಾ ಗೆಲ್ಲುವುದು ಎಷ್ಟು ನಿಜವೋ ರಾಯಚೂರಿನಿಂದ ಸಣ್ಣ ಫಕೀರಪ್ಪ ಸೋಲುವುದು ಅಷ್ಟೇ ನಿಜ ಎಂಬ ಮಾತು ಬಜೆಪಿ ಕ್ಯಾಂಪಿನಿಂದಲೇ ಕೇಳಿಬರತೊಡಗಿದೆ. ಹೇಗೆಂದರೆ ರಾಯಚೂರು ಲೋಕಸಭಾ ಕ್ಷೇತ್ರದ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಐವರು ಶಾಸಕರಿದ್ದಾರೆ. ಶಹಾಪುರ, ಯಾದಗೀರ್, ರಾಯಚೂರು ಗ್ರಾಮೀಣ, ರಾಯಚೂರು ಮತ್ತು ಮಾನ್ವಿಗಳು ಕಾಂಗ್ರೆಸ್ ಹಿಡಿತದಲ್ಲಿದೆ. ಉಳಿದಂತೆ ದೇವದುರ್ಗದಿಂದ ಗೆದ್ದಿದ್ದಾತ ಜೆಡಿಎಸ್‌ನಲ್ಲಿದ್ದ. ಇಲ್ಲಿ ಬಜೆಪಿಗೆ ಇರುವುದೇ ಶೋರಾಪುರ್ ಹಾಗೂ ಲಿಂಗಸಗೂರು ಕ್ಷೇತ್ರಗಳು. ಇನ್ನೂ ಮೇಲಾಗಿ ಕಳೆದ ಬಾರಿ ನೇರ ಹೋರಾಟವಿದ್ದದ್ದು ಕಾಂಗ್ರೆಸ್‌ನ ವೆಂಕಟೇಶ್ ನಾಯಕ್ ಹಾಗೂ ಜೆಡಿಎಸ್‌ನ ಮದನಗೋಪಾಲ ನಾಯಕ್ ನಡುವೆ ಮಾತ್ರ. ಆಗ ಬಜೆಪಿ ಮೂರನೇ ಸ್ಥಾನದಲ್ಲಿತ್ತು.

ಬಹುಶಃ ಫಕೀರಪ್ಪನಿಗೆ ಮತ್ತೆ ಅದೇ ಸ್ಥಾನ ತೋರಿಸಲು ರೆಡ್ಡಿ ಬ್ರದರ್ಸ್ ಈ ಬಾರಿ ತೀರ್ಮಾನಿಸಿಕೊಂಡಿರುವಂತಿದೆ.

ಸಣ್ಣ ಫಕೀರಪ್ಪ ಮೈ ಬೆಳೆಸಿಕೊಂಡನೆ ವಿನಃ ಬುದ್ಧಿ ಬೆಳೆಸಿಕೊಳ್ಳಲಿಲ್ಲ ಎಂಬ ಮಾತನ್ನು ಬಳ್ಳಾರಿಯ ಜನರೇ ಹೇಳುತ್ತಿದ್ದಾರೆ. ಇದುವರೆಗೂ ಸೀನ್‌ನಲ್ಲೇ ಇರದಿದ್ದ ಶಾಂತಾ ಈಗ ಬಳ್ಳಾರಿ ಕ್ಯಾಂಡಿಡೇಟ್ ಆಗಿರುವುದು ಹಾಗೂ ಸ್ವತಃ ಬಳ್ಳಾರಿಯವನೇ ಆದರೂ ಫಕೀರಪ್ಪನನ್ನು ರಾಯಚೂರಿಗೆ ಓಡಿಸಿರುವುದು ರೆಡ್ಡಿಗಳ ಪಿತೂರಿ ಹೇಗಿರುತ್ತದೆಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ. ■

ಬಿಜೆಪಿ ನಾಯಕರಲ್ಲೇ ಗಲಾಟೆ



ರಾಯಚೂರಿನ ಬಜೆಪಿ ಅಧಿಕೃತ ಅಭ್ಯರ್ಥಿ ರಾಜ ಅಮರೇಶ ನಾಯಕನ ನಾಮಪತ್ರ ಹಿಂತೆಗೆಸಿ ರೆಡ್ಡಿ ಬಂಟ ಫಕೀರಪ್ಪನಿಗೆ ಟಿಕೆಟ್ ನೀಡುವ ವಿಚಾರ ರಾಜ್ಯ ಬಜೆಪಿ ನಾಯಕರಿಗೆ ಗೊತ್ತಿರಲಿಲ್ಲ!

ಇದು ಸತ್ಯ

ಕಳೆದ ವಾರ ಈ ಕುರಿತು ಗಲಾಟೆಯೂ ನಡೆದುಹೋಗಿದೆ. ಕಳೆದ ವಾರ ಕಾಂಗ್ರೆಸ ಚಿಲ್ರೆ ನಾಯಕ ವಿ. ಸೋಮಣ್ಣ ಬಜೆಪಿ ಸೇರಿದ ಸಮಾರಂಭದಲ್ಲಿ ಭಾಗವಹಿಸಿದ್ದ ಯಡ್ಡಿ, ಸದಾನಂದಗೌಡ ಹಾಗೂ ಬಜೆಪಿ ಪ್ರಧಾನ ಕಾರ್ಯದರ್ಶಿ ಸಂತೋಷ್ ವೇದಿಕೆ ಹತ್ತಿರವೇ ಪರಸ್ಪರ ಕಿತ್ತಾಡಿಕೊಂಡಿದ್ದನ್ನು ಬಹಳ ಜನ ನೋಡಿದರು.

'ಯಾರನ್ನು ಕೇಳಿ ರಾಯಚೂರು ಟಿಕೆಟನ್ನು ಫಕೀರಪ್ಪನಿಗೆ ಕೊಟ್ಟರಿ' ಎಂಬುದೇ ಅಲ್ಲಿದ್ದ ಪ್ರಶ್ನೆ. ಆಶ್ಚರ್ಯ ಅಂದರೆ ಈ ವಿಚಾರ ಯಡ್ಡಿಗೆ ಮಾತ್ರ ಗೊತ್ತಿತ್ತಂತೆ. ಉಳಿದಂತೆ ಸದಾನಂದ ಗೌಡರಿಗೆ ರೆಡ್ಡಿಗಳು ಯಾವ ಮಾಹಿತಿಯನ್ನು ಕೊಡದೆ ಟಿಕೆಟ್ ಹಾಗೂ ಬಿ ಫಾರಂ ಹೈಜಾಕ್ ಮಾಡಿಬಿಟ್ಟರು.

ಕಸ್ತೂರಿ ವರದಿಗಾರನೇ ರೆಡ್ಡಿಗಳ ಏಜೆಂಟ್!

ಬಳ್ಳಾರಿಯ ವಿವಾದಿತ MSPL ಗಣಿ ಪ್ರದೇಶಕ್ಕೆ ಕುಮಾರಸ್ವಾಮಿ ನೀಡಿದ್ದ ಭೇಟಿ ಬಗ್ಗೆ ಗಣಿರೆಡ್ಡಿ ಹಾಗೂ ಯಡ್ಡಿ ಪ್ರಳಯವೇ ಆಯಿತೆಂಬಂತೆ ಚೀರಿಕೊಂಡಿದ್ದರು. ಗಣಿ ರೆಡ್ಡಿಯಂತೂ ಕುಮಾರಸ್ವಾಮಿ ಭೇಟಿಯ ಎಪ್ಪತ್ತೈದು ಸೆಕೆಂಡ್‌ಗಳ ಟಿವಿ ಫುಟೇಜ್ ಅನ್ನೇ ಮೀಡಿಯಾಗಳಿಗೆ ಪ್ರದರ್ಶಿಸಿ 'ಇದು ನ್ಯಾಯಾಂಗ ನಿಂದನೆ' ಎಂಬಿತ್ಯಾದಿ ಆರೋಪಿಸಿದ್ದ.

ಇಲ್ಲಿನ ಪ್ರಶ್ನೆ ಏನೆಂದರೆ ರೆಡ್ಡಿಗೆ ಕುಮಾರಸ್ವಾಮಿಯ ಚಲನವಲನಗಳ ಫುಟೇಜ್ ಹೇಗೆ ಸಿಕ್ಕಿತೆಂಬುದು!

ಏಕೆಂದರೆ ಅವತ್ತು ಕೊಪ್ಪಳದ ಗಿಣಿಗೇರಾಗೆ ಹೆಲಿಕಾಪ್ಟರಿನಲ್ಲಿ ಪ್ರಯಾಣಿಸುತ್ತಿದ್ದ ಕುಮಾರಸ್ವಾಮಿ ಇಂಧನ ಭರ್ತಿಗೆಂದು ಹೊಸಪೇಟೆಯ MSPL ಹೆಲಿಪ್ಯಾಡಿನಲ್ಲೇ ಇಳಿದಿದ್ದರು. ನಂತರ ವಿವಾದಿತ ಪ್ರದೇಶಕ್ಕೂ ಹೋಗಿ ಬಂದರು. ಅವತ್ತು ಅಲ್ಲಿದ್ದ ಏಕೈಕ ಟಿವಿ ವರದಿಗಾರ ಅಂದರೆ ಕಸ್ತೂರಿ ಚಾನಲ್‌ನವನೆ. ಈತ ಕುಮಾರಸ್ವಾಮಿಯ ಫುಟೇಜ್‌ಗಳನ್ನು ಮಾತ್ರವಲ್ಲ, ಪ್ರತಿ ನಿಮಿಷದ ಚಟುವಟಿಕೆಗಳನ್ನು ರೆಡ್ಡಿಗಳಿಗೆ ರವಾನಿಸುತ್ತಿದ್ದುದನ್ನು ಕೆಲ ಪತ್ರಕರ್ತರೇ ನೋಡಿದ್ದಾರೆ.

ಈ ಧನಂಧಾರಿ ಕೆಲಸಕ್ಕೆ 25 ಸಾವಿರ ಕೊಟ್ಟನಂತೆ ರೆಡ್ಡಿ!

ಚಿಕ್ಕೋಡಿ: ಕೈ-ಕಮಲಗಳ ಮಿಲಾಪಿ ಪಾಲಿಟಿಕ್ಸ್!

ಚಿಕ್ಕೋಡಿಯ ತುಂಬೆಲ್ಲಾ ಈಗ ಕತ್ತಿಗಳದ್ದೇ ದರ್ಬಾರ್. ವಿಧಾನಸಭಾ ಎಲೆಕ್ಷನ್ನಿನಲ್ಲಿ ಉಮೇಶ್ ಕತ್ತಿ, ಈಗ ಲೋಕಸಭಾ ಎಲೆಕ್ಷನ್‌ನಲ್ಲಿ ರಮೇಶ್ ಕತ್ತಿ.

ಸುಮಾರು ನಲ್ವತ್ತು ವರ್ಷಗಳ ನಂತರ ಚಿಕ್ಕೋಡಿ ಈಗ ಸಾಮಾನ್ಯ ಕ್ಷೇತ್ರವಾಗಿದೆ. ದಶಕಗಳ ಕಾಲ ಫ್ಯೂಡಲ್ ದೊರೆಗಳ ಅಂದಾದುಂದಿ ದರ್ಬಾರಿನಿಂದಾಗಿ ಈ ಕ್ಷೇತ್ರ ಅವೊತ್ತು ಹೇಗಿತ್ತೋ ಇವೊತ್ತೂ ಹಾಗೇ ಇದೆ. ಏಳು ಅವಧಿಗೆ ಇಲ್ಲಿಂದ ಲೋಕಸಭೆಗೆ ಆಯ್ಕೆಯಾಗಿದ್ದ ಬಿ.ಶಂಕರಾನಂದರಂಥ ಮಹಾನ್ ನಾಯಕರುಗಳು ಚಿಕ್ಕೋಡಿಗಾಗಿ ಏನನ್ನೂ ಮಾಡದೇ ಈಗ ಗೂಡು ಸೇರಿಕೊಂಡಿದ್ದಾರೆ. ನಂತರ ಕೇಸರಿ ಪಕ್ಷದ ರಮೇಶ್ ಜಿಗಜಿಣಗಿ ಮೂರು ಬಾರಿ ಆಯ್ಕೆಯಾಗಿ ಮೂರು ತಲೆಮಾರು ಕೂತು ತಿಂದರೂ ಕರಗದಷ್ಟು ಆಸ್ತಿ ಮಾಡಿಟ್ಟುಕೊಂಡು ಈಗ ಇದು ಸಾಮಾನ್ಯ ಕ್ಷೇತ್ರವಾದ ಮೇಲೆ ಇಲ್ಲಿಂದ ಕಾಲ್ಕಿತ್ತಿದ್ದಾರೆ. ಪೀಡೆಗಳು ತೊಲಗಿದವು ಎಂದು ಇಲ್ಲಿನ ಮತದಾರ ನೆಮ್ಮದಿಯ ನಿಟ್ಟುಸಿರು ಬಿಡುವಷ್ಟರಲ್ಲಿ ಈಗ ಕತ್ತಿ ಬ್ರದರ್ಸ್ ಅಮರಿಕೊಂಡಿದ್ದಾರೆ.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸುತ್ತಿರುವ ರಮೇಶ್ ಕತ್ತಿಯೇನಾದರೂ ಗೆದ್ದರೆ ಅದು ಅವನ, ಅವನ ಪಕ್ಷದ ಸ್ವಂತ ಬಲದಿಂದ ಎನ್ನುವುದಕ್ಕಿಂತ ಕಾಂಗ್ರೆಸ್ ಮಾಡುತ್ತಿರುವ ದ್ರೋಹದಿಂದ ಎಂದೇ ಪರಿಗಣಿಸಬೇಕಾಗುತ್ತದೆ. ಬಿಜೆಪಿಯೊಂದಿಗೆ ಕಾಂಗ್ರೆಸ್ ನಡೆಸುತ್ತಿರುವ ಮಿಲಾಪಿ ಪಾಲಿಟಿಕ್ಸೇ ರಮೇಶ್ ಕತ್ತಿಯನ್ನು ಗೆಲುವಿನ ಹೊಸ್ತಿಲಿಗೆ ತಂದು ನಿಲ್ಲಿಸಿದೆ.


ರಮೇಶ್ ಕತ್ತಿ


ರಮೇಶ್ ಜಿಗಜಿಣಗಿ


ಪ್ರಕಾಶ್ ಹುಕ್ಕೇರಿ

ಬಿ.ಶಂಕರಾನಂದ ಚಿಕ್ಕೋಡಿಯಲ್ಲಿ ಅಧಿಕಾರ ನಡೆಸಿದ ಕಾಲದವರೆಗೆ ಬೇರಾರೂ ಪ್ರಭಾವಿ ನಾಯಕರಾಗಿ ಬೆಳೆಯಲಿಲ್ಲ, ಶಂಕರಾನಂದ ಕೂಡ ಅದಕ್ಕೆ ಅವಕಾಶ ಕೊಡಲಿಲ್ಲ ಎಂದರೂ ಸರಿಯೆ. ಮುಂದೆ ಇವರ ಅಂದಾದುಂದಿಯಿಂದ ಬೇಸತ್ತ ಜನ ಬಿಜೆಪಿಯ ರಮೇಶ್ ಜಿಗಜಿಣಗಿಯನ್ನು ಅನಿವಾರ್ಯವಾಗಿ ಅಪ್ಪಿಕೊಂಡಿದ್ದರು. ಆವಾಗಲೂ ಜಿಗಜಿಣಗಿಗೆ ಪೈಪೋಟಿ ನೀಡಬಲ್ಲ ನಾಯಕರು ಕಾಂಗ್ರೆಸ್ಸಿನಲ್ಲಿ ಬೆಳೆಯಲಿಲ್ಲ, ಏಕೆಂದರೆ, ಕಾಂಗ್ರೆಸ್ಸಿನ ಮರಿ, ಪುಡಿ ರಾಜಕಾರಣಿಗಳೆಲ್ಲಾ ಜಿಗಜಿಣಗಿಯೊಂದಿಗೆ ಕೈ ಮಿಲಾಯಿಸಿ ಸಿಕ್ಕಷ್ಟು ತಿಂದು ದುಂಡಗಾಗುವ ಪರಿಪಾಠ ಬೆಳೆಸಿಕೊಂಡಿದ್ದರು.

ಈಗ ನಡೆಯುತ್ತಿರುವುದೂ ಅದೇ. ಬಿಜೆಪಿಯ ರಮೇಶ್ ಕತ್ತಿಯನ್ನು ಸೋಲಿಸುವುದಕ್ಕಾಗಿಯೇ ಕಾಂಗ್ರೆಸ್‌ನಿಂದ ಪ್ರಕಾಶ್ ಹುಕ್ಕೇರಿ ನಿಂತಿದ್ದಾರೆಂದು ನೀವು ನಂಬಿಕೊಂಡಿದ್ದರೆ ಅದು ಶುದ್ಧ ಸುಳ್ಳು. ಹುಕ್ಕೇರಿ ನಿಂತಿರುವುದು ರಮೇಶ್ ಕತ್ತಿಯನ್ನು ಸೋಲಿಸುವುದಕ್ಕಾಗಿಯಲ್ಲ, ಅವನನ್ನು ಗೆಲ್ಲಿಸುವುದಕ್ಕಾಗಿ! ಇದು ಚಿಕ್ಕೋಡಿಯಲ್ಲಿ ವರ್ಷಗಳಿಂದ ನಡೆಯುತ್ತಿರುವ ಮಿಲಾಪಿ ಪಾಲಿಟಿಕ್ಸ್‌ನ ಮುಂದುವರೆದ ಭಾಗ.


ಕಾಂಗ್ರೆಸ್ಸಿನ ಪ್ರಕಾಶ್ ಹುಕ್ಕೇರಿ ಸದ್ಯ ಚಿಕ್ಕೋಡಿ-ಸದಲಗಾ ಕ್ಷೇತ್ರದ ಶಾಸಕ. ಎಂಪಿ ಎಲೆಕ್ಷನ್‌ನಲ್ಲಿ ಸೋತರೂ ಆ ಶಾಸಕಗಿರಿ ಉಳಿದುಕೊಳ್ಳುತ್ತದೆ. ಚುನಾವಣೆಯಲ್ಲಿ ಬಿಜೆಪಿಯ ರಮೇಶ್ ಕತ್ತಿಯನ್ನು ಗೆಲ್ಲಿಸಿದರೆ ಕೈತುಂಬಾ ದುಡ್ಡು ಸಿಗುತ್ತದಲ್ಲದೇ ತನ್ನ ಮಗ ಗಣೇಶ್ ಹುಕ್ಕೇರಿಯ ರಾಜಕೀಯ ಭವಿಷ್ಯವೂ ತೆರೆದುಕೊಳ್ಳುತ್ತದೆ. ಎಂಬ ಲೆಕ್ಕಾಚಾರದಲ್ಲಿ ರಮೇಶ್ ಕತ್ತಿಯೊಂದಿಗೆ ಕೈಜೋಡಿಸಿದ್ದಾನೆ.

ಚುನಾವಣೆಯಲ್ಲಿ ಪ್ರಕಾಶ್ ಹುಕ್ಕೇರಿ ಕಾಂಗ್ರೆಸ್‌ನ ನಾಮಮಾತ್ರ ಅಭ್ಯರ್ಥಿಯಾಗಿದ್ದು ಬಿಜೆಪಿಯ ರಮೇಶ್ ಕತ್ತಿಯನ್ನು ಗೆಲ್ಲಿಸಲು ಶ್ರಮಿಸಬೇಕು. ಚುನಾವಣೆ ಮುಗಿಯುತ್ತಿದ್ದಂತೆಯೇ ಅರ್ಥಾತ್ ರಮೇಶ್ ಕತ್ತಿ




ಗೆಲ್ಲುತ್ತಿದ್ದಂತೆಯೇ ಪ್ರಕಾಶ್ ಹುಕ್ಕೇರಿಯ ಮಗ ಗಣೇಶ್ ಹುಕ್ಕೇರಿಯನ್ನು ಡಿಸಿಸಿ ಬ್ಯಾಂಕ್ ಅಧ್ಯಕ್ಷನನ್ನಾಗಿ ಮಾಡಬೇಕು. ನಂತರ ಹಾಲಿ ವಿಧಾನ ಪರಿಷತ್ ಸದಸ್ಯ ಶಶಿಕಾಂತ್ ನಾಯಕ್ ಅವರ ಅಧಿಕಾರಾವಧಿ ಮುಗಿಯುತ್ತಿದ್ದಂತೆಯೇ ಆ ಜಾಗಕ್ಕೆ ಗಣೇಶ್ ಹುಕ್ಕೇರಿಯನ್ನು ಕೂರಿಸಬೇಕು. ಇದು ಕಾಂಗ್ರೆಸ್‌ನ ಪ್ರಕಾಶ್ ಹುಕ್ಕೇರಿ ಮತ್ತು ಬಿಜೆಪಿಯ ರಮೇಶ್ ಕತ್ತಿ ನಡುವಿನ ಒಳ-ಒಪ್ಪಂದದ ಸಾರಾಂಶ. ಕಾಂಗ್ರೆಸ್ ಮಿಲಾಪಿ ರಾಜಕಾರಣದ ಪರಮಾವಧಿ.

ಇದು ಕಾಂಗ್ರೆಸ್‌ನ ಪಾಡಾದರೆ, ಇನ್ನು ಜೆಡಿಎಸ್‌ನ ಕತೆ ಕೇಳಿ. "ಕ್ಷೇತ್ರದಲ್ಲಿ ನಾನೇ ಜೆಡಿಎಸ್ ಅಭ್ಯರ್ಥಿ'' ಎಂದು ಹೇಳಿಕೊಂಡು ಅಡ್ಡಾನ್ನಾಗಿ ಪ್ರಚಾರಕ್ಕಿಳಿದಿದ್ದ ಮಾಜಿ ಸಂಸದ ಅಮರಸಿಂಹ ಪಾಟೀಲನ ತಮ್ಮ ಪ್ರತಾಪಸಿಂಹ ಪಾಟೀಲ ದ್ಯಾವೇಗೌಡರ ಗುಡುಗಿಗೆ ಅದುರಿ ಗೂಡು ಸೇರಿಕೊಂಡಿದ್ದಾನೆ. ಬಿ ಫಾರ್ಮ್‌ಗಾಗಿ ಬೆಂಗಳೂರು ಅಲೆದು ಸುಸ್ತಾಗಿದ್ದ ಪ್ರತಾಪಸಿಂಹ ಕೊನೆಗೆ ಜೆಡಿಎಸ್ ಅಭ್ಯರ್ಥಿ ಎಂದು ನಾಮಿನೇಶನ್ ಕೂಡ ಮಾಡಿದ್ದ. ಆದರೆ ದೇವೇಗೌಡರು "ಬಿ ಫಾರ್ಮ್ ಖಾಲಿಯಾಗಿವೆ, ನಾಮಿನೇಶನ್ ವಾಪಸ್ಸು ತೆಗೆದುಕೊ'' ಎಂದು ಆರ್ಡರ್ ಮಾಡಿದಾಗ ಸುಮ್ಮನಾದ. ಒಂದು ಕಾಲದಲ್ಲಿ ಚಿಕ್ಕೋಡಿಯಲ್ಲಿ ಪ್ರಬಲವಾಗಿದ್ದ ಜೆಡಿಎಸ್ ಇಂದು ಒಬ್ಬ ಅಭ್ಯರ್ಥಿಯನ್ನೂ ಕಣಕ್ಕಿಳಿಸಲಾರದ ಪರಿಸ್ಥಿತಿಗೆ ಬಂದು ನಿಂತಿದೆ.


ಬಿ.ಶಂಕರಾನಂದ


ಉಮೇಶ್ ಕತ್ತಿ



ಕಾಂಗ್ರೆಸ್‌ನ ಮಿಲಾಪಿ ರಾಜಕಾರಣ, ಜೆಡಿಎಸ್‌ನ ದಾರುಣ ಸ್ಥಿತಿಗಳಿಂದಾಗಿ ಬಿಜೆಪಿಯ ರಮೇಶ್ ಕತ್ತಿಗೆ ಈಗ ಎದುರಾಳಿಯೇ ಇಲ್ಲದಂತಾಗಿದೆ. ರಮೇಶ್ ಕತ್ತಿ ತಾನು ಈಗಾಗಲೇ ಪಾರ್ಲಿಮೆಂಟ್ ಗೇಟಿನ ಮುಂದೆ ನಿಂತಂತೆ ಆಡುತ್ತಿರುವುದಕ್ಕೆ ಇದೇ ಕಾರಣ.

ಕಾಗವಾಡ, ಕುಡಚಿ, ರಾಯಭಾಗ, ಚಿಕ್ಕೋ[ಡಿ] ಸದಲಗಾ, ಹುಕ್ಕೇರಿ, ಯಮಕನಮರಡಿ, ನಿಪ್ಪಾಣಿ ವಿಧಾನ[ಸಭಾ] ಕ್ಷೇತ್ರಗಳು ಚಿಕ್ಕೋಡಿ ಲೋಕಸಭಾ ಕ್ಷೇತ್ರವ[ನ್ನು] ಹೊರಹೊಮ್ಮಿದೆ. ಇಲ್ಲೆಲ್ಲಾ ಕಬ್ಬೇ ಪ್ರಮುಖ ... ಯಾಗಿದ್ದು ಈ ಭಾಗದ ಸಕ್ಕರೆ ಕಾರ್ಖಾನೆಗಳೇ ಇವ... ಆಸರೆಯಾಗಿವೆ. ರಮೇಶ್ ಕತ್ತಿ ಕೂಡ ಸ... ಉದ್ಯಮದಿಂದಲೇ ಪ್ರವರ್ಧಮಾನಕ್ಕೆ ಬಂದವನು. ತ... ವಿಶ್ವನಾಥ ಕತ್ತಿ ಪ್ರಾರಂಭಿಸಿದ್ದ ವಿಶ್ವನಾಥ ಶುಗರ್ಸ್ ಇವೊ... ರಮೇಶ್ ಕತ್ತಿಯನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿ... ಬೆಳಗಾವಿ ಮಧ್ಯವರ್ತಿ ಬ್ಯಾಂಕಿಗೆ ಕಳೆದ ಇಪ್ಪ... ವರ್ಷಗಳಿಂದ ಅಧ್ಯಕ್ಷನಾಗಿರುವ ರಮೇಶ್ ಕತ್ತಿ ... ಬಣಜಿಗ ಬುದ್ಧಿಯನ್ನು ಚೆನ್ನಾಗಿ ಬಳಸಿಯ... ರಾಜಕೀಯದಲ್ಲಿ ಬೆಳೆದವನು.

ಈ ಕತ್ತಿ ಬ್ರದರ್ಸ್ ಚಿಕ್ಕೋಡಿಯನ್ನು ಆಳಲಾರಂಭಿ... ಮೇಲೆ ತಮ್ಮ ಸ್ವಕ್ಷೇತ್ರ ಹುಕ್ಕೇರಿಗಾಗಲೀ, ಚಿಕ್ಕೋ... ಜಿಲ್ಲೆಗಾಗಲೀ ಮಾಡಿದ್ದೇನೂ ಇಲ್ಲ, ಸ... ಅಧಿಕಾರಿಗಳ ಮೇಲೆ ಗೂಂಡಾಗಿರಿ ಮಾಡಿದ... ಎದುರಾಡಿದವರನ್ನು ಗೋಳು ಹೊಯ... ಕೊಂಡದ್ದು, ತಮ್ಮ ತಿಜೋರಿ ಭರ್ತಿ ಮಾಡಿಕೊಂಡಿದ್ದೇ ಅವರ ಸಾಧನೆ. ಕಾಂಗ್ರೆಸ್ಸಿ[ನ] ಪ್ರಕಾಶ್ ಹುಕ್ಕೇರಿ ಇದನ್ನೇ ಬಂಡವಾ[ಳ] ಮಾಡಿಕೊಂಡು ಕತ್ತಿ ಬ್ರದರ್ಸ್‌ಗೆ ಸೆ... ಹೊಡೆದಿದ್ದರೆ ಈಗಾಗಲೇ ಕತ್ತಿ ಬ್ರದರ್ಸ್ ಶೋಷಣೆಯಿಂದ ನಲುಗಿರುವ ಜನ ಅವನನ್ನು ಆರಾಮಾಗಿ ಗೆಲ್ಲಿಸುತ್ತಿದ್ದರು. ಪ್ರಕಾಶ್ ಹುಕ್ಕೇರಿಯೇ ಈಗ ಕತ್ತಿ ಸಹೋದರರ ಜೇಬಿನ[ಲ್ಲಿ] ಕುಳಿತುಕೊಂಡಿರುವುದರಿಂದ ಕತ್ತಿ ದರ್ಬಾರ್ ಮುಂದುವರೆಯುವ ಸೂಚನೆಗಳೇ ಜಾ... ಯಾಗಿವೆ.

ಸದ್ಯಕ್ಕೆ ಚಿಕ್ಕೋಡಿ ಕಣದಲ್ಲಿ ಏಳು ಜ... ಉಳಿದಿದ್ದಾರೆ. ಬಿಜೆಪಿಯ ರಮೇಶ್ ಕ... ಕಾಂಗ್ರೆಸ್ಸಿನ ಪ್ರಕಾಶ್ ಹುಕ್ಕೇರಿ, ಬಿಎಸ್ಪಿಯ ಶಿವಾನಂದ ಮಟಮಾರಿ, ಪಕ್ಷೇತರ ಅಭ್ಯರ್ಥಿಗಳಾಗಿ ಭೀಮಪ್ಪ ಇಟಪ್ಪ, ಮಲ್ಲಪ್ಪ ಖಟಾಂ... ಯಶವಂತ ಸುತಾರ, ಶೈಲಾ ಸುರೇಶ್ ಕೋ... ಇವರಲ್ಲಿ ಇಬ್ಬರು ಮಾತ್ರವೇ ಪ್ರಬಲರು. ಅದರಲ್ಲೊಬ್ಬ ಮಗನ ಭವಿಷ್ಯಕ್ಕಾಗಿ ಅಬ... ಇನ್ನು ಕತ್ತಿಯನ್ನು ಹಿಡಿಯೋರ್‍ಯಾರು?

● ಹುರುಳಿಕುಪ್ಪಿ ವಿನಯ...

ಚಾಮರಾಜನಗರ: ಧ್ರುವನಾರಾಯಣ್ ಗೆಲುವು ಖಚಿತ


ರಾಜ್ಯದ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಚುನಾವಣಾ ಕಾವೇರಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ಗಳ ಜೊತೆಗೆ ಈ ಬಾರಿ ಬಿಎಸ್ಪಿಯೂ ಹಣಾಹಣಿಗೆ ಸಿದ್ಧವಾಗಿದೆ. ಒಂದು ರೀತಿಯಲ್ಲಿ ಈ ನಾಲ್ಕೂ ಪಕ್ಷಗಳ ನಡುವೆ ಸಮಬಲದ ಚತುಷ್ಕೋನ ಸ್ಪರ್ಧೆ ಏರ್ಪಡುವಂತೆ ಕಾಣುತ್ತದೆಯಾದರೂ ಕೆಲ ಲೆಕ್ಕಾಚಾರಗಳ ಪ್ರಕಾರ ಕಾಂಗ್ರೆಸ್‌ನ ಧ್ರುವನಾರಾಯಣ್ ಫೇವರೇಟ್ ಅಭ್ಯರ್ಥಿಯಾಗಿದ್ದಾರೆ.

ಯುಪಿಎ ಸರ್ಕಾರಕ್ಕೆ ಬೆಂಬಲ ಘೋಷಿಸುವದಕ್ಕಾಗಿ ದೇವೇಗೌಡರಿಗೆ ಚಳ್ಳೆಹಣ್ಣು ತಿನ್ನಿಸಿ ಬಂದಿದ್ದ ಈ ಹಿಂದಿನ ಲೋಕಸಭಾ ಸದಸ್ಯ ಕಾಗಲವಾಡಿ ಶಿವಣ್ಣನಿಗೆ ಕಾಂಗ್ರೆಸ್ ನಿರೀಕ್ಷೆಯಂತೆ ಕೈ ಕೊಟ್ಟಿದೆ. ಸಿದ್ಧರಾಮಯ್ಯ, ಶ್ರೀನಿವಾಸ್ ಪ್ರಸಾದ್, ಮಹಾದೇವ ಪ್ರಸಾದ್ ಮತ್ತು ನರೇಂದ್ರರ ಬೆಂಬಲವನ್ನು ಬೆನ್ನಿಗಿಟ್ಟುಕೊಂಡಿರುವ ಕೊಳ್ಳೇಗಾಲ ಮೀಸಲು ಕ್ಷೇತ್ರದ ಹಾಲಿ ಎಮ್ಮೆಲ್ಲೆ ಆರ್.ಧ್ರುವನಾರಾಯಣ್ ಕಾಂಗ್ರೆಸ್ ಟಿಕೆಟ್ ಗಿಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ.


ಶ್ರೀನಿವಾ...




ಕೃಷ್ಣಮೂರ್ತಿ




ಹಾಗೆ ನೋಡಿದರೆ ಧ್ರುವನಾರಾಯಣ್ ಕಳೆದ ಹತ್ತು ವರ್ಷಗಳಿಂದ ಹಿರಿಯ ರಾಜಕೀಯ ಮುತ್ಸದ್ದಿ ರಾಜಶೇಖರಮೂರ್ತಿಯ ಗರಡಿಯಲ್ಲಿ ಪಳಗಿದ ರಾಜಕಾರಣಿ. ಆ ದಿನಗಳಲ್ಲೇ ರಾಜಶೇಖರಮೂರ್ತಿಯವರು ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸ್ ಪ್ರಸಾದ್ ವಿರುದ್ಧ ಈ ಧ್ರುವನಾರಾಯಣ್‌ರನ್ನು ಬೆಳೆಸಿದ್ದರು. ಧ್ರುವನಾರಾಯಣ್ ಮುಂದೊಂದು ದಿನ ಶ್ರೀನಿವಾಸ್ ಪ್ರಸಾದ್ ವಿರುದ್ಧ ಪ್ರಬಲ ರಾಜಕಾರಣಿಯಾಗಿ ಸೆಡ್ಡು ಹೊಡೆಯುತ್ತಾನೆಂಬ ಮೇಲ್ಮಟ್ಟದ ಲೆಕ್ಕಾಚಾರಗಳು ತಲೆಕೆಳಗಾಗಿದ್ದರಿಂದ ಅವರಿಬ್ಬರೂ ಈಗ ಒಂದೇ ದೋಣಿಯಲ್ಲಿ ಸಾಗುವಂತಾಗಿದೆ. ಸದ್ಯಕ್ಕೆ ಕುರುಬರ ನಾಯಕ ಸಿದ್ಧರಾಮಯ್ಯ ಧ್ರುವನಾರಾಯಣ್ ಬೆನ್ನಿಗಿದ್ದಾರೆ.

ಕ್ಷೇತ್ರದಲ್ಲಿ ಕಾಂಗ್ರೆಸ್ ಉಳಿದ ಪಕ್ಷಗಳಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿರುವ ಎಲ್ಲಾ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಹನೂರಿನಿಂದ ಆರ್.ನರೇಂದ್ರ, ಚಾಮರಾಜನಗರದಿಂದ ಸಿ.ಪುಟ್ಟರಂಗಶೆಟ್ಟಿ, ಗುಂಡ್ಲುಪೇಟೆಯಿಂದ ಹೆಚ್.ಎಸ್.ಮಹದೇವ ಪ್ರಸಾದ್, ಟಿ.ನರಸೀಪುರದಿಂದ ಹೆಚ್.ಸಿ.ಮಹಾದೇವಪ್ಪ, ವರುಣಾದಿಂದ ಸಿದ್ಧರಾಮಯ್ಯ, ಹೆಗ್ಗಡದೇವನ ಕೋಟೆಯಿಂದ ಚಿಕ್ಕಣ್ಣ, ನಂಜನಗೂಡಿನಿಂದ ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಕೊಳ್ಳೇಗಾಲದಿಂದ ಖುದ್ದು ಧ್ರುವನಾರಾಯಣ್ ಗೆದ್ದಿದ್ದಾರೆ. ಈ ಬಾರಿ ಅವರೆಲ್ಲರೂ ಧ್ರುವನಾರಾಯಣ್ ಬೆಂಬಲಕ್ಕೆ ನಿಂತಿದ್ದಾರೆ.



ಧ್ರುವನಾರಾಯಣ

ಎರಡನೆಯದಾಗಿ ಜಾತಿ ಲೆಕ್ಕಾಚಾರದಲ್ಲೂ ಕಾಂಗ್ರೆಸ್ ಮೇಲುಗೈ ಸಾಧಿಸುವ ಛಾನ್ಸು ಜಾಸ್ತಿಯಿದೆ. ಕ್ಷೇತ್ರದಲ್ಲಿ ಸುಮಾರು ಒಂದೂವರೆ ಲಕ್ಷದಷ್ಟು ಕುರುಬ ಮತಗಳಿವೆ. ಕುರುಬರ ನಾಯಕರಾಗಿರುವ ಸಿದ್ಧರಾಮಯ್ಯನವರು ಧ್ರುವನಾರಾಯಣ್ ಬೆಂಬಲಕ್ಕೆ ನಿಂತಿರುವುದರಿಂದ ಅವೆಲ್ಲಾ ಕಾಂಗ್ರೆಸ್ ಪಾಲಾಗಲಿವೆ. ಉಪ್ಪಾರರು ಒಂದು ಲಕ್ಷದಷ್ಟಿದ್ದಾರೆ. ಉಪ್ಪಾರರ ನಾಯಕ ಹಾಗೂ ಚಾಮರಾಜನಗರದ ಎಮ್ಮೆಲ್ಲೆ ಪುಟ್ಟರಂಗಶೆಟ್ಟಿ ಕ್ಷೇತ್ರದಾದ್ಯಂತ ಓಡಾಡುತ್ತಿರುವುದರಿಂದ ಅವುಗಳೆಲ್ಲಾ ಕಾಂಗ್ರೆಸ್ ಪರ ವಾಲಲಿವೆ. ಇನ್ನು ಒಂದು ಲಕ್ಷದಷ್ಟಿರುವ ಮುಸ್ಲಿಮರು ಯಾವ ಕಾರಣಕ್ಕೂ ಬಿಜೆಪಿಗೆ ಓಟು ಹಾಕುವುದಿಲ್ಲ, ಬಿಜೆಪಿಯನ್ನು ಸೋಲಿಸಬಲ್ಲ ತಾಕತ್ತು ಕಾಂಗ್ರೆಸ್‌ಗೆ ಇರುವುದರಿಂದ ಅವರೆಲ್ಲರೂ ಸಾಲಿಡ್ಡಾಗಿ ಧ್ರುವನಾರಾಯಣ್ ಪರ ಮತ ಹಾಕಲಿದ್ದಾರೆ. ಇತ್ತೀಚೆಗೆ ಬಿಜೆಪಿ ಸರ್ಕಾರದ ಬೆಂಬಲದೊಂದಿಗೆ ಸಂಘಪರಿವಾರದ ಭಜರಂಗಿಗಳು ರಾಜ್ಯದಾದ್ಯಂತ ಚರ್ಚುಗಳ ಮೇಲೆ ದಾಳಿ ಮಾಡಿದ್ದರಿಂದ ಕ್ರಿಶ್ಚಿಯನ್ನರೂ ಬಿಜೆಪಿಯನ್ನು ಸೋಲಿಸಬಲ್ಲ ಕಾಂಗ್ರೆಸ್ ಕಡೆ ವಾಲುತ್ತಾರೆ. ಈ ಎಲ್ಲಾ ಕಾರಣಗಳಿಂದ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಧ್ರುವನಾರಾಯಣ್ ಗೆಲ್ಲುವ ಸಾಧ್ಯತೆಯಿದೆ.

ಇನ್ನೊಂದೆಡೆ ಬಿಜೆಪಿ ನೋಡಿ. ಕ್ಷೇತ್ರದಲ್ಲಿ ಸುಮಾರು ಮೂರುವರೆ ಲಕ್ಷದಷ್ಟಿರುವ ಲಿಂಗಾಯತ ಮತಗಳ ಮೇಲೆಯೇ ಆಧರಿತವಾಗಿದೆ. ರಾಜ್ಯ ಮಟ್ಟದಲ್ಲಿ ಬಿಜೆಪಿ ಲಿಂಗಾಯತರ ಪಕ್ಷವೆಂದು ಬಿಂಬಿತವಾಗಿರಬಹುದು. ಆದರೆ, ಚಾಮರಾಜನಗರ ಕ್ಷೇತ್ರ ಎಸ್‌ಸಿ ಮೀಸಲು ಕ್ಷೇತ್ರವಾಗಿದ್ದರಿಂದ ಅಲ್ಲಿ ಲಿಂಗಾಯತರು ಸ್ಪರ್ಧಿಸಲು ಬರುವುದಿಲ್ಲ, ಅಲ್ಲಿರುವ ಲಿಂಗಾಯತರಿಗೆ ಬಿಜೆಪಿಯ ದಲಿತ ಅಭ್ಯರ್ಥಿ, ಕಾಂಗ್ರೆಸ್‌ನ ದಲಿತ ಅಭ್ಯರ್ಥಿ, ಜೆಡಿಎಸ್‌ನ ದಲಿತ ಅಭ್ಯರ್ಥಿ ಎಂಬ ಭೇದ[ಭಾವ]ವೇನಿರುವುದಿಲ್ಲ. ಎಲ್ಲರೂ ದಲಿತರಾಗಿರುವ[ು]ದರಿಂದ ಯಾರಿಗಾದರೂ ಓಟು ಹಾಕಲೇ[ಬೇ]ಕು. ಹೀಗಾಗಿ ಲಿಂಗಾಯತ ಓಟುಗಳು ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ನಡುವೆ ಛಿದ್ರವಾಗಿ ಹೋಗುತ್ತವೆ. ಬಿಜೆಪಿಯು ಬಿಎಸ್ಪಿಯ ಪರಿಮಳ ನಾಗಪ್ಪರನ್ನು ತನ್ನತ್ತ ಸೆಳೆದುಕೊಂಡಿರುವುದರಿಂದ ಅದಕ್ಕೆ ಸ್ವಲ್ಪ ಹೆಚ್ಚು ಲಿಂಗಾಯತ ಓಟುಗಳು ಬೀಳಬಹುದಷ್ಟೆ.


ಶಿವಣ್ಣ


ಬಾಲರಾಜ್





ಚಿಕ್ಕಮಾದು

ಇನ್ನು ಜೆಡಿಎಸ್ ಕೋಟೆ ಶಿವಣ್ಣನಿ[ಗೆ] ಟಿಕೆಟ್ ಕೊಟ್ಟಿದೆ. ಕ್ಷೇತ್ರದಲ್ಲಿ ಸುಮಾರು ಮೂರೂ ಮುಕ್ಕಾಲು ಲಕ್ಷ ದಲಿತ ಮತಗಳಿವೆಯಾದರೂ ಶಿವಣ್ಣರು ಎಡಗೈ ಜಾತಿಯ ಮತಗಳನ್ನಷ್ಟೇ ನಂಬಿಕೊಳ್ಳಬೇಕಿದೆ. ದೇವೇಗೌಡ, ಕುಮಾರಸ್ವಾಮಿ, ಎಮ್ಮೆಲ್ಲೆ ಚಿಕ್ಕಮಾದು, ಮಾಜಿ ಎಮ್ಮೆಲ್ಲೆ ಬಾಲ[ರಾಜು]ರಾಜುಗಳು ಶಿವಣ್ಣನವರ ಬೆಂಬಲಕ್ಕೆ ನಿಂತಿರುವುದರಿಂದ ಒಂದಿಷ್ಟು ಪೈಪೋಟಿ ಉಂಟಾಗುವುದು ನಿಜ.

ಕ್ಷೇತ್ರದಲ್ಲಿ ಮೂರು ಮುಕ್ಕಾಲು ಲಕ್ಷ ದಲಿತ ಮತಗಳಿವೆ. ಚುನಾವಣೆಗೆ ಸ್ಪರ್ಧಿಸುತ್ತಿರುವ ಎಲ್ಲಾ ಅಭ್ಯರ್ಥಿಗಳು ದಲಿತರಾಗಿರುವುದರಿಂದ ಅವೆಲ್ಲವೂ ಎಲ್ಲರ ನಡುವೆ ಹಂಚಿಹೋಗಲಿವೆ. ದಲಿತ ಮಹಿಳೆ ಮಾಯಾವತಿ ದೇಶದ ಪ್ರಧಾನಿಯಾಗಲೆಂದು ಒಂದಿಷ್ಟು ದಲಿತರು ಬಿಎಸ್ಪಿಯ ಎನ್. ಮಹೇಶ್‌ಗೆ ಓಟು ಹಾಕುತ್ತಾರೆ.

ಈ ಎಲ್ಲಾ ಲೆಕ್ಕಾಚಾರಗಳನ್ನು ನೋಡಿದರೆ ಕಾಂಗ್ರೆಸ್‌ನ ಧ್ರುವನಾರಾಯಣ್ ಗೆಲುವಿನ ದಡ ಸೇರುವುದು ಗ್ಯಾರಂಟಿ. ಉಳಿದಂತೆ ಬಿಜೆಪಿ ಮತ್ತು ಜೆಡಿಎಸ್‌ಗಳು ಎರಡನೇ ಸ್ಥಾನಕ್ಕೆ ಪೈಪೋಟಿ ನಡೆಸಬೇಕಷ್ಟೆ.

● ಕೊಳ್ಳೇಗಾಲ ಚಿಕ್ಕಮಾಳಿಗೆ...



ಧಾರವಾಡ: ಜೋಶಿ ಸೋಲಿಗೆ ಕ್ಷಣಗಣನೆ...

ಲೋಕಸಭೆಯಲ್ಲಿ ಶೇ.72ರಷ್ಟು ಹಾಜರಾತಿ ಹೊಂದಿರುವ ಕುನ್ನೂರ ತಮ್ಮ ಕ್ಷೇತ್ರದ ಸ್ಥಳೀಯ ಸಮಸ್ಯೆಗಳನ್ನು ಕುರಿತು 54 ಬಾರಿ ಚರ್ಚೆ ಮಾಡಿದ್ದಾರೆ. ಪ್ರಸ್ತುತ ಅಸೆಂಬ್ಲಿ ತೀರ್ಮಾನಗಳ ಕುರಿತು 156 ಬಾರಿ ಪ್ರಶ್ನೆ ಎತ್ತಿದ್ದಾರೆ. ಆದರೆ ಜೋಶಿ ನೋಡಿ. ಪಾರ್ಲಿಮೆಂಟಿನ ಚರ್ಚೆಗಳಲ್ಲಿ ಭಾಗವಹಿಸದೇ, ಸ್ಥಳೀಯ ಜನರ, ತನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡದೇ ಬೆಂಗಳೂರಿನ ಕೇಶವಕೃಪದಲ್ಲಿ ಬೈಠಕ್ ನಡೆಸುವುದರಲ್ಲೇ ಐದು ವರ್ಷಗಳನ್ನು ಕಳೆದಿದ್ದಾರೆ.


ಈ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರದ ಬಿಜೆಪಿ ಪ್ರಹ್ಲಾದ್ ಜೋಶಿ ಬುತ್ತಿ ಕಟ್ಟುತ್ತಾನಾ? ಕಾಂಗ್ರೆಸ್ಸಿನ ಮಂಜುನಾಥ್ ಈ ಹಿಂದಿನ ಅವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು ಸೋಲಿಗೆ, ಕುನ್ನೂರರ ಗೆಲುವಿಗೆ ಮುನ್ನುಡಿ ಬರೆಯುತ್ತವೆಯಾ? ದವಾಡ ಕ್ಷೇತ್ರದಲ್ಲಾಗುತ್ತಿರುವ ಬೆಳವಣಿಗೆಗಳನ್ನು ನೋಡಿದರೆ ಈ ಪ್ರಶ್ನೆಗಳಿಗೆ ಉತ್ತರ 'ಹೌದು' ಎಂತಲೇ ಕಾಣುತ್ತಿವೆ. ಈ ಹಿಂದೆ [illegible] ಇದ್ದಾಗಲೂ ಏನೂ ಆಗಲಿಲ್ಲ, ಜೋಶಿ ಬಂದ ಮ್ಯಾಲೂ ಆಗಲಿಲ್ಲ ಎಂದು ಕೊರಗುತ್ತಿರುವ ಜನರಿಗೆ ಕುನ್ನೂರ ಅವರೇ [illegible]ಯಾಗಿ ಕಾಣುತ್ತಿದ್ದಾರೆ.


[illegible]04ರ ಲೋಕಸಭಾ ಚುನಾವಣೆಯ ತನಕ ಈ ಕ್ಷೇತ್ರ ಧಾರವಾಡ [illegible] ಮತ್ತು ದಕ್ಷಿಣ ಎಂದು ಎರಡು ಕವಲುಗಳಾಗಿತ್ತು. ಕಳೆದ [illegible]ಣೆಯಲ್ಲಿ ಮಂಜುನಾಥ್ ಕುನ್ನೂರ ಧಾರವಾಡ ದಕ್ಷಿಣದಿಂದ ಗೆದ್ದು [illegible]ದ್ದರೆ ಉತ್ತರದಿಂದ ಪ್ರಹ್ಲಾದ್ ಜೋಶಿ ಗೆದ್ದಿದ್ದರು. ಕ್ಷೇತ್ರದ ಅಭಿವೃದ್ಧಿಯ [illegible] ಬಂದರೆ ಇಬ್ಬರಿಗೂ ಅಜಗಜಾಂತರ ವ್ಯತ್ಯಾಸವಿದೆ.

[illegible]ರೇನಾದರೂ ತಮ್ಮ ಸಮಸ್ಯೆಗಳನ್ನಿಟ್ಟುಕೊಂಡು ಜೋಶಿ ಹತ್ತಿರ [illegible] 'ಕೇಂದ್ರದಲ್ಲಿ ನಮ್ಮ ಸರ್ಕಾರ ಇಲ್ಲ, ಮುಂದಿನ ಸಾರಿ ನಮ್ಮದೇ ಅಧಿಕಾರಕ್ಕೆ ಬಂದಾಗ ನೋಡೋಣ' ಎಂದು ಹಾರಿಕೆ ಉತ್ತರ ಸಾಗಹಾಕುತ್ತಿದ್ದ. ಆದರೆ, ಮಂಜುನಾಥ್ ಕುನ್ನೂರ ಇದಕ್ಕಿಂತ [illegible] ವರ್ತಿಸಿದರು. ಗೆಲ್ಲಿಸಿದ ಜನರಿಗೆ ಮೋಸ ಮಾಡುವ ಪ್ರವೃತ್ತಿಯನ್ನು [illegible]ಸಲಿಲ್ಲ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ, ತಮ್ಮ ಸ್ವಂತ ವರ್ಚಸ್ಸಿನ [illegible]ಲ್ಲಿ ಎಷ್ಟು ಸಾಧ್ಯವೋ ಅಷ್ಟು ಕೆಲಸಗಳನ್ನು ಮಾಡಿಕೊಟ್ಟರು. [illegible]ತ ಧಾರವಾಡ ಜಿಲ್ಲೆಯ ರೈತರು 'ಮೈಕೋ' ಪೊಳ್ಳು ಹತ್ತಿ ಬೀಜ [illegible]ಮಾಡಿ ಸಂಪೂರ್ಣ ನಷ್ಟ ಅನುಭವಿಸಿದಾಗ ರೈತರಿಗೆ ನೇರವಾಗಿ [illegible]ರ ಸಿಗುವಂತೆ ಮಾಡಿದ್ದು ಇದೇ ಕುನ್ನೂರ. ಗದಗ, ಧಾರವಾಡ, [illegible] ಜಿಲ್ಲೆಗಳ ರೈತರನ್ನು ಉದ್ಧಾರ ಮಾಡುವುದಕ್ಕಾಗಿಯೇ ಕುನ್ನೂರ [illegible]ಗಳನ್ನು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಹಾಗೂ ಗ್ರಾಮೀಣ [illegible]ಗ ಖಾತ್ರಿ ಯೋಜನೆಯಡಿಯಲ್ಲಿ ಸೇರಿಸಲು ಸಾಕಷ್ಟು ಶ್ರದ್ಧೆ [illegible] ಕೆಲಸ ಮಾಡಿದರು. ಪಾರ್ಲಿಮೆಂಟಿನಲ್ಲಿ ಕುನ್ನೂರ ಈ ಕುರಿತು [illegible]ತ್ತಿದ್ದಾಗ ಅಲ್ಲೇ ಕುಳಿತಿದ್ದ ಪ್ರಹ್ಲಾದ್ ಜೋಶಿ ಇವರ ಬೆಂಬಲಕ್ಕೆ [illegible] ಎಂಬುದು ಬಹಳ ಜನರಿಗೆ ಗೊತ್ತಿರದ ಸತ್ಯ. ಪ್ರತಿವರ್ಷ [illegible]ಬಂದ ಸಂದರ್ಭದಲ್ಲಿ ನೆರೆಯಿಂದ ತತ್ತರಿಸುತ್ತಿದ್ದ ಧಾರವಾಡದ ಹಳ್ಳಿಗಳಿಗೆ [illegible]ಪುನರ್ವಸತಿ, ಪರಿಹಾರಗಳ ಪ್ಯಾಕೇಜ್ ಕೊಡಬೇಕೆಂದು ಕುನ್ನೂರ [illegible]ಮೆಂಟಿನಲ್ಲಿ ವಿಚಾರ ಮಂಡಿಸುತ್ತಿದ್ದರೆ ಇದೇ ಜಿಲ್ಲೆಯ ಪ್ರಹ್ಲಾದ್ [illegible] ನಿದ್ದೆ ಮಾಡುತ್ತಿದ್ದರು ಎಂಬುದೂ ಬಹಳ ಜನಕ್ಕೆ ಗೊತ್ತಿಲ್ಲ.

[illegible]ೀಕಸಭೆಯಲ್ಲಿ ಶೇ.72ರಷ್ಟು ಹಾಜರಾತಿ ಹೊಂದಿರುವ ಕುನ್ನೂರ [illegible]ಕ್ಷೇತ್ರದ ಸ್ಥಳೀಯ ಸಮಸ್ಯೆಗಳನ್ನು ಕುರಿತು 54 ಬಾರಿ ಚರ್ಚೆ [illegible]ದ್ದಾರೆ. ಪ್ರಸ್ತುತ ಅಸೆಂಬ್ಲಿ ತೀರ್ಮಾನಗಳ ಕುರಿತು 156 ಬಾರಿ ಪ್ರಶ್ನೆ [illegible]. ಆದರೆ ಜೋಶಿ ನೋಡಿ. ಪಾರ್ಲಿಮೆಂಟಿನ ಚರ್ಚೆಗಳಲ್ಲಿ [illegible]ಸದೇ, ಸ್ಥಳೀಯ ಜನರ, ತನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಚರ್ಚೆ [illegible] ಬೆಂಗಳೂರಿನ ಕೇಶವಕೃಪದಲ್ಲಿ ಬೈಠಕ್ ನಡೆಸುವುದರಲ್ಲೇ [illegible]ವರ್ಷಗಳನ್ನು ಕಳೆದಿದ್ದಾರೆ.

[illegible]ಸದನಾಗಿ ಗೆದ್ದುಹೋಗಿದ್ದ ಜೋಶಿ ಜನರ ಸಮಸ್ಯೆಗಳಿಗೆ ಎಂದೂ [illegible]ಲ್ಲ, ತನಗೆ ಬಂದಿದ್ದ ಎಂಪಿ ಫಂಡನ್ನೆಲ್ಲಾ ಬ್ರಾಹ್ಮಣ ಸಂಘಕ್ಕೆ, [illegible] ಮಠಕ್ಕೆ, ಹುಬ್ಬಳ್ಳಿಯ ಬಿಜೆಪಿ ಗ್ಯಾಂಗುಗಳಿಗೆ ಹಂಚಿದ್ದ. ಅದೇ [illegible]ರನ್ನು ನೋಡಿ. ಧಾರವಾಡ ದಕ್ಷಿಣ ಕ್ಷೇತ್ರದ ಪ್ರತಿಯೊಂದು ರೇಲ್ವೇ [illegible] ಅಭಿವೃದ್ಧಿಗೆ [illegible] ಎಂಟು ಕೋಟಿಯಷ್ಟು ದುಡ್ಡನ್ನು [illegible]ರ್ಕಾರದಿಂದ ಮಂಜೂರು ಮಾಡಿಸಿಕೊಂಡು ಬಂದಿದ್ದಾರೆ. ಸ್ವಾತಂತ್ರ್ಯಾ ನಂತರದಲ್ಲಿ ಕಳೆದ ಲೋಕಸಭಾ ಚುನಾವಣೆಗಳ ತನಕ ಕನಿಷ್ಠ ಕುಡಿಯುವ ನೀರಿಗಾಗಿಯೂ ಪರಿತಪಿಸುತ್ತಿದ್ದ ಶಿಗ್ಗಾಂವಿ, ಬಂಕಾಪುರ, ಸವಣೂರುಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು ಇದೇ ಕುನ್ನೂರ. ಬ್ರಿಟಿಷ್ ಕಾಲದಿಂದಲೂ ಹದಗೆಟ್ಟು ಹೋಗಿದ್ದ ಈ ಭಾಗದ ರಸ್ತೆಗಳಿಗೆ ಆಧುನಿಕ ಸ್ಪರ್ಶ ಕೊಟ್ಟವರೂ ಕುನ್ನೂರ ಅವರೆ. ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಸುಮಾರು 83 ಕೋಟಿ ಅಂದಾಜಿನ 42 ರಸ್ತೆಗಳನ್ನು, ಕೇಂದ್ರ ಸರ್ಕಾರದ ರಸ್ತೆ ನಿಧಿ ಯೋಜನೆಯಡಿಯಲ್ಲಿ ಸುಮಾರು 20 ಕೋಟಿ ವೆಚ್ಚದಲ್ಲಿ 27 ರಸ್ತೆಗಳ ಅಭಿವೃದ್ಧಿಗೆ ಅವರು ಚಾಲನೆ ಕೊಟ್ಟಿದ್ದಾರೆ.





ಈ ಭಾಗದ ಸಾಂಸ್ಕೃತಿಕ ಕ್ಷೇತ್ರದ ಅಭಿವೃದ್ಧಿಗೂ ಕುನ್ನೂರ ದುಡಿದಿದ್ದಾರೆ. ಕೂಡಲಸಂಗಮ ಅಭಿವೃದ್ಧಿ ಪ್ಯಾಕೇಜ್‌ನಂತೆಯೇ ಶಿಶುನಾಳ ಷರೀಫ್ ಅಭಿವೃದ್ಧಿ ಪ್ರಾಧಿಕಾರಕ್ಕೂ ತಮ್ಮ ಎಂಪಿ ಫಂಡ್‌ನಿಂದ ಒಂದು ಕೋಟಿ ದುಡ್ಡನ್ನು ಕೊಟ್ಟಿದ್ದಾರೆ. ಬಂಕಾಪುರ ನವಿಲುಧಾಮಕ್ಕೆ 25 ಲಕ್ಷ, ಹುಬ್ಬಳ್ಳಿ ಸಮೀಪದ ವರೂರು ನವಗ್ರಹ ತೀರ್ಥ ಅಭಿವೃದ್ಧಿಗಾಗಿ ಕೇಂದ್ರದಿಂದ ಮೂರು ಕೋಟಿ, ಸವಣೂರಿನ ಕವಿ ವಿ.ಕೃ.ಗೋಕಾಕ್ ಪ್ರಾಧಿಕಾರಕ್ಕೆ 20 ಲಕ್ಷಗಳಷ್ಟು ದುಡ್ಡನ್ನು ಮಂಜೂರು ಮಾಡಿಸಿರುವ ಕುನ್ನೂರ ಸುಮಾರು ಹತ್ತು ಕೋಟಿ ವೆಚ್ಚದ 400 ಕಾಮಗಾರಿಗಳನ್ನು ಜಿಲ್ಲೆಯಾದ್ಯಂತ ನೆರವೇರಿಸಿದ್ದಾರೆ. ಇದರಲ್ಲಿ ಆಸ್ಪತ್ರೆ, ಶಾಲೆ, ರಂಗಮಂದಿರ, ಸಮುದಾಯ ಭವನ, ಶಾದಿ ಮಹಲ್, ಮುಕ್ತಿಧಾಮಗಳನ್ನು ಕಟ್ಟಿಸಿದ್ದಾರೆ.

ಕುನ್ನೂರ ಇದನ್ನೆಲ್ಲಾ ಮಾಡುವಾಗ ಕೇಂದ್ರದಲ್ಲಿ ತಮ್ಮದೇ ಆದ ಸರ್ಕಾರವಿರಲಿಲ್ಲ. ಪ್ರಹ್ಲಾದ್ ಜೋಶಿಯಂತೆ 'ಕೇಂದ್ರದಲ್ಲಿ ನಮ್ಮ ಸರ್ಕಾರ ಬಂದ ಮೇಲೆ ನೋಡೋಣ' ಎಂದು ಅವರು ಜಾರಿಕೊಳ್ಳಲಿಲ್ಲ. ತಮ್ಮ ಕೈಲಾದಷ್ಟು ಕೆಲಸ ಮಾಡಿಸುತ್ತಲೇ ಹೋದರು. ಜೋಶಿ ಮಾತ್ರ ಬಂದ ಅಲ್ಪಸ್ವಲ್ಪ ದುಡ್ಡನ್ನೂ ಭಜರಂಗಿ ಗ್ಯಾಂಗುಗಳಿಗೆ ಇಟ್ಟು ಸಾಮಾನ್ಯ ಜನರ ಕಡೆ, ಕ್ಷೇತ್ರದ ಕಡೆ ತಿರುಗಿ ನೋಡಲಿಲ್ಲ. ಇದನ್ನೆಲ್ಲಾ ಅರ್ಥಮಾಡಿ ಕೊಳ್ಳದಷ್ಟು ಮೂರ್ಖರಲ್ಲ ಧಾರವಾಡದ ಜನ.

ಜಾತಿಯ ಲೆಕ್ಕಾಚಾರ ಹಾಕಿದರೂ ಕುನ್ನೂರ ಜೋಶಿಗಿಂತ ಮುಂದಿದ್ದಾರೆ. ಪ್ರಹ್ಲಾದ್ ಜೋಶಿ ಸಂಸದನಾಗಿ ಗೆದ್ದು ಬರುವುದಕ್ಕೆ ಕ್ಷೇತ್ರದಲ್ಲಿ ಅಪಾರ ಸಂಖ್ಯೆಯಲ್ಲಿರುವ ಲಿಂಗಾಯತರು. ಅದರಲ್ಲೂ ವಿಶೇಷವಾಗಿ ಪಂಚಮಸಾಲಿ ಲಿಂಗಾಯತರು ಪ್ರಮುಖ ಕಾರಣರಾಗಿದ್ದರು. ಅದೂಅಲ್ಲದೇ ದೊಡ್ಡ ಸಂಖ್ಯೆಯಲ್ಲಿರುವ ಕುರುಬ ಸಮುದಾಯವೂ ಕಳೆದ ಚುನಾವಣೆಯಲ್ಲಿ ಜೋಶಿಯ ಹಿಂದೆ ನಿಂತಿದ್ದು ಆತನ ಗೆಲುವನ್ನು ಸರಾಗಗೊಳಿಸಿತ್ತು. ರಾಜ್ಯದಲ್ಲಿ ಸುಮಾರು 75 ಲಕ್ಷದಷ್ಟಿರುವ ಪಂಚಮಸಾಲಿ ಸಮುದಾಯದಿಂದ ಬಿಜೆಪಿಯಲ್ಲಿ 14 ಜನ ಎಮ್ಮೆಲ್ಲೆಗಳಿದ್ದರೂ ಢೋಂಗಿ ಪಂಚಮಸಾಲಿ ಮುರುಗೇಶ್ ನಿರಾಣಿಗೆ ಮಾತ್ರವೇ ಮಂತ್ರಿ ಪದವಿ ಕೊಟ್ಟಿರುವ ಬಿಜೆಪಿಯ ಪಂಚಮಸಾಲಿ ವಿರೋಧಿ ಧೋರಣೆಗೆ ಇದೇ ಜೋಶಿ ಬೆಂಬಲವಾಗಿ ನಿಂತಿದ್ದ. ಈ ಚುನಾವಣೆಯಲ್ಲೂ ಬಿಜೆಪಿ ಅತಿ ಹೆಚ್ಚು ಜನಸಂಖ್ಯೆಯಿರುವ ಪಂಚಮಸಾಲಿಗಳಿಗೆ ಟಿಕೆಟ್ ಕೊಡದೆ ವಂಚಿಸಿರುವುದರಿಂದ ಸಹಜವಾಗಿ ಆ ಸಮುದಾಯ ಬಿಜೆಪಿಯ ವಿರುದ್ಧ ತಿರುಗಿ ಬಿದ್ದಿದೆ. ಈ ಹಿನ್ನೆಲೆಯಲ್ಲಿ ಬ್ರಾಹ್ಮಣನಾಗಿರುವ, ಬ್ರಾಹ್ಮಣವಾದಿಯಾಗಿರುವ ಪ್ರಹ್ಲಾದ್ ಜೋಶಿಗೆ ಹೆಡೆಮುರಿ ಕಟ್ಟಿ ತಮ್ಮದೇ ಪಂಚಮಸಾಲಿ ಸಮುದಾಯದ ನಾಯಕನಾಗಿರುವ ಮಂಜುನಾಥ್ ಕುನ್ನೂರರನ್ನು ಗೆಲ್ಲಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ಇನ್ನೊಂದು ಮಗ್ಗಲಿನಿಂದ ನೋಡಿದರೂ ಕುನ್ನೂರಗೆ ಪಾಸಿಟಿವ್ ಆಗಿದೆ. ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಮುಸ್ಲಿಂ ಮತಗಳಿವೆ. ಹಾಗೇ ನೋಡಿದರೆ ಪಂಚಮಸಾಲಿಗಳನ್ನು ಬಿಟ್ಟರೆ ಎರಡನೇ ದೊಡ್ಡ ಸಮುದಾಯವೆಂದರೆ ಮುಸ್ಲಿಮರೆ. ಮುಸ್ಲಿಮರೆಂದರೆ ಉರಿದು ಬೀಳುವ, ಕಂಡಕಂಡಲ್ಲಿ ಕೋಮು ಬೆಂಕಿ ಹಚ್ಚುವ ಪ್ರಹ್ಲಾದ್ ಜೋಶಿ ಮತ್ತು ಬಿಜೆಪಿಯ ಮಗ್ಗಲು ಮುರಿಯುವುದಕ್ಕೆ ಅವರೆಲ್ಲಾ ಕುನ್ನೂರರ ಪರ ವಹಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಅದೂಅಲ್ಲದೇ ಈ ನಡುವೆ ಸವಣೂರು ಮತ್ತು ಶಿಗ್ಗಾಂವಿಗಳ ಪಂಚಾಯತಗಳು ಕಾಂಗ್ರೆಸ್ ಮಯವಾಗಿರುವುದು ಕುನ್ನೂರರ ಬಲವನ್ನು ಹೆಚ್ಚಿಸಿವೆ. ಕ್ಷೇತ್ರದಲ್ಲಿ ಕುರುಬರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಕುರುಬರ ನಾಯಕ ಸಿದ್ಧರಾಮಯ್ಯ ಈಗ ಕಾಂಗ್ರೆಸ್‌ನಲ್ಲಿರುವುದು, ಪಕ್ಷದ ಪರ ಚುರುಕಾಗಿ ಓಡಾಡುತ್ತಿರುವುದು ಕುರುಬರು ಸಾಲಿದ್ಯಾಗಿ ಕಾಂಗ್ರೆಸ್ ಕಡೆ ವಾಲುವುದಕ್ಕೆ ಕಾರಣವಾಗಲಿದೆ.

● ಹುರುಳಿಕುಪ್ಪಿ ವಿನಯ್



ಕುನ್ನೂರ್‌ರ ಧಾರವಾಡ ವಿಷನ್

ಇದು ಕುನ್ನೂರ ಅವರು ಧಾರವಾಡದ ಸಮಗ್ರ ಅಭಿವೃದ್ಧಿಗಾಗಿ ಸಿದ್ಧಪಡಿಸಿಟ್ಟುಕೊಂಡಿರುವ ಅಭಿವೃದ್ಧಿ ಪ್ಯಾಕೇಜ್. ಇದರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಗಳ ಕುಡಿಯುವ ನೀರಿನ ಬವಣೆಯನ್ನು ಶಾಶ್ವತವಾಗಿ ತೀರಿಸಲು ವಿಶೇಷ ಒತ್ತು ಕೊಟ್ಟಿದ್ದಾರೆ. ಸದಾ ವಿವಾದದಿಂದಲೇ ಬಸಿರಾಗದೇ ಹೆರಿಗೆ ನೋವು ಅನುಭವಿಸುತ್ತಿರುವ ಕಳಸಾ-ಬಂಡೂರಿ ಯೋಜನೆಯನ್ನು ಅದರ ಪಾಡಿಗೆ ಕೈಬಿಟ್ಟು ದಾಂಡೇಲಿ ಸಮೀಪ ಹರಿಯುವ ಕಾಳಿ ನದಿಯ ನೀರು ಮುಂದೆ ಸಮುದ್ರಕ್ಕೆ ಪೋಲಾಗಿ ಹರಿಯದಂತೆ ತಡೆದು ಅದನ್ನು ಹುಬ್ಬಳ್ಳಿ-ಧಾರವಾಡ ಮಹಾನಗರಗಳಿಗೆ ಒದಗಿಸುವುದು ಇವರ ಮಹತ್ವಾಕಾಂಕ್ಷಿ ಯೋಜನೆ.

ಈ ಭಾಗದ ನೆರೆಹಾವಳಿಗೆ ಪ್ರಮುಖ ಕಾರಣವಾಗಿರುವ ಬೆಣ್ಣೆ ಹಳ್ಳದಲ್ಲಿನ ಹೂಳೆತ್ತಿ, ಅದಕ್ಕೊಂದು ಚೆಕ್ ಡ್ಯಾಂ ನಿರ್ಮಾಣ ಮಾಡಿ ಅಕ್ಕಪಕ್ಕದ ರೈತರ ಹೊಲಗದ್ದೆಗಳಿಗೆ ನೀರಾವರಿಗಾಗಿ ನೀರುಣಿಸುವುದು ಇವರ ಇನ್ನೊಂದು ಯೋಜನೆ. ಈ ಭಾಗದ ಪ್ರಮುಖ ಬೆಳೆಗಳಾಗಿರುವ ಮೆಕ್ಕೆಜೋಳ, ಮೆಣಸಿನಕಾಯಿ, ಬೇಳೆ ಮುಂತಾದ ಬೆಳೆಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು, ಕೃಷಿ ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಕಿಮ್ಸ್‌ಗಳನ್ನು ಅಭಿವೃದ್ಧಿಪಡಿಸುವುದು, ಸಂಚಾರ ನಿಯಂತ್ರಣಕ್ಕೆ ಚತುಷ್ಪಥ ರಸ್ತೆ ನಿರ್ಮಿಸುವುದು, ಧಾರವಾಡದಲ್ಲಿ ಐಐಟಿ ಸ್ಥಾಪನೆಗಾಗಿ ಶ್ರಮಿಸುವುದು, ಹುಬ್ಬಳ್ಳಿ-ಅಂಕೋಲ ರೈಲುಮಾರ್ಗಗಳನ್ನು ಪೂರ್ಣಗೊಳಿಸುವುದು, ಪ್ರತೀ ಹಳ್ಳಿಗೂ ಆರೋಗ್ಯ ಕೇಂದ್ರಗಳನ್ನು ನಿರ್ಮಿಸುವುದು - ಹೀಗೆ ಸಾಗುತ್ತದೆ ಕುನ್ನೂರ ಅವರ ಧಾರವಾಡ ಅಭಿವೃದ್ಧಿ ವಿಜನ್.

ಇಂತಹ ಯೋಜನೆಗಳಿರಲಿ, ಅವುಗಳ ಕಲ್ಪನೆಯಾದರೂ ಪ್ರಹ್ಲಾದ್ ಜೋಶಿಗೆ ಇದೆಯೇ?!

ಕಾಂಗ್ರೆಸ್‌ಗೊಬ್ಬ ಅತ್ಯುತ್ತಮ ವಕ್ತಾರ ರಾಜೀವ್ ಗೌಡ

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಟಿಕೆಟ್ ಬಯಸಿದ್ದವರಲ್ಲಿ ರಾಜೀವ್ ಗೌಡ [illegible] lime light ಗೆ [illegible]


ಇತ್ತೀಚೆಗೆ ಟಿವಿ 9 ನ ಇಂಗ್ಲಿಷ್ ಚಾನಲ್‌ನ [illegible] ಭಾಗವಹಿಸಿದ್ದ ರಾಜೀವ್ ಗೌಡ [illegible] ಕೋಮುವಾದ, ಭಾರತದ ಆರ್ಥಿಕತೆ, [illegible] ಕುರಿತಾದ ವಿಚಾರಗಳ ಬಗ್ಗೆ ನಿರರ್ಗಳವಾಗಿ [illegible] ಅನಿಸಿಕೊಂಡರು. ಬಿಜೆಪಿಯಿಂದ ಬಾಯಿಬಡುಕ ಧನಂಜಯ [illegible] ರಾಜೀವ್ ಗೌಡರೆದುರು ಆತನ ಆರಚಾಟಗಳೇನೂ ನಡೆಯಲಿಲ್ಲ.

ರಾಜೀವ್ ಗೌಡ ಮಾಜಿ ಸ್ಪೀಕರ್ ವೆಂಕಟಪ್ಪನವರ [illegible] ಸಂದರ್ಭದಲ್ಲಿ ಕಾಂಗ್ರೆಸ್‌ನಲ್ಲಿ ಬೇಕಾದಷ್ಟು ಲೀಡರ್‌ಗಳಿದ್ದಾರಾದರೂ [illegible] ಚಾತುರ್ಯ, ಬೌದ್ಧಿಕ ಸಾಮರ್ಥ್ಯ ಇರುವವರು ಬಹಳ [illegible] ಮೇಲಾಗಿ ಕನ್ನಡ ಇಂಗ್ಲಿಷ್ ಎರಡೂ ಭಾಷೆಗಳ ಮೇಲೆ ಉತ್ತಮ [illegible] ಹೊಂದಿರುವ ರಾಜೀವ್ ಗೌಡ ಮೀಡಿಯಾಗಳನ್ನು ಚೆನ್ನಾಗಿ ನಿಭಾಯಿಸುವ [illegible] ಹೊಂದಿದ್ದಾರೆ. ರಾಜೀವ್ ಗೌಡರನ್ನು ರಾಜ್ಯ ಕಾಂಗ್ರೆಸ್ ನಾಯಕರು ಚೆನ್ನಾಗಿ ಬಳಸಿಕೊಂಡಿದ್ದೇ ಆದಲ್ಲಿ ಬಹಳ ಕಾಲದಿಂದ ಇರುವ [illegible] ಒಂದು ತುಂಬಿದಂತಾಗುತ್ತದೆ.

ಅದೇ ರೀತಿ ರಾಜೀವ್ ಗೌಡ [illegible] ಚುನಾವಣೆಗಳು ಬಂದಾಗ [illegible] ಇದೇ ರೀತಿ [illegible] ಮುಂದಿನ ದಿನಗಳಲ್ಲಿ [illegible] ರಾಜಕೀಯ ಚಲನಗಳಿಗೆ [illegible] ■

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 16



ಅಕ್ಷರ ರೂಪ: ಅಕ್ಷತಾ ಕೆ.

ನಾಗಸಮುದ್ರದಲ್ಲಿ ರೈತರಿಗೆ...

ಗುಂಡೇಟು

ಗುಂಡೂರಾವ್ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಕಾಗೋಡು ಲೋಕಕ್ಕೆ ಉಪಯೋಗ ಆಗುವಂತಹ ನೂರು ಕೆಲಸ ಮಾಡಬಹುದಿತ್ತು. ಆದರೆ ಕರ್ನಾಟಕದ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ರೈತರು ಸಂಘಟಿತರಾಗಿ, ಒಂದು ಶಕ್ತಿಯಾಗಿ ಬೆಳೆಯುತ್ತಿದ್ದ ರೈತ ಸಂಘವನ್ನು ಒಡೆಯಲು ತಂತ್ರಗಾರಿಕೆ ರೂಪಿಸುವುದಕ್ಕೆ ತಮ್ಮ ಶಕ್ತಿಯನ್ನು ವ್ಯಯಿಸಿದರು. ರೈತ ಸಂಘ ರಾಜಕೀಯಕ್ಕೆ ಹೊರತಾದ ಸಂಘಟನೆಯಾಗಿತ್ತು. ಕಾಗೋಡು ಹೋರಾಟದ ಹಿನ್ನೆಲೆಯಿಂದ ಬಂದಿದ್ದ ತಿಮ್ಮಪ್ಪನವರಿಗೆ ರೈತ ಸಂಘವನ್ನು ಬೆಳೆಸಬೇಕು ಎಂಬ ವಿವೇಚನೆಯಿರಬೇಕಿತ್ತು. ಆದರೆ ಅವರು ತಮ್ಮ ರಾಜಕೀಯ ಅಧಿಕಾರವನ್ನು ಬಳಸಿಕೊಂಡು ರೈತ ಸಂಘಟನೆಯನ್ನು ಹತ್ತಿಕ್ಕಲು ಶತಾಯಗತಾಯ ಪ್ರಯತ್ನಿಸಿದರು. ಅದರ ಫಲಶ್ರುತಿಯೇ ನಾಗಸಮುದ್ರ ಗೋಲಿಬಾರ್ ಮತ್ತು ಮೂವರು ಮುಗ್ಧರ ಬಲಿ.


ಆ ಹುಡುಗನನ್ನು ಉಳಿಸಬಹುದಿತ್ತು. ನೆಲ ಕಚ್ಚು ನೆಲ ಕಚ್ಚು ನೆಲದ ಮೇಲೆ ಮಲಗಿ ಬಿಡು. ಗುಂಡು ಹೊಡೀತಿದಾರೆ' ಅಂತ ನಾನು ಮತ್ತು ನನ್ನ ಗೆಳೆಯ ಕೂಗಿಕೊಳ್ಳುತ್ತಲೇ ಇದ್ದೆವು. ಆದರೆ ಆ ಹುಡುಗ ನಟರಾಜ ನೆಲಕಚ್ಚಲೇ ಇಲ್ಲ, ಪೊಲೀಸರ ಗುಂಡು ಅವನನ್ನು ನೆಲಕ್ಕುರಳಿಸಿತು...

ಎಲ್ಲ ಆಗಿದ್ದು ಕಾಗೋಡು ತಿಮ್ಮಪ್ಪರಿಂದ. ರೈತ ಸಂಘವನ್ನು ದಮನ ಮಾಡಲಿಕ್ಕೆ ಅವರು ಅಧಿಕಾರಿಗಳಿಗೆ ಕೊಟ್ಟ ಸಲಿಗೆ ಇಂಥ ದುರ್ಘಟನೆಗೆ ಕಾರಣವಾಯಿತು. ನೆನೆಸಿಕೊಂಡರೆ ಮೈ ಉರಿಯತ್ತೆ. ನನ್ನನ್ನು ಸಮಾಧಾನಿ, ಸಿಟ್ಟೇ ಬರಲ್ಲ ಅಂತೆಲ್ಲ ಎಲ್ಲ ಹೇಳ್ತಿರಲ್ಲ ಆದರೆ ನಾಗಸಮುದ್ರದ ಆ ಘಟನೆ ನೆನೆಸಿಕೊಂಡರೆ ಇವತ್ತಿಗೂ ಮೈ ಕುದಿಯತ್ತೆ. 'ಸುಖಾಸುಮ್ಮನೆ ಮೂವರು ರೈತರನ್ನ ಕೊಲ್ಲಿಸಿದಿರಿ, ನೂರಾರು ರೈತರನ್ನ ಜೈಲಿಗೆ ಹಾಕಿ ಪ್ರಾಣಹಿಂಸೆ ನೀಡಿದಿರಿ ಇದರಿಂದ ಸಿಕ್ಕಿದ್ದೇನು?' ಎಂದು ಕಾಗೋಡು ತಿಮ್ಮಪ್ಪರನ್ನು ಕೇಳಬೇಕು ಅನ್ನಿಸುತ್ತದೆ. ಗುಂಡೂರಾವ್ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಕಾಗೋಡು ಲೋಕಕ್ಕೆ ಉಪಯೋಗ ಆಗುವಂತಹ ನೂರು ಕೆಲಸ ಮಾಡಬಹುದಿತ್ತು. ಆದರೆ ಕರ್ನಾಟಕದ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ರೈತರು ಸಂಘಟಿತರಾಗಿ, ಒಂದು ಶಕ್ತಿಯಾಗಿ ಬೆಳೆಯುತ್ತಿದ್ದ ರೈತ ಸಂಘವನ್ನು ಒಡೆಯಲು ತಂತ್ರಗಾರಿಕೆ ರೂಪಿಸುವುದಕ್ಕೆ ತಮ್ಮ ಶಕ್ತಿಯನ್ನು ವ್ಯಯಿಸಿದರು. ರೈತ ಸಂಘ ರಾಜಕೀಯಕ್ಕೆ ಹೊರತಾದ ಸಂಘಟನೆಯಾಗಿತ್ತು, ಕಾಗೋಡು ಹೋರಾಟದ ಹಿನ್ನೆಲೆಯಿಂದ ಬಂದಿದ್ದ ತಿಮ್ಮಪ್ಪನವರಿಗೆ ರೈತ ಸಂಘವನ್ನು ಬೆಳೆಸಬೇಕು ಎಂಬ ವಿವೇಚನೆಯಿರಬೇಕಿತ್ತು ಆದರೆ ಅವರು ತಮ್ಮ ರಾಜಕೀಯ ಅಧಿಕಾರವನ್ನು ಬಳಸಿಕೊಂಡು ರೈತ ಸಂಘಟನೆಯನ್ನು ಹತ್ತಿಕ್ಕಲು ಶತಾಯಗತಾಯ ಪ್ರಯತ್ನಿಸಿದರು. ಅದರ ಫಲಶ್ರುತಿಯೇ ನಾಗಸಮುದ್ರ ಗೋಲಿಬಾರ್ ಮತ್ತು ಮೂವರು ಮುಗ್ಧರ ಬಲಿ.

ಅದು 1982ನೇ ಇಸವಿ ಹರಸಾಹಸ ಮಾಡಿದರೂ ಕಾಗೋಡು ತಿಮ್ಮಪ್ಪನವರು ರೈತ ಸಂಘವನ್ನು ಏನು ಮಾಡಲಿಕ್ಕೆ ಆಗಿರಲಿಲ್ಲ. ಸಂಘ ದಿನದಿನಕ್ಕೂ ಬೆಳೀತಲೇ ಇತ್ತು. ತಮ್ಮ ಮೇಲಿನ ದೌರ್ಜನ್ಯ ಹೆಚ್ಚಾದಷ್ಟು ರೈತರು ಹೆಚ್ಚು ಹೆಚ್ಚು ಸಂಘಟಿತರಾಗಲು ತೊಡಗಿದರು. ಹೇಗಾದರೂ ಮಾಡಿ ರೈತ ಸಂಘವನ್ನು ದುರ್ಬಲಗೊಳಿಸಲೇಬೇಕೆಂದು ಹೊರಟ ಕಾಗೋಡು ಮತ್ತೊಂದು ರೈತ ಸಂಘ ಕಟ್ಟಿ, ನಮ್ಮದೇ ನಿಜವಾದ ರೈತಸಂಘ ಎಂದು ಬಿಂಬಿಸಿಕೊಳ್ಳೊ ಮೂಲಕ ಇರೋ ರೈತ ಸಂಘವನ್ನು ದುರ್ಬಲ ಮಾಡಲಿಕ್ಕೆ ಸಂಚು ರೂಪಿಸಿದರು. ಭದ್ರಾವತಿಯ ಕಾಗೋಡು ಆಪ್ತರೊಬ್ಬರ ಮನೆ ಮಹಡಿ ಮೇಲೆ ಈ ಬಗ್ಗೆ ಗುಪ್ತ ಸಭೆ ನಡೆದು ಮಂಗೋಟೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ರೈತರ ಮತ್ತು ರೈತ ಕಾರ್ಮಿಕರ ಸಮ್ಮೇಳನ ನಡೆಸುವ ಬಗ್ಗೆ ನಿರ್ಧಾರವಾಯಿತು. ಈ ಬಗ್ಗೆ ಅದೇ ಸಭೆಯಲ್ಲಿದ್ದ ನಮ್ಮ ಗೆಳೆಯರು ನಮಗೆ ಮಾಹಿತಿ ನೀಡಿದರು. ಮೇ 25ರಂದು ಸಭೆ ಇರುವ ಬಗ್ಗೆ ಕಾಂಗ್ರೆಸ್ ಐ ಪಕ್ಷದವರು ಹೊರಡಿಸಿದ್ದ ಕರಪತ್ರ ಭದ್ರಾವತಿ ತಾಲ್ಲೂಕಿನಾದ್ಯಂತ ಓಡಾಡತೊಡಗಿತ್ತು. ಸಭೆಯಲ್ಲಿ ಕಾಗೋಡು ಜೊತೆ ಸ್ಥಳೀಯ ಶಾಸಕರು ಮತ್ತಿತರರು ಭಾಗವಹಿಸುತ್ತಾರೆಂದು ಕರಪತ್ರದಲ್ಲಿ ತಿಳಿಸಲಾಗಿತ್ತು, ಆದರೆ ಮಂಗೋಟೆಯಲ್ಲಿ ವಿಚಾರಿಸಿದರೆ ಈ ಬಗ್ಗೆ ಅಲ್ಲಿನ ಜನಗಳಿಗೆ ಮಾಹಿತಿ ಇರಲಿಲ್ಲ.

ಹೊಳೆಹೊನ್ನೂರಿನ ಭಾಗದ ಪ್ರತಿ ಊರಿನಲ್ಲೂ ರೈತ ಸಂಘ ಶಕ್ತಿಯುತವಾಗಿತ್ತು, ಶಿವಮೊಗ್ಗ ಜಿಲ್ಲೆಯಾದ್ಯಂತ ರೈತರ ಮನೆ ಜಪ್ತಿ, ಹರಾಜು, ರೈತರ ಮೇಲೆ ದರೋಡೆ ಕೇಸು ಹಾಕಿಸುವುದು, ಜಪ್ತಿ ಹೆಸರಿನಲ್ಲಿ ರೈತ ಮಹಿಳೆಯರ ಮಾಂಗಲ್ಯಕ್ಕೆ ನೌಕರರಿಂದ ಕೈ ಹಾಕಿ ಕೀಳಿಸುವಂತ ದಾರ್ಷ್ಟ್ಯಕ್ಕೂ ಕಾರಣರಾಗಿ ರೈತರ ಪ್ರಾಣ ಹಿಂಡಿದ್ದ ಕಾಗೋಡು ತಿಮ್ಮಪ್ಪ ಸಭೆ ಮಾಡೋದಿರಲಿ ಅವರಿಗೆ ಇಲ್ಲಿನ ಯಾವುದೇ ಒಂದು ಊರೊಳಗೆ ಸೇರಿಸುವುದೇ ಕಷ್ಟವಿತ್ತು. ಹಾಗಿರುವಾಗ ಅವರು ಮಂಗೋಟೆಯನ್ನೆ ಆರಿಸಿಕೊಂಡಿದ್ದೇಕೆ ಎಂದರೆ ಆ ಊರಿನಲ್ಲಿ ದಲಿತರ ಭೂಮಿ ಹಕ್ಕಿನ ಬಗ್ಗೆ ವಿವಾದವಿದ್ದು ಅಲ್ಲಿ ರೈತಸಂಘ ಅಷ್ಟಾಗಿ ಬೆಳೆದಿರಲಿಲ್ಲ, ಇದನ್ನೆ ಬಳಸಿಕೊಂಡು ಕಾಗೋಡು ಅಲ್ಲಿ ಸಭೆ ನಡೆಸಿ ರೈತಸಂಘ ಮುಗಿಸಲು ಸಂಚು ರೂಪಿಸಿದರು. ಇದು ನಮ್ಮ ಸಂಘಟನೆಯವರನ್ನು ಕೆರಳಿಸಿತು. ಸಭೆಗಿರಲಿ ಕಾಗೋಡು ತಿಮ್ಮಪ್ಪನವರಿಗೆ ಊರು ಪ್ರವೇಶಿಸಲೂ ಅವಕಾಶ ಕೊಡಬಾರದು ಅನ್ನೋದು ರೈತರ ಒಕ್ಕೊರಲ ಧ್ವನಿಯಾಗಿತ್ತು, ಸಭೆಗೆ ಒಂದೆರಡು ದಿನ ಇರುವಾಗ ನಮ್ಮ ಮನೆಗೆ ನಾಗಸಮುದ್ರದ ಪರಮೇಶ್ವರ್, ದೇವಾನಂದ್ ಮತ್ತಿತರ ರೈತ ಸಂಘದ ಯುವಕರು ಬಂದು "ಸರ್ಕಾರದೊಂದಿಗೆ ಮಾತುಕತೆಗೆ ನಮ್ಮ ಮುಖಂಡರೆಲ್ಲ ಬೆಂಗಳೂರಿಗೆ ಹೋದ ಸಂದರ್ಭದಲ್ಲಿ ಕಾಗೋಡು ತಿಮ್ಮಪ್ಪ ಮಂಗೋಟೆಯಲ್ಲಿ ರೈತ ಮತ್ತು ರೈತ ಕಾರ್ಮಿಕರ ಸಭೆ ಕರೆದು ರೈತಸಂಘವನ್ನು ಒಡೆಯಲು ಹೊರಟಿದ್ದಾರೆ. ಇದನ್ನು ನಾವು ತಡೆಯಬೇಕು" ಎಂದಾಗ ಕರಪತ್ರ ಹಾಕಿಸಿ ಟ್ರ್ಯಾಕ್ಟರ್‌ನಲ್ಲಿ ಹಳ್ಳಿಗಳಿಗೆ ಹೋಗಿ ರೈತರನ್ನು ಸಂಘಟಿಸಿ ಕಾಗೋಡು ತಿಮ್ಮಪ್ಪ ಸಭೆ ನಡೆಸಬಾರದೆಂದು ಶಾಂತರೀತಿಯಿಂದ ಪ್ರತಿಭಟಿಸೋಣ ಎಂದು ನಾನು ಅವರಿಗೆ ತಿಳಿಸಿದೆ. ಮಂಗೋಟೆ ಆನವೇರಿ ನಡುವೆ ಇರುವ ನದಿ ದಂಡೆಯ ವ್ಯವಸಾಯ ಮಾಡದ ಖಾಲಿ ಜಾಗದಲ್ಲಿ ರೈತರ ಪಾಲುದಾರಿಕೆಯಿಂದ ಸಕ್ಕರೆ ಕಾರ್ಖಾನೆ ಏಕೆ ಮಾಡಬಾರದೆಂದು ರೈತ ಸಂಘ ಈ ಸಂದರ್ಭದಲ್ಲಿ ಆಲೋಚನೆ ನಡೆಸುತ್ತಿದ್ದು ಇದನ್ನು ತಪ್ಪಿಸುವ ಹುನ್ನಾರವೂ ಕಾಗೋಡು ಅವರು ನಡೆಸಲು ಆಲೋಚಿಸಿದ್ದ ಸಭೆಯ ಹಿನ್ನಲೆಯಲ್ಲಿತ್ತು, ನಮಗೆ ನಂಜುಂಡಸ್ವಾಮಿ, ಸುಂದ್ರೇಶ್, ರುದ್ರಪ್ಪರನ್ನು ಕರೆಸಿ ತಿಮ್ಮಪ್ಪನವರ ಸಭೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವಷ್ಟು ಪುರಸೊತ್ತು ಇರಲಿಲ್ಲ.

ನಾಗಸಮುದ್ರ ಗ್ರಾಮದ ಮೂಲಕವೇ ಮಂಗೋಟೆಯನ್ನು ಪ್ರವೇಶಿಸಬೇಕು. ಆದ್ದರಿಂದ ನಾಗಸಮುದ್ರದಲ್ಲೆ ಎಲ್ಲ ರೈತರು ಸೇರಿ ಕಾಗೋಡು ತಿಮ್ಮಪ್ಪರನ್ನು ಮಂಗೋಟೆಯಲ್ಲಿ ಸಭೆ ನಡೆಸದಂತೆ ತಡೆಯುವುದು ಎಂದು ಸ್ಥಳೀಯ ರೈತ ಸಂಘದವರೇ ನಿರ್ಧಾರ ತೆಗೆದುಕೊಂಡೆವು. ಈ ಬಗ್ಗೆ ಭದ್ರಾವತಿ ರೈತ ಸಂಘದ ಅಧ್ಯಕ್ಷರಾದ ಹ.ಬ.ವೀರಬಸಪ್ಪ ಮತ್ತಿತರರನ್ನು ಕೇಳಿದಾಗ ಅವರು ಪ್ರತಿಭಟನೆಗೆ ಒಪ್ಪಿದರು. ಕೂಡಲೇ ಕರಪತ್ರ ಮಾಡಿಸಿ ಹಂಚಿದೆವು. ಪ್ರತಿಭಟನೆಗೆ ಐನೂರು ಜನ ಸೇರುತ್ತಾರೆಂದು ನಿರೀಕ್ಷಿಸಿದ್ದರೆ ಸೇರಿದ್ದು ಐದು ಸಾವಿರ ಜನ. ನಾಗಸಮುದ್ರದಲ್ಲಿ ಸಿದ್ದೀಪುರ, ಸನ್ಯಾಸಿಕೋಡುಮಗ್ಗೆ, ಹೊಳೆಯಾಚೆ ಇರುವ ಹರಮಘಟ್ಟ, ಸೂಗೂರು, ಹೊಳಲೂರು ಭಾಗದ ರೈತರು ಮತ್ತು ಮಂಗೋಟೆಯ ಇನ್ನೊಂದು ಗಡಿ ಮಂಗೋಟೆ ಓಣಿ ಅನ್ನುವಲ್ಲಿ ಅರೆಬಿಳಚಿ, ಆನವೇರಿ, ಮೈದೊಳಲು, ಹನುಮಂತಾಪುರ ಮತ್ತಿತರ ಊರುಗಳ ರೈತರು ಸೇರಿದ್ದರು. ವೃದ್ಧರು, ಮಹಿಳೆಯರು ಎಲ್ಲರೂ ಇದ್ದರು. ನಾಗಸಮುದ್ರ ಮತ್ತು ಮಂಗೋಟೆ ಓಣಿ ಎರಡೂ ಆಯಕಟ್ಟಿನ ಪ್ರದೇಶದಲ್ಲಿ ಮಾರುದೂರದುದ್ದಕ್ಕೂ ಯಾರೂ ಪ್ರವೇಶಿಸದಂತೆ ರೈತರು ನೂರಾರು ಎತ್ತಿನಗಾಡಿಗಳ ಚಕ್ರ ಕಳಚಿ ರಸ್ತೆಗೆ ಅಡ್ಡಲಾಗಿ ಇಟ್ಟಿದ್ದರು. ಬಟ್ಟೆಯ ಮೇಲೆ ಕಾಗೋಡು ತಿಮ್ಮಪ್ಪರ ವಿರುದ್ಧ ಅವಿಶ್ವಾಸ ಸೂಚಿಸಿ ಬ್ಯಾನರ್ ಬರೆದು ಕಟ್ಟಲಾಗಿತ್ತು.



ನಾನು ನಾಗಸಮುದ್ರದ ಪ್ರತಿಭಟನಾ ಸ್ಥಳಕ್ಕೆ ಹೋದ ಕೂಡಲೇ "ಶಾಮಣ್ಣೋರೆ, ನೀವು ಮಂಗೋಟೆ ಓಣಿಗೆ ಹೋಗಿ ಅಲ್ಲಿ ಕಂಟ್ರೋಲ್ ಮಾಡಿ. ಅಲ್ಲೂ ಬಹಳಷ್ಟು ಜನ ಸೇರಿದ್ದಾರೆ" ಎಂದು ಇಲ್ಲಿದ್ದ ಕೆಲವು ನಾಯಕರು ಹೇಳಿದರು. ಹುಗ್ಗಿ ಮಲ್ಲೇಶನಿಗೆ "ನಂಗೊಂಚೂರು ಅಲ್ಲಿಗೆ ಬಿಟ್ಟು ಬಾ" ಎಂದೆ. ಅವನು ಸೈಕಲ್ ಮೇಲೆ ನನ್ನನ್ನು ಕೂರಿಸ್ಕಂಡು ಮಂಗೋಟೆ ಓಣಿಯಲ್ಲಿ ಬಿಟ್ಟು ಹೋದ. ನಾನು "ಏಯ್ ಮಲ್ಲೇಶ, ನಿಂಗೆ ಏನೋ ಹೇಳೋದಿದೆ, ಕೇಳಿಸ್ಕಂಡು ಹೋಗೋ" ಅಂತ ಕೂಗೋದರೊಳಗೆ "ಆಮೇಲೆ ಬರ್ತೀನಿ" ಅಂತ ಹೇಳಿ ಸರಕ್ಕನೆ ಸೈಕಲ್ ತಿರಿಗಿಸ್ಕಂಡು ನಾಗಸಮುದ್ರದ ಕಡೆ ನಡೆದೇಬಿಟ್ಟ. ನನಗೆ ಆದಾಗಲೇ ಆತಂಕ ಶುರುವಾಗಿತ್ತು. ರೈತರು ಕಾಗೋಡು ತಿಮ್ಮಪ್ಪರಿಂದ ನೇರವಾಗಿ ಹಿಂಸೆಗೊಳಗಾಗಿರಲಿಲ್ಲ, ಆದರೆ ಪೊಲೀಸರಿಂದ ನೇರವಾಗಿ ಹಿಂಸೆಗೊಳಗಾಗಿದ್ದರು. ತಿಮ್ಮಪ್ಪರ ಕುಮ್ಮಕ್ಕಿನಿಂದ ದಿನಬೆಳಗಾದರೆ ಕಾರಣವೇ ಇಲ್ಲದ ಕಾರಣ ಮಾಡಿ ಪೊಲೀಸರು ರೈತರನ್ನು ಪೊಲೀಸ್ ಸ್ಟೇಷನ್‌ಗ್ಕೊಯ್ದು ಹೊಡೆಯೋದು, ಕೆಟ್ಟ ಶಬ್ದಗಳಿಂದ ನಿಂದಿಸೋದು, ಕೇಸ್ ಹಾಕಿ ನ್ಯಾಯಾಲಯಕ್ಕೆ ಅಲೆಸೋದು ಮಾಡಿದ್ದರು. ಪೊಲೀಸರ ಕೈಲಿ ಹೊಡ್ತಾ ಬಡ್ತಾ ತಿಂದು ಏನು ಮಾಡಲಿಕ್ಕಾಗದೆ ರೈತರು ಒಳಗೊಳಗೆ ಕುದಿತಿದ್ದರು. ಈಗ ಸಚಿವರ ವಿರುದ್ಧ ಪ್ರತಿಭಟನೆಗೆ ಅಂತ ಇಷ್ಟು ರೈತರು ಸೇರಿದ್ದಾರೆ ಅಂದ್ರೆ ಅಲ್ಲಿಗೆ ಪೊಲೀಸರು ಬರುವುದು ಖಾತ್ರಿ. ಮೊದಲೇ ಕೆರಳಿದ್ದ ರೈತರನ್ನ ಇನ್ನಷ್ಟು ಕೆರಳಿಸಿ ಏನಾದರೂ ಅವಘಡ ಆದರೆ ಗತಿ ಏನು ಅನ್ನೋ ಅನುಮಾನ ನನ್ನ ಮನಸಿನಲ್ಲಿ ಆಗಲೇ ಬಂದಿತ್ತು. ಮುಂಚೂಣಿಯ ನಾಯಕರು ಬೇರೆ ಯಾರು ಇರಲಿಲ್ಲ ಈ ಸಂದರ್ಭದಲ್ಲಿ, ಅದಕ್ಕೆ ನಾನು ಈ ಬಗ್ಗೆ ಸೂಚನೆ ಕೊಟ್ಟು ಚಂದ್ರಶೇಖರ್ ಅಲ್ಲಿಗೆ ಬಂದ್ರೆ ನನಗೆ ಕೂಡಲೇ ಹೇಳಿ ಕಳಿಸು ಎಂದು ಹೇಳೋಣ ಅಂದ್ಕೊಂಡು ಮಲ್ಲೇಶನನ್ನು ಕರೆದಿದ್ದೆ. ಆದರೆ ಅವನು ನನ್ನ ಮಾತನ್ನ ಕೇಳಿಸಿಕೊಳ್ಳದೆ ಹೊರಟೇಹೋದ. ಎಷ್ಟೋ ಸರ್ತಿ ಅನ್ನಿಸಿದ್ದಿದೆ, ಅವತ್ತು ಮಲ್ಲೇಶ ನನ್ನ ಮಾತನ್ನ ಕೇಳಿಸ್ಕೊಳ್ಳೊ ಅಷ್ಟು ಸಮಾಧಾನ ತೋರಿಸಿದ್ರೆ ಆಗಬಹುದಾಗಿದ್ದ ಅವಘಡವನ್ನು ತಡೆಯಬಹುದಾಗಿತ್ತೇನೋ ಎಂದು.

ಬೆಳಿಗ್ಗೆ 10 ಗಂಟೆ ಸುಮಾರಿಗೆ ಪೊಲೀಸ್ ವಾಹನ ಪ್ರತಿಭಟನಾ ಸ್ಥಳದಲ್ಲಿ ಕಾಣಿಸಿಕೊಂಡಿದೆ. ಭದ್ರಾವತಿ ಠಾಣೆಯ ಟ್ರಾಫಿಕ್ ಕಂಟ್ರೋಲ್ ಆಫೀಸರ್ ಯೋಗಪ್ಪ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಭಟ್ ಆ ವಾಹನದಲ್ಲಿದ್ದರು. ಮತ್ತೆ ಸ್ವಲ್ಪ ಹೊತ್ತಿಗೆ ಇನ್ನೊಂದು ಪೊಲೀಸ್ ವ್ಯಾನು, ಒಂದು ಜೀಪು ಬಂದು ನಿಂತಿವೆ. ಆದರೆ ಪ್ರತಿಭಟನಾಕಾರರ ಬಳಿ ತಲುಪಲು ಸಾಧ್ಯವೇ ಆಗದಂತೆ ಮಾರುದೂರದುದ್ದಕ್ಕೂ ಗಾಡಿ ಚಕ್ರಗಳನ್ನಿಟ್ಟು ತಡೆ ಹಾಕಿದ್ದರಿಂದ ಏನು ಮಾಡಲಾಗದೆ ಪೊಲೀಸರು ಕೈಕೈ ಹಿಸುಕಿಕೊಂಡಿದ್ದಾರೆ. ಮಧ್ಯಾಹ್ನ ಆಗುತ್ತಾ ಬಂದರೂ ಕಾಗೋಡು ತಿಮ್ಮಪ್ಪನವರೇ ಆಗಲೀ, ಶಾಸಕರೇ ಆಗಲೀ ಕಾರ್ಯಕ್ರಮಕ್ಕೆ ಬಂದಿಲ್ಲ. ಕಾರ್ಯಕ್ರಮ ನಡಿತದೆಯೋ ಇಲ್ಲವೋ ಎಂಬ ಗೊಂ[illegible] ಮುಂದುವರೆದಿತ್ತು. ಈ ಬಗ್ಗೆ ಯಾವುದೇ ಗುಟ್ಟು [illegible]ಕೊಡದ ಪೊಲೀಸರು ಗಾಡಿಚಕ್ರಗಳ ಮೇಲೆ ತಮ್ಮ ಜೀಪನ್ನು ಓಡಿಸಿ ಪ್ರತಿಭಟನಾನಿರತ ರೈತರನ್ನು ತಲುಪಲು ಪ್ರಯತ್ನ ಪಟ್ಟಾಗ ರೈತರು ಅದಕ್ಕೆ ತಡೆ ಒಡ್ಡಿದ್ದಾರೆ. ಜೀಪು ಓಡಿಸಿ ಗಾಡಿ ಚಕ್ರ ಪುಡಿ ಮಾಡಿದ್ದೀರಿ ಎಂದು ರೈತರಿಗೂ ಪೊಲೀಸರಿಗೂ ಮಾತಿನ ಚಕಮಕಿ ನಡೆದಿದೆ. ರೈತರು ಬಹುಸಂಖ್ಯೆಯಲ್ಲಿರುವುದನ್ನು ಕಂಡು ಹೆದರಿದ ಪೊಲೀಸರು ತೆಪ್ಪಗಾಗಿದ್ದಾರೆ. ಆದರೆ ಒಳಗೊಳಗೆ ಪ್ಲಾನ್ ಹಾಕ್ತಾನೆ ಇದಾರೆ.

ಅದರಲ್ಲೂ ಆ ಯೋಗಪ್ಪ ಅಲ್ಲಿ ಸೇರಿದ್ದ ಬಹಳಷ್ಟು ರೈತರನ್ನ ಅವಮಾನ ಮಾಡಿದ್ದ. ಅವನಿಗೆ ಹೇಗಾದರೂ

...ಬುದ್ಧಿ ಕಲಿಸಲೇಬೇಕು ಎಂದು ರೈತರು ಕಾಯ್ತಾ ಇದ್ದರು. ಅದು ...ಗೋ ಏನೋ ಯೋಗಪ್ಪ ಜೀಪಿಂದ ಕೆಳಗೆ ಇಳಿಲಿಲ್ಲ. ಮಧ್ಯಾಹ್ನದ ...ಏರುತ್ತಾ ಬಂದ ಹಾಗೆ ಪ್ರತಿಭಟನೆಯ ಕಾವು ಏರಿದೆ. ಪ್ರತಿಭಟನಾ ಮನವೊಲಿಸುವ ಪ್ರಯತ್ನವಾಗೋ ಏನೋ ಭದ್ರಾವತಿ ಗ್ರಾಮಾಂತರ ...ಲೀಸ್ ಠಾಣೆಯ ಸಬ್ ಇನ್ಸಪೆಕ್ಟರ್ ಚಂದ್ರಶೇಖರ್ (ಇವರು ನಮ್ಮ ... ಮತ್ತು ನನಗೆ ಬಹಳ ನಿಕಟವರ್ತಿಗಳು) ಮತ್ತು ಒಂದಿಬ್ಬರು ...ಲೀಸರು ನೀರು ಕೇಳುವ ನೆಪದಲ್ಲಿ ರೈತರ ಬಳಿ ನಡೆದುಕೊಂಡೆ ಬಂದಿ... ರೈತರು ನೀರು ಕೊಡ್ತೀವಿ ಎಂದು ಅಲ್ಲೆ ಇದ್ದ ಶಾಲೆಯ ಹತ್ತಿರ ...ಕೊಂಡು ಹೋಗಿ ರೂಮಿನೊಳಗೆ ಪೊಲೀಸರನ್ನು ತಳ್ಳಿ ಹೊರಗಿನಿಂದ ...ಜಡಿದಿದ್ದಾರೆ. ನಮ್ಮನ್ನು ಹೊರಗೆ ಬಿಡಿ ಎಂದು ಎಷ್ಟೆ ಹೇಳಿದರೂ ...ರು.

...ಅಲ್ಲೆ ಇದ್ದ ಒಬ್ಬ ಹುಡುಗನನ್ನು ಕರೆದು ಚಂದ್ರಶೇಖರ್ ಇದ್ದವರು "...ಣ್ಣ ಎಲ್ಲಿದ್ದಾರೆ?" ಎಂದು ಕೇಳಿದ್ದಾರೆ. ಇಂಥಲ್ಲಿದ್ದಾರೆ ಎಂದಾಗ ...ಗಿ ಕರೆದುಕೊಂಡು ಬಾ ಎಂದು ಅವನನ್ನು ಕಳಿಸಿದ್ದಾರೆ. ಆ ಹುಡುಗ ... ನಂಗೆ ವಿಷಯ ಹೇಳಿದಾಗ ಏನೋ ಅವಘಡ ಆಗಿದೆ ಅಂತ ನನಗೆ ...ಭಾಜಾಯಿತು. ನಾನು ಕೂಡಲೆ ನಾಗಸಮುದ್ರಕ್ಕೆ ಹೊರಟೆ. ಆದರೆ ನನ್ನ ಮಂಗೋಟೆ ಓಣಿಯಲ್ಲಿ ಸೇರಿದವರು "ನೀವ್ಯಾಕೆ ಅಲ್ಲಿಗೆ ಹೋಗಬೇಕು? ...ಲ್ಲೂಕು ರೈತ ಸಂಘದ ಅಧ್ಯಕ್ಷರೇ ಅಲ್ಲಿದ್ದಾರೆ. ನೀವು ಅಲ್ಲಿ ಹೋಗಿ ...ಡೋದೇನಿದೆ?" ಅಂತೆಲ್ಲ ಅಪಸ್ವರ ಎತ್ತಿದರು. "ಚಂದ್ರಶೇಖರ್ ಬರಕ್ಕೇಳಿ..." ಎಂದರೆ "ನೀವೂ ಪೊಲೀಸರ ಪರಾನೇ. ಎಲ್ಲಿ ಬಿಟ್ಕೊಡ್ತೀರಿ ...ವನ್ನ" ಅನ್ನೋ ತನಕವೂ ಮಾತು ಹೋಯಿತು. ನಾನು ಅಸಹಾಯಕನಾಗಿ ...ನುಳಿದೆ. ಇವರ ಮಾತನ್ನ ಕೇಳದೆ ನಾಗಸಮುದ್ರಕ್ಕೆ ಹೋಗಿದ್ದರೆ ...ಹುದಾಗಿದ್ದ ಅವಘಡವನ್ನು ತಡೆಯಬಹುದಿತ್ತಾ? ಗೊತ್ತಿಲ್ಲ. ಆದರೆ ...ತ ತುಂಬಾ ಸರ್ತಿ ಅನ್ನಿಸಿದೆ. ಆಗೆಲ್ಲ ಯಾಕೆ ನಾನು ಹೋಗದೆ ಉಳಿದೆ ಹಳಹಳಿಸಿದ್ದೇನೆ.

...ಸಂಜೆಯಾದರೂ ತಿಮ್ಮಪ್ಪನವರ ಆಗಮನವಾಗಿಲ್ಲ, ಇನ್ನೇನು ಬರೋ... ಇಲ್ಲ ಎಂದು ತಿಳಿದ ರೈತ ಮುಖಂಡರು ರೈತರಿಗೆ ಸಮಾಧಾನ ... ಪೊಲೀಸ್ ವಾಹನ ಹೋಗಲು ದಾರಿ ಮಧ್ಯೆ ಇದ್ದ ಗಾಡಿಗಳನ್ನು ದಾರಿ ಮಾಡಿ ಕೊಟ್ಟಿದ್ದಾರೆ. ಮಳೆ ಮೋಡವಾದ್ದರಿಂದ ಬೇಗನೆ ... ಸಭೆ ನಡೆಸಿ ಜನರನ್ನು ವಾಪಾಸ್ ಕಳಿಸಬೇಕು ಎಂದು ನಿರ್ಧರಿಸಿದ ...ಖಂಡರು ಮಂಗೋಟೆ ಓಣಿಯಲ್ಲಿದ್ದ ನಮ್ಮನ್ನು ನಾಗಸಮುದ್ರಕ್ಕೆ ಬರಲು ...ಸಿದರು. ಸನ್ಯಾಸಿಕೋಡುಮಗ್ಗೆಯ ಬಸವನಗೌಡ ಎಂಬ ಯುವಕನನ್ನು ...ಸಂಘದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಜೈಲಿಗೆ ಹಾಕಿದ್ದಾಗ ಅಲ್ಲಿನ ...ಕಾರಿ ಯೋಗಪ್ಪ "ನಿನ್ನ ಹೆಂಡ್ತಿಯನ್ನು ಯಾರಿಗೆ ಅಡ ಇಟ್ಟು ಬಂದಿ...ಲೋ" ಎಂದು ಹಂಗಿಸಿ ಅವಮಾನ ಮಾಡಿದ್ದನಂತೆ. ಆಗ ಅಸಹಾಯಕ...ನ್ನ ಯುವಕನ ಸಿಟ್ಟು ಈಗ ಕೆರಳಿದೆ. ಇವತ್ತು ಯೋಗಪ್ಪನನ್ನು ನೋಡಿ ...ವನಗೌಡ "ಆವತ್ತು ನನ್ನ ಹೆಂಡ್ತಿನ ಯಾರಿಗೆ ಅಡ ಇಟ್ಟು ಬಂದಿದೀಯಾ ... ಕೇಳ್ತಾ ಇದ್ಯಲ್ಲೋ ಯೋಗಪ್ಪ? ಈಗ ನೀನು ಹೇಳೊ ನಿನ್ನ ಹೆಂಡ್ತಿನ ...ಗೆ ಅಡ ಇಟ್ಟು ಇಲ್ಲಿಗೆ ಬಂದಿದಿಯೋ" ಎಂದು ಮೂರ್ನಾಲ್ಕು ಸರ್ತಿ ...ಕೊಂಡಿದ್ದಾನೆ. ಜೊತೆಗೆ ಇಂದಿನ ಪ್ರತಿಭಟನೆಯಲ್ಲಿ ಅವನ ಗಾಡಿ ...ಲೆ ಪೊಲೀಸರ ವಾಹನ ಹೋಗಿದ್ದರಿಂದ ಅದು ಮುರಿದು ಹಾಳಾಗಿದೆ, ...ದಂಡ ಕೊಡಿ ಎಂದು ಪ್ರತಿಭಟಿಸಿದ್ದಾನೆ. ನಾಗಸಮುದ್ರ ದೇವಸ್ಥಾನದೆದುರು ...ಸೇರಿದ್ದ ಸಂದರ್ಭದಲ್ಲಿ ಸಭೆ ಶುರುವಾಗಿ ಒಂದ್ಹತ್ತು ನಿಮಿಷವಾಗಿರಬಹುದು, ...ಲ್ಲಿ ನೇರವಾಗಿ ಬಸವನಗೌಡನನ್ನು ಗುರಿಯಾಗಿಟ್ಟುಕೊಂಡು ಪೊಲೀಸರು ...ಡು ಹೊಡೆದರು. ಯಾವ ಮುನ್ಸೂಚನೆ ಇಲ್ಲದೆ ಇದು ನಡೆದಿದ್ದರಿಂದ ... ದಿಕ್ಕು ತೋಚದಾದರು. ಸಾಯಿಸ್ತಾರೆ ಓಡ್ರೋ ಎಂದು ಓಡತೊಡಗಿದರು. ...ಓಡುವ ಶಕ್ತಿ ಇಲ್ಲದ ಕೆಲವರು ಅಲ್ಲೆ ನಿಂತರು. ನೆಲಕ್ಕೆ ಬಿದ್ದ ಬಸವನಗೌಡ ... ನೀರು ಎಂದು ಕೂಗಿಕೊಳ್ಳುತ್ತಲೆ ಇದ್ದ. ಮಲ್ಲಪ್ಪ ಎಂಬ ವೃದ್ಧರು ...ಟ್ ಅನ್ನು ನೀರಲ್ಲಿ ಮುಳುಗಿಸಿ ತಂದು ಬಸವನಗೌಡನ ಬಾಯಿಗೆ ...ಹತ್ತಿರಬೇಕಾದರೆ ಅವರಿಗೂ ಪೊಲೀಸರು ಗುಂಡು ಹಾರಿಸಿದರು.

...ಪೊಲೀಸರು ಗುಂಡು ಹಾರಿಸುತ್ತಲೇ ಇದ್ದರು. ನಾವೆಲ್ಲ ದಿಕ್ಕಾಪಾಲಾಗಿ ...ಓಡಗಿದೆವು. ರೈತರೇ ತಮ್ಮ ಮೇಲೆ ದೌರ್ಜನ್ಯವೆಸಗಿದರು ಆಗ ... ನಿರುಪಾಯರಾಗಿ ಗುಂಡು ಹಾರಿಸಿದೆವು ಎಂದು ಬಿಂಬಿಸಲು ತಮ್ಮದೆ ...ನ ಪೆಟ್ರೋಲ್ ತೆಗೆದು ವ್ಯಾನಿಗೆ ಹಾಕಿ ಬೆಂಕಿ ಹಚ್ಚುತಿದ್ದುದನ್ನು ಮನೆ ...ದಿನ ಜೋಳದ ಹೊಲದಲ್ಲಿ ಹಕ್ಕಿ ಕಾಯುತಿದ್ದ ನಟರಾಜ ನೋಡಿ "...ಲೀಸರೇ ವಾಹನಕ್ಕೆ ಬೆಂಕಿ ಹಚ್ಚುತಿದ್ದಾರೆ" ಎಂದು ಕೂಗಿಕೊಳ್ಳುತಿದ್ದ. ... ಬಳಿಯಲ್ಲೆ ಇದ್ದ ನಾವು ಪೊಲೀಸರು ನಮ್ಮೆಡೆಗೆ ಪದೇ ಪದೇ ...ಡು ಹಾರಿಸುತಿದ್ದುದನ್ನು ನೋಡಿ ನಟರಾಜನಿಗೆ "ನೆಲ ಕಚ್ಕೋ, ನೆಲ ... ಗುಂಡು ಹೊಡಿತಾರೆ ನೆಲಕ್ಕೆ ಆತುಕೋ" ಅಂತ ಕೂಗಿಕೊಳ್ಳುತ್ತಲೇ ...ಗೆ ದಾಳಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿದ್ದೆವು. ಆದರೆ ನಟರಾಜ ... ಮತ್ತು ನನ್ನ ಗೆಳೆಯನ ಮಾತಿಗೆ ಗಮನ ಕೊಡದೆ ಪೊಲೀಸರು ...ತ್ತಿದ್ದ ಹಲ್ಕಾ ಕೆಲಸವನ್ನು ಬಯಲಿಗೆಳೆಯುವುದರಲ್ಲಿ ಮಗ್ನನಾಗಿದ್ದ. ...ಲೀಸರ ಗುಂಡು ಆ ಹುಡುಗನನ್ನು ಮುಗಿಸೇ ಬಿಟ್ಟಿತು. ನಾನು ಮತ್ತು ...ಗೆಳೆಯ ಹೊಲದಲ್ಲಿ ಬಿದ್ದುಕೊಂಡು ಅಂಬಲಿಕೊಳ್ಳುತ್ತಲೇ ನಟರಾಜನ ... ಹೋದಾಗ ಗುಂಡೇಟು ತಿಂದಿದ್ದ ನಟರಾಜ ಬಿದ್ದು ಒದ್ದಾಡುತಿದ್ದ. ...ನಮ್ಮೆದುರೆ ಪ್ರಾಣಬಿಟ್ಟ. ನಾವು ಅಲ್ಲೆ ಇದ್ದ ಅವನ ಮನೆಗೆ ವಿಷಯ ...ತಿಳಿಸುವುದಕ್ಕೆ ಹೋಗುತ್ತಲೂ ಪೊಲೀಸರು ಗುಂಡೇಟಿಗೆ ಬಲಿಯಾದ ...ಶವ ಜನರನ್ನು ಹಿಂದೆ ನಿಲ್ಲಿಸಿದ್ದ ವಾಹನಕ್ಕೆ ಹಾಕಿಕೊಂಡು ಗುಂಡು ...ಹಾರಿಸುತ್ತಲೇ ಪರಾರಿಯಾದರು. ಮುಂದಿದ್ದ ಎರಡು ವಾಹನಗಳು ಪೊಲೀಸರೇ ...ಹಚ್ಚಿದ್ದ ಬೆಂಕಿಗೆ ಉರಿದು ಭಸ್ಮವಾದವು. ಅಷ್ಟೊತ್ತಿಗಾಗಲೇ ಬಹಳಷ್ಟು ...ಗಾಬರಿಯಲ್ಲಿ ದಿಕ್ಕು ತೋಚದೆ ನದಿಗೆ ಹಾರಿ ಆಚೆ ದಡ ಸೇರಿದ್ದರು. ...ಇದ್ದ ನಾವೊಂದಷ್ಟು ಜನರನ್ನು ಸಿದ್ಧರಾಮಯ್ಯ ಎಂಬ ರೈತರು ...ದೇವಸ್ಥಾನದೊಳಗೆ ಬನ್ನಿ ಎಂದು ಕೂಗಿ ಕರೆಯುತ್ತಿದ್ದರು. ದೇವಸ್ಥಾನದ ...ಬಾಗಿಲಿಗೆ ಸಹ ಪೊಲೀಸರ ಗುಂಡೇಟು ತಗುಲಿತ್ತು, ಆ ರಾತ್ರಿ ಜೀವ ...ಹಿಡಿದು ದೇವಸ್ಥಾನದಲ್ಲಿ ನಡುಗುತ್ತಾ ನಿಂತಿದ್ದೆವು. ಮುಂದೇನಾಗುತ್ತದೆ ... ಹೆದರಿಕೆ ನಮ್ಮೆಲ್ಲರನ್ನು ಆವರಿಸಿತ್ತು. ●


ಪುಸ್ತಕ ವಿಮರ್ಶೆ

ನೀವು ಮಾತ್ರ ನೋಡಬಲ್ಲ ಸ್ಥಿತಿಯಲ್ಲಿದ್ದ-ನಮ್ಮನ್ನು ಯಾರೋ ತಾಕಿದಂತೆನಿಸಿ...!

There are no tales finer than life itself

ಎಂದಿದ್ದಾನೆ ಮಾಕ್ಸಿಂ ಗೋರ್ಕಿ. ಅಂತಹದ್ದೊಂದು ಬದುಕಿನ ಚಿತ್ರಣವನ್ನು ಕೊಡುತ್ತದೆ 'ಜೈಲೆಂಬ ಲೋಕದಲ್ಲಿ' ಎಂಬ ಅನುಭವ ಕಥನ. ಮೂರು ವರ್ಷಗಳ ಕಾಲ ರಾಯಚೂರು, ಗುಲ್ಬರ್ಗಾ ಜೈಲುಗಳಲ್ಲಿ ಕಂಡುಂಡ ಅನುಭವವನ್ನು ಕುಮಾರ್ ಸಮತಳ ಈಗಾಗಲೇ 'ಲಂಕೇಶ್' ವಾರಪತ್ರಿಕೆಯಲ್ಲಿ ಬರೆದ ಅಂಕಣ ಬರಹವನ್ನು ಪುಸ್ತಕ ರೂಪದಲ್ಲಿ ತಂದಿದೆ ಲಂಕೇಶ್ ಪ್ರಕಾಶನ.

ಈ ಅನುಭವ ಕಥನವು ಓದಿಸಿಕೊಂಡು ಹೋಗುವ ಪರಿ ಅದು ಒಬ್ಬ ಬಂಧಮುಕ್ತ ನಿರಪರಾಧಿಯೊಬ್ಬನ ಆಳದ ನಂಬಿಕೆಯನ್ನು ಪ್ರಯೋಗಕ್ಕೆ ಒಡ್ಡಿ ಇತರರಿಗೆ ಅದನ್ನು ಕಟ್ಟಿಕೊಡುವಾಗ ಪಾಲಿಸಬೇಕಾದ ಸ್ಪಷ್ಟತೆ ಮತ್ತು ತನಗೆ ತಾನೇ ಹೇಳಿಕೊಳ್ಳುವಾಗಿನ ಪ್ರಾಮಾಣಿಕತೆಯಂತಿದೆ.



ಜೈಲೆಂಬ ಲೋಕದಲ್ಲಿ
ಕುಮಾರ್ ಸಮತಳ
ಪುಟ 129
ಲಂಕೇಶ್ ಪ್ರಕಾಶನ
ಬೆಲೆ: ರೂ. 80

ಬರಿ ಚಲನಚಿತ್ರಗಳಲ್ಲಷ್ಟೆ ಅಲ್ಲದೆ ತಮ್ಮ ದಿನನಿತ್ಯ ಬದುಕಿನಲ್ಲಿ ನಡೆಯುವ-ವ್ಯವಸ್ಥೆ ಪೋಷಿತ ಪೊಲೀಸ್ ದಾಳಿಗಳು; ಅವರು ಬಳಸುವ 'ಕ್ಲಾಸಿಕಲ್ ಲಾಂಗ್ವೇಜ್' ಬೈಗುಳಗಳಿಂದಲೇ ಜನಸಾಮಾನ್ಯರು ಜೈಲುಗಳ ಬಗ್ಗೆ ಕನಿಷ್ಠ ಮಾನವೀಯತೆಯನ್ನೂ ತೋರದ ಅಧಿಕಾರಿಗಳ ಬಗ್ಗೆ ಒಂದು ಶಾಶ್ವತ ಅಪನಂಬಿಕೆಯನ್ನು ಬೆಳೆಸಿಕೊಳ್ಳುತ್ತಲೇ ಇದ್ದಾರೆ. ಆದರೆ ದರ್ಪದಾಚೆಗಿನ ವ್ಯವಸ್ಥೆ ತಯಾರಿಸಿದ ಡಕಾಯತರ, ಜೇಬುಗಳ್ಳರ, ದಂಧೆಯವರ ಮತ್ತು ಚಿಗರೆಕಾರರ ರೋಚಕ ಬದುಕನ್ನು; ಸಾಹಸೀ ಪ್ರವೃತ್ತಿಯನ್ನು ಮತ್ತು ತನ್ನದಲ್ಲದ ತಪ್ಪಿಗೆ ಕಂಬಿ ಎಣಿಸುವ ಭೀಮ್‌ಸ್ವಾನಂತವರ ಕರುಣಾಜನಕ ಸ್ಥಿತಿ ಎಂಥವರಲ್ಲೂ ದುಃಖ ಉಮ್ಮಳಿಸಿಬಿಡುತ್ತದೆ.



ಪ್ರಪಂಚದ ಕೆಲ ಕೃತಿಗಳು 'ಶ್ರೇಷ್ಠ' ಎನಿಸಿಕೊಳ್ಳುವ ಹಿಂದಿನ ಕಾರಣ ಅವು ಮುಖ್ಯವಾಗಿ ಜನಸಾಮಾನ್ಯರ ಕುರಿತು ಹೇಳಲ್ಪಟ್ಟಿದ್ದೇ ಇರಬೇಕು. ಲೇಖಕರೇ ಹೇಳುವಂತೆ ಕೈದಿಗಳಲ್ಲಿ ಹೆಚ್ಚಿನವರು ಕೆಳವರ್ಗದ ಬಡವರು-ದಲಿತರಾಗಿರುತ್ತಾರೆ ಮತ್ತು ಈ ಕಥನದಲ್ಲಿ ಬರುವ ಚುವ್ವಾ, ಪಿಲ್ಲಿ, ಬಾಷಿ, ಶುಕ್ಲಾ, ಲಂಬೂ ಹಾಗೂ ಕೊರಚರಹಟ್ಟಿ ಜನ ಕೂಡ ಯಾವ ಮಹಲ್ಲುಗಳಿಂದ; ಅಪಾರ್ಟ್‌ಮೆಂಟ್‌ಗಳಿಂದ ಬಂದವರಲ್ಲ. ಪುಸ್ತಕ ಅರ್ಪಿಸಿಕೊಂಡವರ ಕಾಳಜಿಯೂ ಈ ಜನವರ್ಗದ ಪರವೇ ಇದ್ದಿರಬೇಕು. ಅದಕ್ಕೆ ಅತೀ ಚಿಕ್ಕದಾದ ನಮ್ಮ ಸಂವಿಧಾನದ ಬಲೆ ಯಾವಾಗಲೂ ಚಿಕ್ಕ-ಚಿಕ್ಕ ಮೀನುಗಳನ್ನು ಮಾತ್ರ ಹಿಡಿಯುತ್ತದೆ. ತಿಮಿಂಗಲಗಳೇನಿದ್ದರು ಬಲೆ ಹರಿದೋ ಇಲ್ಲ ನುಂಗಿಕೊಂಡು ಬಚಾವಾಗಿಬಿಡುತ್ತವೆ.

ಆದರೆ ಸಮತಳರು ತಮ್ಮ ಹೋರಾಟದ ಬದುಕನ್ನು-(ಒಂದು ದಶಕ ಕಾಲ) ಇಂತಹ ಜನಸಾಮಾನ್ಯರೊಂದಿಗೆ ಕಳೆದರು-ರಾಯಚೂರಿನ ವಿಶಿಷ್ಟ 'ತೆಲುಗು ಕನ್ನಡ' ಸಂಸ್ಕೃತಿ; ಭಾಷೆಯನ್ನು ಸಮರ್ಥವಾಗಿ ಗ್ರಹಿಸುವಲ್ಲಿ ಸೋತಿದ್ದಾರೆ. ಏಕೆಂದರೆ ಇಲ್ಲಿಯ ಕೆಳದುಡಿಯುವ ವರ್ಗದ (ಮುಸ್ಲಿಮರು ಸೇರಿದಂತೆ) ಭಾಷೆಯನ್ನು ಯಾವ ಭಾಷಾತಜ್ಞರು ಕೂಡ ಸಂಪೂರ್ಣವಾಗಿ ಇದು 'ಕನ್ನಡ'-ಅದು 'ತೆಲುಗು' ಎಂದು ನಿಖರವಾಗಿ ಹೇಳಲು ಕಷ್ಟ. ಇದು ಎರಡು ಭಾಷೆಯ ಸಾಮ್ಯತೆಯು ಆಗಿ ಬರಬಹುದು. ಅಂತಹದ್ದೊಂದು ಸೊಗಡಿದೆ ಇಲ್ಲಿಯ ಭಾಷೆಗೆ!

ಯಾವಾಗ ಅನುಭವ ಕಥನವೊಂದು ನಿರ್ದಿಷ್ಟ ಜನವರ್ಗದ ಭಾಷೆ; ಆಚರಣೆಯ ಸಾಮ್ಯ, ಭಿನ್ನತೆಯನ್ನು ಮತ್ತು ಕೊಡುಕೊಳ್ಳುವಿಕೆಯನ್ನು ಯಶಸ್ವಿಯಾಗಿ ಹಿಡಿದಿಡುತ್ತದೋ ಆಗಲೇ ಆ ಬರಹ ಮತ್ತೆ ಜನರಿಗೆ ಮುಟ್ಟುವ ಅರ್ಹತೆ ಪಡೆಯುತ್ತದೆ. ಇಲ್ಲದಿದ್ದಲ್ಲಿ "ಎರಡೂ ಕೈಗಳಿಂದ ಮಹಿಳೆಯರು ರೊಟ್ಟಿ ಬಡಿಯುವುದು ಅಲ್ಲಿನ ವಾಡಿಕೆ" (ಪು. 6) ಎಂಬಂತಹ ಅಭಾಸ ಕ್ರೀಡಾಗುತ್ತದೆ. ಬಹುಶಃ ಇಂಥ ಸಣ್ಣ-ಸಣ್ಣ ಸಂಗತಿಗಳನ್ನು ಸರಿಪಡಿಸಿಕೊಂಡಿದ್ದಲ್ಲಿ ಚೆನ್ನಾಗಿತ್ತು.

ಆದರ್ಶಗಳು 'ಮಾತು-ಅಕ್ಷರ'ಗಳಲ್ಲಿದ್ದಾಗಲೇ ಚೆಂದ. ಯಾವಾಗ ಅವು ನಡೆದಾಡುವುದಕ್ಕೆ ಶುರುವಿಡುತ್ತವೋ ಆಗಲೇ 'ಹ್ಯಾಂಡಿಕ್ಯಾಪ್' ಆಗೋದು ಎಂಬ ಮಾತಿದ್ದರೂ ಜೈಲೊಳಗೆ ಉಚಿತ ಪತ್ರ ಬರೆದುಕೊಡುವಾಗಿನ-ಎದುರಾಗುತ್ತಿದ್ದ ಸಮತಳರ ಸೈದ್ಧಾಂತಿಕ ಬಿಕ್ಕಟ್ಟು ಎಂಥವರನ್ನು ಆಲೋಚನೆಗೆ ಹಚ್ಚಬಲ್ಲದು.

ಒಂದಿಷ್ಟು ಬಿಳಿ ಹಾಳೆಯಿಲ್ಲದೆ ದಿನಪತ್ರಿಕೆಯ ಖಾಲಿ ಜಾಗ ಹುಡುಕುವವರು; ಹೊಟ್ಟೆ ತುಂಬಲ್ಲ ಎಂದು 'ಜೈಲಿನ ಮರ ಹತ್ತುವವರು, ಮತ್ತು ಜನರ ಮಧ್ಯೆಯಿದ್ದು ತಾಳದ ಹಸಿವು ನೀಗಿಸಲು ಟೂತ್‌ಪೇಸ್ಟ್ ತಿನ್ನುವವರು ಇವತ್ತಿಗೂ ನಮ್ಮ ಸುತ್ತಲೂ ಇರುವುದನ್ನು; ಬರಿ ಚುಕ್ಕಿ-ಚಂದ್ರ, ಹೂವು, ಬಾನು-ಭೂಮಿ-ಕಾಮನಬಿಲ್ಲು ಎಂದು ಫುಲ್ ಮೀಲ್ಸ್ ಉಂಡು ಕಲ್ಪನಾ ಲೋಕದಿ ಬಳಲುಬಿಟ್ಟ ಕನ್ನಡ ಓದುಗನಿಗೆ ತಿಳಿಯಲಿ. ಹಾಗೆ ಕಥನಕಾರ ಒಂದಿಷ್ಟು ಪಾರಿಭಾಷಿಕ (ಬ್ಯಾರಕ್, ಪೆರೋಲ್) ಶಬ್ದಗಳ ಅರ್ಥ ತಿಳಿಸಿದ್ದಲ್ಲಿ ಅನುಕೂಲವಾಗುತ್ತಿತ್ತು.

ಅಕ್ಷರಬಲ್ಲ; ಪ್ರಜ್ಞಾವಂತ ರಾಜಕೀಯ ಕೈದಿಯಾಗಿ ಮೂರು ವರ್ಷಗಳ ಕಾಲ ದೊಡ್ಡ ಗೋಡೆಗಳ ಮಧ್ಯೆ, ಸಣ್ಣ ತಪ್ಪಿಗಾಗಿ 'ಪಾಪಿ ಶಿಕ್ಷೆ ಕಾಯಂ' ಎನ್ನಿಸಿಕೊಂಡವರ ಜೊತೆಗಿದ್ದೇ ಇಷ್ಟೊಂದು ಬಸೆದು ಕೊಟ್ಟಿದ್ದೀರಿ ಎಂದಲ್ಲಿ, ವರ್ಷಾನುಗಟ್ಟಲೆ ಜೈಲಲ್ಲಿದ್ದು ಯಾತನೆಪಡುತ್ತಿರುವ ಸಾವಿರಾರು ಅಮಾಯಕರಿಗೆ ಅದೆಷ್ಟು ಹೇಳುವುದಿದೆಯೋ. ಅದೆಂಬೀ ಕನ್ನಡಕ್ಕೆ ದಕ್ಕುವಂತಾಗಲಿ.

● ರಮೇಶ ಅರೋಲಿ

ಪಕ್ಷಾಂತರಿಗಳ ಸ ಮೂ ಹ ಗಾ ನ (ಒಂದು instant ಚಿಲ್ಲರ ಪದ)

ನಾವು ಪಕ್ಷಾಂತರಿಗಳು.
ನಾವು ಗಂಡಸರಲ್ಲ.
ನಾವು ಹೆಂಗಸರಲ್ಲ.
ನಾವು ಷಂಡರು! ...
ನಾವು ...
ನಮಗೆ ಬೇಕಾದ್ ಮಾಡಿ.
ಹಿಂದೆ ಬಂದರೆ ಹಾಯಿರಿ ಮುಂದೆ ಬಂದರೆ
ಒದೆಯಿರಿ.
ಎಡಕೆ ಬಂದರೆ ಎಳೆಯಿರಿ ಬಲಕೆ ಬಂದರೆ
ಬಿಗಿಯಿರಿ.

ನಾವು
ತಿಳಿವು ತೂಗಲಿನ ಹಣಗರಲ್ಲ.
ಕಂಡ ಕಂಟಗೆ ಕಾಲು ಎತ್ತುವ
ಒದ್ದ ಕಾಲಿಗೆ ಮುದ್ದು ಮಾಡುವ
ಸ್ವಾಮಿ ಭಕ್ತ ಶೂಣಗರು!

ನಮಗೆ ಹೆಸರೇ ಇಲ್ಲ.
ನೀವು ಬೇಕಾದಾಗ ಕುಟ್ಟುಟ್ಟ ಕುರ್ ಅಂದು
ಹೇಲಗುಗ್ಗುರಿ ತಿಂದು
ಬೇಕಾದ ಹೆಸರಿಡಿರಿ.
ನೀವು ಕೊಟ್ಟದ್ದೇ ನಮ್ಮ ಹೆಸರು.


ಸ್ವಾಮಿ, ನೀವು ಬೇಕಾದ್ ಮಾಡಿ.
ನೀವು ಗಂಡು ಹೊಡಿರಿ.
ಹುತಾತ್ಮರಾಗುತ್ತೇವೆ.
ನೀವು ಹೂವು ಹೂಡಿರಿ.
ಮಹಾತ್ಮರಾಗುತ್ತೇವೆ.
ನೀವು ಜೋಕು ಹೊಡಿರಿ. ನಾವು ನಗುತ್ತೇವೆ.

ಹೋಗೋ ಹೋಗು-ಅನ್ನಿರಿ.
ಮುಂದಿನ ಮನೆಗೆ ಹೋಗುತ್ತೇವೆ.

ನಾವು
ಯಾವ ಪಕ್ಷಿಯ ಗೂಡ ಪಾಪ ಲೇಪಿತರಲ್ಲ.
ನಕ್ಷತ್ರ ಲೋಕದ ರೈಲಿನೋಟಕ್ಕೆ
ತಂತಿ ಮೀಟುವವರಲ್ಲ.
ನಾವು ಈ ಇವತ್ತಿನ ದಿವಸದ
ಈ ನೆಲದ ಈ ಗಾಳಿಯ ಈ ಬೆಂಕಿಯ
ಈ ಇತ್ಯಾದಿಗಳ ಮಕ್ಕಳು.

ಮುಂದೇ ಮಕ್ಕಳು.
ಅಪ್ಪನ ಅರಿವಿಲ್ಲ ಅವ್ವನ ಖಬರಿಲ್ಲ
ಮಕ್ಕಳದಂತೂ ಹೆದರಿಕೆ ಇಲ್ಲ.
ಏಕೆಂದರೆ ನಾವು ಷಂಡರು ಮತ್ತು ಆಗೀಗ ಪುಂಗರು.

ನೀವು ಸೀಟು ಕೊಡುವವರೆ ಸಾಕು.
ನಾವು ಜಯಘೋಷ ಹಾಕುತ್ತೇವೆ.
ಉದಾ:
ಇಂದಿರಾ ಗಾಂಧಿಗೆ ಜಯವಾಗಲಿ.
(ಮಹಾತ್ಮಾ ಗಾಂಧಿಗೂ ಜಯವಾಗಲಿ)



ಸಂಜಯ ಗಾಂಧಿಗೆ ಜಯವಾಗಲಿ.
ಪ್ರೊಫೆಸರ್ ಪ್ರೋಫೆಟ್ ಜನಸಂಘ ಕಾಂಡಿಡೇಟ್
ಉಡುಪಿಯ ಅದಿಗರಿಗೆ ಜಯವಾಗಲಿ.
ಯಾರ್ಯಾರಿಗೆ ಬೇಕೋ ಅವರಿಗೆಲ್ಲ
ಜಯವಾಗಲಿ.

ಅಂತೂ
'ಸ್ವರ್ಗ'ರಿಗೆ'
ಅಂದರೆ ನಮಗೆ
ಜಯವಾಗಲಿ!

● ಚಂಪಾ (ಚಂದ್ರಶೇಖರ ಪಾಟೀಲ)

ಟಿಪ್ಪಣಿ: 1971 ರಲ್ಲಿ ಚಂಪಾ ಬರೆದ ಕವನವಿದು. ಅವರ 'ಗಾಂಧಿ ಸ್ಮರಣೆ' ಸಂಕಲನದಲ್ಲಿ ಪ್ರಕಟವಾಗಿದೆ. ಆಗಿನ ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಪ್ರಸ್ತಾಪಿತವಾದ ಪದ್ಯವಿದು. ... ನಮ್ಮ ರಾಜಕೀಯ ಪರಿಸ್ಥಿತಿ ಹಾಗೆಯೇ ಇದೆ. ಇನ್ನೂ ಹದಗೆಟ್ಟಿದೆ ಅಂದಿನ 'ಪಕ್ಷಾಂತರಿ'ಗಳ ಇಂದಿನ ಸಂತಾನದ ಮತ್ತೊಂದು ... ಪ್ರಕಟವಾಗಿದೆ

ಯಾಕೋ ಕಾಂಗ್ರೆಸ್ಸು ಯಿಂದೂ ಥರಮದಂಗಾಯ್ತಾ ಅದೆ!

ಅಂಬರೀಷ್‌ಗೆ ಕಾಂಗ್ರೆಸ್ ಟಿಕೆಟ್ ಸಿಕ್ಕ ಪ್ರಚಾರಕ್ಕೆ ಹೊರಟ ಸುದ್ದಿ ಕೇಳಿದ ಡುಮ್ಮಿ ಸಂಭ್ರಮದಿಂದ ಓಲಾಡ ತೊಡಗಿದಳು. ಅದನ್ನು ನೋಡಿದ ಉಗ್ರಿ,

"ಎಡೂರಪ್ಪ ಕಂಡೇಟಗೆ ಶೋಬ ನಿನ್ನಂಗೆ ಆಡ್ತಳೆ ಕಣೆ" ಎಂದು ರೇಗಿಸಿದ.

"ಅಲ್ಲಾ ಕಂಡ್ಕ, ಅಂಥಾ ಮನುಸ ಯಲಕ್ಷನ್ನಿಗೆ ನಿಲ್ಲದಿಲ್ಲ ಅಂತ ಗೊತ್ತಾದಾಗಿಂದ ಮನುಗೆ ಬೇಜಾರಾಗಿತ್ತು, ಕಡಿಗೂ

ಬಯಲು ಸೀಮೆ ಕಟ್ಟೆಪುರಾಣಿ

ಬಿ. ಚಂದ್ರೇಗೌಡ

ನಿಂತನಲ್ಲ ಬುಡು" ಎಂದಳು.

"ಅವುನ್ಯಾಕಂಗೆ ಜಡತಗಂಡಿದ್ದ?" ಎಂದ ಸೀರ.

"ಜಡತಗಂಡಿದ್ದ ಅಂದ್ರೆ ಯಲಕ್ಷನ್ನಿಗೆ ನಿಲ್ಲಬೇಕಾದ್ರೆ ದುಡ್ಡು ಬ್ಯಾಡವೇನೊ ಸೀರ ಮಾವ? ಯಮ್ಮೆಲ್ಲೆ ಯಲಕ್ಷನ್ನಿಗೆ ಹತ್ತು ಕೋಟ ಆಯ್ತಾಯಿರುವಾಗ ಇನ್ನ ಎಂ.ಪಿ.ಗೆ ನಿಂತಗಬೇಕು ಅಂದ್ರೆ ಏಟುಬೇಕು ಅಂತ ನೀನೆ ಲ್ಯಕ್ಕ ಹಾಕು."

"ಸರಿಬುಡಪ್ಪ ಅತ್ತಗೆ. ಅಂಗರೀಗ ಆ ದುಡ್ಡ ಕಾಂಗ್ರೆಸ್ಸಿನೋರು ಕೊಟ್ಟರೆ?"

"ಕೊಡ್ಲೆಬೇಕು ಮತ್ತೆ. ಅಂಬುರೀಸ ಮದ್ಲಿಂದ ಮನೆದುಡ್ಡು ತಂದು ರಾಜಕಾರಣ ಮಾಡಿದೋನಲವಂತೆ. ಅದ್ಕೆ ಅವುನ ಯಲಕ್ಷನ್ ಖರ್ಚು ಕೊಡ್ತಿವಿ ಯಲ್ಲ ಸೇರಿ ಓಟು ಕೇಳ್ತಿವಿ ಅಂದಮ್ಯಾಲೆ ಬಂದನಂತೆ."

"ಗೆದ್ದನೇನ್ಲ?" ಎಂದ ಕಾಳಮಾವ.

"ಚಲುವರಾಯಸ್ವಾಮಿ ದಲ್ಲಾಗಿರದ ನೋಡಿದ್ರೆ ಗೆಲ್ಲಲೇಬೇಕು."

"ಅವುನ್ಯಾಕ್ ದಲ್ಲಾಗಿದ್ದನ್ಲ?" ಎಂದ ಸೀರ.

"ಶಿವರಾಮೇಗೌಡ ಕಾಂಗ್ರೆಸ್ ಕ್ಯಾಂಡೇಟ್ ಅಂತ ಗೊತ್ತಾದಾಗ ನಾನು ಗೆದ್ದಾಯ್ತು ಅಂತ ಚಲುವಣ್ಣ ಮ್ಯರಿತಿದ್ದ. ಮ್ಯರಿಯದೇನು ಆಗ್ಲೆ ಲೋಕಸಭೆಗೋದೆ ಅಂತ ಹಿಂದಕೆ ಕೈ ಕಟಗಂಡು ತಿರುಗತಿದ್ದ. ಯಾವಾಗ ಅಂಬರೀಸನೆ ಅಭ್ಯರ್ಥಿ ಅಂತ ಗೊತ್ತಾಯ್ತೋ ಅವಾಗಿಂದ ಮಂಕಾಗಿದ್ದನಂತೆ."

"ಅವುನೆ ಮಂಕಾದ್ರೆ ಶಿವರಾಮನ ಕತಿಯೇನ್ಲ?"

"ಇದ್ದದ್ರಲ್ಲಿ ಶಿವರಾಮನೆ ಗೆಲುವಾಗಿರೋನು. ಅವುನಾಗ್ಲೆ ಗೆದ್ದೇಬಿಟ್ಟೆ ಅನ್ನಂಗೆ ತಿರುಗ್ತ ಅವುನೆ. ಅವುನು ಗೆಲ್ಲಲಿ ಸೋಲಲಿ ಮುಂದೆ ಜಿಲ್ಲೆಲಿ ಅವುಂದೆ ರಾಜಕಾರಣ ನ್ಯಡಿಯದು."

"ಅಂಗಂತಿಯಾ?"

"ಊ ಮತ್ತೆ, ಬೆಳಗಾಯ್ತು ಅಂದ್ರೆ ಎಡೂರಪ್ಪನ ಮನಿಗೋಯ್ತನೆ. ಅವುರಿವುರ್ನ ಟ್ರಾನ್ಸ್‌ಫರ ಮಾಡಬೇಕು ಅಂತ ಅರ್ಜಿ ಹಿಡಕಂಡೋಗಿ ಸಯಿನಾಕಿಸಿಗತ್ತನೆ, ಬತ್ತನೆ. ಅಂತು ಮುಂದೆ ಈ ಏರಿಯಾದ ರಾಜ್ಯ ಅವುಂದೆ ಅನ್ನಂಗೆ ಕಾಣ್ತದೆ."

"ಅಂಗರವುನು ಸೋತ್ರೆ ಅವುನಿಗೇ ವಳ್ಳೆದು ಅಂತಿಯಾ?"

"ಅವುನ ಕತೆ ಗೆದ್ರೆ ವಳ್ಳೆದು, ಸೋತ್ರೆ ಇನ್ನವಳ್ಳೆದು ಅನ್ನಂಗಾಯ್ತದೆ."

"ಚಲುವರಾಯಸ್ವಾಮಿನೂ ತಗದಾಕಂಗಿಲ್ಲ ಕಂಡ್ಕ."

"ತಗದಾಕಂಗಿಲ್ಲ ಸರಿ. ಮಂಡ್ಯ ಜಿಲ್ಲೆನೆ ಒಂಥರಾದ್ರೆ, ನಾಗಮಂಗಲನೆ ಒಂಥರಾ ಅಲವೆ? ಅದರಲ್ಲೂ ಇವುನ್ನ ಕಂಡ್ರೆ ಪಾಂಡುಪುರದ ಪುಟ್ಟರಾಜನಿಗೆ ಆಗದಿಲವಂತೆ: ರೇವಣ್ಣನಿಗೂ ಆಗದಿಲ್ಲ. ಇವ್ರಲ್ಲ ಸೇರಿಕಂಡು ಅವುನಿಗೆ ಒಂದೀಟು ಯಕ್ಕಾಸಾಗಬವುದು."

"ಅದೂ ಅಲ್ದೆ ಹೆಂಗುಸ್ರೆಲ್ಲ ಅಂಬುರೀಸನಿಗೆ ಕಣಮಾವ ಓಟಾಕದು" ಎಂದಳು ಡುಮ್ಮಿ.

"ಅಂಗರೆ ಯೆಂಗುಸರಿಗೆ ಅಂಬುರೀಸ ಇನ್ನು ಯೀರೊ ಅನ್ನು?" ಎಂದ ಸೀರ.

"ಊ ಕಣ ಮಾವ."

"ಯಲ್ಲ ನಿನ್ನಂಗೆ ಇದ್ದರೇನ್ಲ? ಸ್ತ್ರೀಸಗತಿ ಜನ ಯಂಗವುರೆ ನೋಡಿದ್ದಿಯಾ?"

"ಯಂಗಿದ್ರು, ಕಡಿಗವು ಆಕದೆ ಅವುನಿಗೆ."





"ಲೋಕಸಭೆ ವಳಕೆ ಹೋಗದಿಲವಂತೆ ಅವುನಿಗಾಕಿದ್ರೇನು ಪ್ರಯೋಜನ?"

"ದ್ಯಾವೇಗೌಡನೂ ಹೋಗದಿಲ್ಲ ಕಣೊ ಸೀರ ಮಾವ ಆದ್ರು ಅವುನು ಯಲಕ್ಷನಿಗೆ ನಿಂತಗಳದಿಲವೆ?" ಎಂದ ಉಗ್ರಿ.

"ಅವುನು ಗೆಲ್ತನೆ ಬುಡು" ಎಂದ ಕಾಳಮಾವ.

"ಅದಷ್ಟೊಂದು ಸುಲಬಲ್ಲ ಕಣಮಾವ. ಒಂದ ಶ್ರೀಕಂಠಯ್ಯ ಅನ್ನೊ ಮುದಿ ಎತ್ತೇ ಸೋಲಿಸಿತ್ತು, ಈಗ ನಿಂತಿರೋನು ಇನ್ನು ಹರೇವುದ ಉಕ್ಕೆಗಿದ್ದ ಗಂಡಸ ಶಿವರಾಮ. ಆದ್ರಿಂದ ಗೆಲ್ಲದು ಸುಲಬಲ್ಲ."

"ಶ್ರೀಕಂಠಯ್ಯ ಬಜೆಪಿಗೋದ ಅಂದಮ್ಯಾಲೆ ಕಾಂಗ್ರೆಸ್ಸು ಈಕಾಗದಿಲವೇನ್ಲ?" ಎಂದ ಸೀರ.

"ಕಾಂಗ್ರೆಸ್ಸು ಶ್ರೀಕಂಠಯ್ಯ ಇದ್ದಾಗ್ಲೆ ಈಕಾಗಿತ್ತು. ಈಗ ಅಂಗೇನೂಯಿಲ್ಲ. ಆದ್ರು ದ್ಯಾವೇಗೌಡ್ರು ದುಡ್ಡ ಉಳ್ಳಿಕಾಳು ಚೆಲ್ಲಿದಂಗೆ ಚೆಲ್ಲತರೆ. ಶಿವರಾಮನತ್ರ ದುಡ್ಡಿಲ್ಲ: ಅದೇ ಒಂದ್ಕೈಬೂ ಆಗಬವುದು."


"ಈ ಅಣ್ಣಯ್ಯನಿಗೇನು ಒಂದಿತ್ಲ ಸಾಯಕಡೆಸತಿ ಕಾಂಗ್ರೆಸ್ ಬುಡ್ತನಲ್ಲ?"

"ವಯಿಸಾದ ಮ್ಯಾಲೆ ತಲಿಕೆಟ್ಟೊಯ್ತದೆ ಕಣಮಾವ. ಈ ಶ್ರೀಕಂಠಯ್ಯನಿಗೂ ಅಂಗೇ ಆಗ್ಯದೆ. ಅದ್ಕೆ ಹೋದ ಅತ್ತಗೆ."

"ಅಲ್ಲೇನು ಮಾಡ್ತನಿವುನು?"

"ಇನ್ನೇನು ಮಾಡ್ಯನೂ? ಇಲ್ಲಿ ಮಾಡಿದ್ನೆ ಅಲ್ಲೂ ಮಾಡ್ತನೆ. ಅಧಿಕಾರದ ಅಮಲಲ್ಲಿರೊ ಬಿಜೆಪಿಗಳು ಇವುನ್ನ ಕ್ಯಾರೆ ಅನ್ನದಿಲ್ಲ. ಅಂಗೇ ಕಾಲ ಮಾಡಿ ಕಂತೆ ಬಿಸಾಕ್ತನೆ."

"ಅಲ್ಲಾ ದಿನಬೆಳಗಾಯ್ತು ಅಂದ್ರೆ ವಸಿ ಜನ ಜೆಡಿಎಸ್ಸಿಗೋದ್ರು ಅಂತರೆ. ವಸಿ ಜನ ಬಿಜೆಪಿಗೋದ್ರು ಅಂತರೆ. ಈ ಕಾಂಗ್ರೆಸ್ ಕಡಿಕೆ ಯಾರು ಬತ್ತಾಯಿಲ್ಲ ವಲ್ಲಾ?"



ಕರಾಣಿ ಮತೀನ್ ಸಾವಿನ ವಿರುದ್ಧ ಪ್ರತಿಭಟನಾ ಸಭೆ

ನಮ್ಮ ಕಾಲದ ಎರಡು ರೂಪಕಗಳು

● ಜಿ. ರಾಜಶೇಖರ

ಕೆ.ಎಚ್. ಶ್ರೀನಿವಾಸ್ ಯಾರು ಎಂದು ಎಲ್ಲರಿಗೂ ಗೊತ್ತು. ಆದರೆ ಕರಾಣಿ ಮತೀನ್ ಎಂಬ ಯುವಕನ ಹೆಸರನ್ನು ಆತನ ಊರುಕೇರಿಯ ಹೊರಗೆ ಇದುವರೆಗೆ ಯಾರೂ ಕೇಳಿಲ್ಲ. ಅವನ ಬಗ್ಗೆ ವಿಶೇಷವಾಗಿ ಹೇಳುವಂತಹದ್ದು ಸಹ ಏನೂ ಇಲ್ಲ. ಕುಂದಾಪುರ-ಶಿವಮೊಗ್ಗ ಹೆದ್ದಾರಿಯಲ್ಲಿ ಬಸರೂರಿನ ನಂತರ ಸಿಗುವ ಕಂಡ್ಲೂರಿನ ಒಬ್ಬ ಬಡ ಮುಸ್ಲಿಮ್ ಗೃಹಸ್ಥ ಅಮೀರ್ ಸಾಬ್ ಅವರ ಹತ್ತು ಮಕ್ಕಳಲ್ಲಿ ಮತೀನ್ ಐದನೆಯವನು. ಮತೀನ್ ಮೊನ್ನೆ ಏಪ್ರಿಲ್ 1ರ ಬುಧವಾರ ನಡುರಾತ್ರಿಯ ನಂತರ 2 ಗಂಟೆಯ ಸುಮಾರಿಗೆ ಪೊಲೀಸರ ಜೊತೆ ಮುಖಾ ಮುಖಿಯಲ್ಲಿ ತೀರಿಕೊಂಡ. ಕುಂದಾಪುರ ಪೊಲೀಸರ ಪ್ರಕಾರ ಮತೀನ್ ಒಬ್ಬ ಆರೋಪಿಯಾಗಿದ್ದ ಹಾಗೂ ತಮ್ಮಿಂದ ತಪ್ಪಿಸಿಕೊಂಡು ಓಡುವ ಪ್ರಯತ್ನದಲ್ಲಿ ಹೊಳೆಗೆ ಹಾರಿ ಮರಣ ಹೊಂದಿದ. ಆದರೆ ಮತೀನನ ತಂದೆ ಹೇಳುವ ಪ್ರಕಾರ ಪೊಲೀಸರೇ ಆತನನ್ನು ಕೊಂದು ಹೊಳೆಗೆ ಹಾಕಿದ್ದಾರೆ. ಮತೀನ್‌ನ ಸಾವು ಆಕಸ್ಮಿಕವೆಂದೇ ಇಟ್ಟುಕೊಂಡರೂ, ಪೊಲೀಸರು ಅವನ ಅಕಾಲ ಮರಣಕ್ಕೆ ಹೊಣೆಗಾರರಾಗಿರುವುದಂತೂ ಖಂಡಿತ.

ಕರಾಣಿ ಮತೀನ್ ಕಂಡ್ಲೂರಿನಲ್ಲಿ ಒಂದು ಪಿಕ್‌ಅಪ್ ವಾಹನ ಇಟ್ಟುಕೊಂಡು ಇತರ ಕಾಂಟ್ರಾಕ್ಟ್‌ಗಳ ಜೊತೆಗೆ ಜಾನುವಾರು ಸಾಗಾಣಿಕೆಯನ್ನೂ ಮಾಡುತ್ತಿದ್ದ. ಕರಾವಳಿಯ ಹೆದ್ದಾರಿಗಳಲ್ಲಿ ಜಾನುವಾರು ಸಾಗಾಣಿಕೆದಾರರು ಹೆಚ್ಚಾಗಿ ಹಗಲು ಹೊತ್ತು ತಮ್ಮ ಕಸುಬು ಮಾಡುವುದಿಲ್ಲ. ಪೊಲೀಸರು ಮತ್ತು ಅವರಿಗಿಂತ ಹೆಚ್ಚಾಗಿ ಭಜರಂಗಿಗಳ ಹಲ್ಲೆಯ ಭಯದಿಂದ ಜಾನುವಾರು ಸಾಗಿಸುವವರು ನಡುರಾತ್ರಿಯ ನಂತರವೇ ತಮ್ಮ ದಂಧೆ ಮಾಡುವುದು. ಆದರೆ ಇತ್ತೀಚೆಗೆ ರಾತ್ರಿಯ ವೇಳೆಯೂ ಭಜರಂಗಿಗಳು ಕಾದು ಕೂತಿದ್ದು ಅವರ ಮೇಲೆ ಹಲ್ಲೆ ಮಾಡಿದ ಅನೇಕ ಪ್ರಸಂಗಗಳು ನಡೆದಿವೆ.

ಮತೀನ್ ತೀರಿಕೊಂಡ ಆ ದಿನ, ಹೆಚ್ಚಿನ ಬಾಡಿಗೆ ಸಿಗುತ್ತದೆ ಎಂಬ ಆಶೆಯಲ್ಲಿ ರಾತ್ರಿ 10.30ಕ್ಕೆ ತನ್ನ ವಾಹನ ತೆಗೆದುಕೊಂಡು ಮನೆಬಿಟ್ಟಿದ್ದ. ಕಂಡ್ಲೂರಿನ ಸಮೀಪ ಹುಣಿಸೆಮಕ್ಕಿ ಎಂಬಲ್ಲಿ ಭಜರಂಗಿಗಳು ಅವನ ಗಾಡಿಯ ಎದುರಿನ ಕಿಟಕಿ ಗಾಜನ್ನು ಪುಡಿ ಮಾಡಿದ್ದರು. ಆನಂತರ ಬಹುಶಃ ಅವರು ಕುಂದಾಪುರ ಪೊಲೀಸ್ ಠಾಣೆಗೆ ಸುದ್ದಿ


> ● ರಾಜ್ಯದ ಬಿಜೆಪಿ ಸರ್ಕಾರ ಹಾಗೂ ಸಂಘ ಪರಿವಾರ ಒಟ್ಟಾಗಿ ಈ ಬಗೆಯ ಬಲಾತ್ಕಾರ, ದಬ್ಬಾಳಿಕೆ ಮತ್ತು ಹಿಂಸೆಯ ಸಂಸ್ಕೃತಿಯನ್ನು ಬೆಳೆಸುತ್ತಿದ್ದು ಅದಕ್ಕೆ ಮಠಾಧೀಶರುಗಳ ಬೆಂಬಲ ಮತ್ತು ಮಾಧ್ಯಮಗಳ ಒತ್ತಾಸೆಯೂ ಇದೆ. ಇದೇ ವೇಳೆಗೆ ಇತರ ಪಕ್ಷಗಳ ರಾಜಕಾರಣಿಗಳು ಹಿಂಡುಹಿಂಡಾಗಿ ಬಿಜೆಪಿ ಪಾಳೆಯವನ್ನು ಸೇರಿಕೊಳ್ಳುತ್ತಿದ್ದಾರೆ. ಕೃತಜ್ಞತೆ, ವಿಶ್ವಾಸ ಇತ್ಯಾದಿಗಳೆಲ್ಲ ವ್ಯಕ್ತಿಗಳ ನಡುವಿನ ಸಂಬಂಧದಲ್ಲಿ ಪಾಲಿಸಬೇಕಾದ ಮೌಲ್ಯಗಳೇ ಹೊರತು ರಾಜಕೀಯದಲ್ಲಿ ಅಲ್ಲ ಎನ್ನುವುದು ನಿಜ. ಪ್ರಜಾಪ್ರಭುತ್ವದಲ್ಲಿ ವ್ಯವಹಾರಿಕವಲ್ಲದ ಆದರ್ಶಗಳನ್ನು ಇಟ್ಟುಕೊಂಡು ನಿತ್ಯದ ರಾಜಕೀಯ ಮಾಡಲು ಬರುವುದಿಲ್ಲ ಎಂಬುದೂ ನಿಜವೇ.
> ●

ತಿಳಿಸಿರಬೇಕು. ಕುಂದಾಪುರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಸತೀಶ್ ಕುಮಾರ್ ಪಿ.ಸಿ.ಗಳ ಜೊತೆ, ಜೀಪು ಹಾಕಿಕೊಂಡು ಕಂಡ್ಲೂರಿಗೆ ಬಂದರು. ಆಗ ಮತೀನ್, ಊರಿನ ಪಕ್ಕದಲ್ಲೇ ಹರಿಯುವ ಹೊಳೆಬದಿಯಲ್ಲಿ ತನ್ನ ಗಾಡಿ ತೊಳೆಯುತ್ತಿದ್ದ. ಪೊಲೀಸರನ್ನು ನೋಡಿದ ಮತೀನ್ ಅವರಿಂದ ತಪ್ಪಿಸಿಕೊಂಡು ಓಡುವ ಯತ್ನದಲ್ಲಿ ಹೊಳೆಯಲ್ಲಿ ಮುಳುಗಿ ಸತ್ತ ಎಂಬುದು ಪೊಲೀಸರ ಹೇಳಿಕೆ. ಮತೀನ್ ಕಂಡ್ಲೂರಿನಲ್ಲಿಯೇ ಹುಟ್ಟಿ ಬೆಳೆದವನು; ಆ ಊರಿನ ಪ್ರತಿಯೊಂದು ಇಂಚೂ ಆತನಿಗೆ ಪರಿಚಿತವಾಗಿರುವುದರಿಂದ ಪೊಲೀಸರಿಂದ ತಪ್ಪಿಸಿಕೊಳ್ಳಲು ಅವನು ಹೊಳೆಯ ಕಡೆ ಓಡಿದ ಎಂಬುದೇ ಕಟ್ಟುಕತೆಯಾಗಿ ತೋರುತ್ತದೆ. ಅದು ಏನೇ ಇರಲಿ, ಮತೀನ್ ಸಾವಿನಲ್ಲಿ ಪೊಲೀಸರ ಪಾತ್ರದ ಬಗ್ಗೆ ತನಿಖೆಯಾಗಬೇಕಿದೆ.

ಕರಾಣಿ ಮತೀನ್‌ನ ಅಕಾಲ ಮರಣದ ಕುರಿತು, ಕುಂದಾಪುರದಲ್ಲಿ ಸೌಹಾರ್ದ ವೇದಿಕೆ, ಪಾಪ್ಯುಲರ್ ಫ್ರಂಟ್ ಮತ್ತು ಇತರ ಸಂಘಟನೆಗಳು ಭಾರೀ ಪ್ರತಿಭಟನೆ ನಡೆಸಿದ್ದರಿಂದ ಇಲ್ಲಿನ ಪತ್ರಿಕೆಗಳಲ್ಲಿ ಅದು ಸುದ್ದಿಯಾಯಿತು. ಪ್ರತಿಭಟನೆಯಲ್ಲಿ ಕಂಡ್ಲೂರಿನ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಳೆದ ಶುಕ್ರವಾರ ಏಪ್ರಿಲ್ 3 ಹಗಲು ಕಂಡ್ಲೂರಿನಲ್ಲಿ ಆತನ ಅಂತಿಮ ಯಾತ್ರೆಯಲ್ಲಿ ಅಬಾಲವೃದ್ಧರಾದಿಯಾಗಿ ಊರಿನ ಎಲ್ಲರೂ ಭಾಗವಹಿಸಿದ್ದರು. ಮತೀನ್ ಮನೆಯಿಂದ ಶವವನ್ನು ಮಸೀದಿಗೆ ಒಯ್ದು ಪ್ರಾರ್ಥನೆಯ ನಂತರ ಖಬರಸ್ಥಾನಕ್ಕೆ ಒಯ್ಯುವ ಹಾದಿಯುದ್ದಕ್ಕೂ ಪೊಲೀಸರು ಭಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಗಾಢ ಶೋಕದ ಆ ಶವಯಾತ್ರೆ ಪೊಲೀಸರ ವಿರುದ್ಧ ಮೌನ ಪ್ರತಿಭಟನೆಯಂತೆಯೂ ಕಂಡಿತು. ಕಂಡ್ಲೂರಿನ ಮುಸ್ಲಿಮರಲ್ಲಿ ಯಾರೊಬ್ಬನೂ ಮತೀನ್‌ನ ಸಾವಿನ ಕುರಿತು ಕುಂದಾಪುರ ಪೊಲೀಸರು ಕೊಟ್ಟ ವಿವರಣೆಯನ್ನು ನಿಜವೆಂದು ನಂಬುವುದಿಲ್ಲ. ಹೊಟ್ಟೆಪಾಡಿಗಾಗಿ ಜಾನುವಾರು ವ್ಯಾಪಾರ ಮಾಡುವುದು, "ಜಾನುವಾರುಗಳನ್ನು ಮಾರುವುದು ಅಪರಾಧವಲ್ಲ; ಆದರೆ ಸಾಗಾಣಿಕೆ ಮಾಡುವುದು ಮಾತ್ರ ಅಪರಾಧ"ವೆಂಬ ಸರ್ಕಾರದ ವಿಕೃತ ಕಾನೂನಿನ ಜೊತೆ ಏಗುವುದು, ಭಜರಂಗಿಗಳು ಹಾಗೂ ಪೊಲೀಸರಿಂದ ಹೊಡೆತ ತಿನ್ನುವುದು, ಪತ್ರಿಕೆಗಳು, ಸಸ್ಯಾಹಾರಿ ಸದ್ಗೃಹಸ್ಥರು ಹಾಗೂ ಮಠಾಧೀಶರುಗಳಿಂದ ಜಾನುವಾರು ಕಳ್ಳರು ಎಂದು ಕರೆಸಿಕೊಳ್ಳುವುದು, ಪೊಲೀಸು ಇಲಾಖೆಯ ಸುಳ್ಳು ಕೇಸುಗಳಲ್ಲಿ ಸಿಕ್ಕಿ ಹಾಕಿಕೊಳ್ಳುವುದು-ಇದೆಲ್ಲವೂ ಈ ವೃತ್ತಿಯಲ್ಲಿ ಮಾಮೂಲಿ. (ಯಾರಿಗೆ ಮಾಮೂಲ್ಲು?) ಆದರೆ 23 ರ ಹರೆಯದ ಮತೀನ್‌ನ ಸಾವು? ರಾಜ್ಯದಲ್ಲಿ ಇಂತಹ ಸಾವುಗಳು ಬರುವ ದಿನಗಳಲ್ಲಿ ಪತ್ರಿಕೆಗಳ ಒಳಪುಟದ ಕಿರು ಸುದ್ದಿಯೂ ಆಗದಷ್ಟು ಮಾಮೂಲಾಗಿಬಿಡಬಹುದು. ಬಿಜೆಪಿ ಸರ್ಕಾರದಿಂದ ಆಗುತ್ತಿರುವ "ಸಾಂಸ್ಕೃತಿಕ ಬದಲಾವಣೆ" ಇದು.

ರಾಜ್ಯದ ಬಿಜೆಪಿ ಸರ್ಕಾರ ಹಾಗೂ ಸಂಘ ಪರಿವಾರ ಒಟ್ಟಾಗಿ ಈ ಬಗೆಯ ಬಲಾತ್ಕಾರ, ದಬ್ಬಾಳಿಕೆ ಮತ್ತು ಹಿಂಸೆಯ ಸಂಸ್ಕೃತಿಯನ್ನು ಬೆಳೆಸುತ್ತಿದ್ದು ಅದಕ್ಕೆ ಮಠಾಧೀಶರುಗಳ ಬೆಂಬಲ ಮತ್ತು ಮಾಧ್ಯಮಗಳ ಒತ್ತಾಸೆಯೂ ಇದೆ. ಇದೇ ವೇಳೆಗೆ ಇತರ ಪಕ್ಷಗಳ

ಪ್ರತಿಭಟನಾ ಸಭೆಗೆ ಬಂದಿದ್ದ ಜನ



"ಕಾಂಗ್ರೆಸ್ನಲ್ಲಿ ಸೇರಿಸಿಗಳಿಕ್ಕೆ ಅಂತ ಮಬ್ಬಿರಬೇಕಲ್ಲ ಚಿಗಪ್ಪಾ ...ರಿದ್ವರಲ್ಲೀಗ? ಪಕ್ಷಾಂತರದ ವಿಷಯದಲ್ಲಿ ಕಾಂಗ್ರೆಸ್ಸು ಹಿಂದೂ ಧರಮದಂಗಾಗ್ಯದೆ" ಎಂದುಕೊಂಡು ...ಕ್ಸೆ ಬಂದ.

"ಯಿಂದೂ ಧರಮಕ್ಯಾಕೋಲುಸ್ತಿಯೋ?"

"ಇನ್ನೇನೊ ಉಗ್ರಿ, ಕರಂಟ್ ಸಿಚುಯೇಶನ್ ನೋಡಿದ್ರೆ ...ಪಿ ಕ್ರಿಸ್ಚಿಯನ್ ಧರ್ಮ, ಜೆಡಿಎಸ್ ಮುಸ್ಲಿಂ ಧರ್ಮ."

"ಮುಸ್ಲಿಂ ಧರುಮ ಅಂತ ಯಾಕಂತಿಲ?"

"ಅನ್ನ ತರ ಅದೆ ಕಣಕ್ಕ. ಸಾಬರಿಗೆ ಅಲ್ಲಾ ಯಂಗೊ ...ಎಸ್‌ಗೆ ದ್ಯಾವೇಗೌಡ್ರು. ಅದೇ ಕಾಂಗ್ರೆಸ್ ನೋಡು ...ನೂ ಧರಮದಂಗೆ ಕಂಗೊಳುಸ್ತಾ ಅದೆ. ಅಲ್ಲಿಂದ ...ದೇ ಹೊರಗೋದ್ರು ತಡಿಯೋರಿಲ್ಲ, ಭರೋರ್‍ನ ...ಯೋರಿಲ್ಲ. ನನಿಗೆ ಒಂದೊಂದು ಸತಿ ಈ ಕಾಂಗ್ರೆಸ್ ...ದಿದ್ರೆ ಪೇಜಾವರ ಶ್ರೀ ನೋಡಿದಂಗಾಯ್ತದೆ" ಎಂದು ...ಕ್ಸೆ ನಕ್ಕ.

"ಕಾಂಗ್ರೆಸ್ಸಿಂದ ಲೀಡ್ರುಗಳು ಹೋಗಬವುದು ಕಣೊ, ಕಾರ್ಯಕರ್ತರು ಹೋಗಬೇಕಲ್ಲಾ?"

"ಇತ್ತೀಚಿನ ಕಾರ್ಯಕರ್ತರು ಅಂದ್ರೇನು ತಿಳಕಂಡೆ ...? ಅವುರು ಲೀಡ್ರುಗಳ ಕೈಬಾಯಿ ನೋಡೋ ...ಯೊರು ಕಣೊ. ಅದ್ಕೆ ನೋಡು ಎಡೂರಪ್ಪನ ಮಗ ...ಕೈಬಾಯಿ ನೋಡೊ ಜನಗಳ ಯಳಕಂಡು ...ಕತ್ತಾಯಿದ್ದನಂತೆ."

"ಏನೇ ಮ್ಹಾಡಿದ್ರೂ ಅವುನಿಗೂ ಕಷ್ಟ ಕಣೊ."

"ಅದ್ಯಂಗೇಳತಿಯೋ ಉಗ್ರಿ? ಒಂದಿಷ್ಟು ಪ್ಯಾಕ್ಟೇಳು."

"ನೋಡೋ, ಈಡಿಗರು ಅವುರ ಸಾಹೇಬ್ರು ಬುಟ್ಟು ...ರಿಗೂ ಓಟು ಮಾಡದಿಲ್ಲ. ಸಾಬರೂ ಬಂಗಾರಪ್ಪನಿಗೆ ...ತೆ. ಕಿರುಸ್ತಾನ್ರು ಬಿಜೆಪಿಗಾಕ್ತರಾ? ಇನ್ನ ದ್ಯಾವೇಗೌಡ್ರು ...ಟರದ್ರಿಂದ ಭದ್ರಾವತಿ, ತೀರ್ಥಹಳ್ಳಿಲಿರೋ ನಮ್ಮೊರು ...ತೆ. ಆಮ್ಯಾಲೆ ಸಿದ್ದರಾಮಯ್ಯ ಕಾಂಗ್ರೆಸಲಿರದ್ರಿಂದ ...ಬ್ರು ಹಾಕ್ತರೆ. ಇದನ್ನೆಲ್ಲ ನೋಡಿದ್ರೆ ಬಂಗಾರಿ ಗೆದ್ದವ್ರುನೆ. ಎಡೂರಪ್ಪನ ಮಗನ ಕೈಲಿ ಇನ್ನು ಭ್ಹಾರಿ ...ದ್ದತಂತೆ."

"ಎಷ್ಟೇ ದುಡ್ಡಿದ್ರು ಆಗ್ಲೆ ಮರಿಯಾದಿ ಹೋಗಿದ್ದತಂತಲ್ಲೊ?"

"ಅದ್ಯಂಗೋಯ್ತಪ್ಪ?"

"ಅದ್ಯಾವುದೊ ಊರಲ್ಲಿ ಕುಸ್ತಿ ಆಡಿಸಿದನಂತೆ. ಗೆದ್ದ ಪೈಲವಾನ್ರಿಗೆ ಗದೆ ಕೊಟ್ಟನಂತೆ. ಆ ಗದೆ ಏನಿಲ್ಲಾ ಅಂದ್ರು ಐವತ್ತು ಸವ್ರುರುಪಾಯಿ ಬೆಲೆ ಬಾಳತಿತ್ತಂತೆ. ಧರಮಕ್ಕೆ ದಟ್ಟಿಕೊಟ್ರೆ ಹಿಂತ್ಲಿಗೋಗಿ ಮಳಹಾಕಿದ್ರು ಅನ್ನಂಗೆ ಗದೆ ಈಸಗಂಡ ಪೈಲವಾನ್ರು ಅದ ಕ್ಯರದು ನೋಡಿದ್ರಂತೆ. ಮರದ ಗದೆಗೆ ಬೆಳ್ಳಿ ರಸ ಹೂದಿದ್ರಂತೆ. ನೋಡಿದ್ಯಂಗೆ ಮ್ಯಾಜಿಕು?!"

"ತಗಳಪ್ಪ ಇದು ಒಂತರ ತಮಾಸಿ."

"ತಮಾಸಿನೆ ಚಿಗಪ್ಪ. ರಿಯಲ್ ಪ್ಯಾಕ್ಟು ತಮಾಸಿಯಂಗಾಗ್ಯದೆ. ಈಗ ಕುಸ್ತಿ ಏರ್ಪಡಿಸಿದ್ದೋರು, ಗದೆ ಕೊಡಿಸಿದ್ದೋರು ಯಲ್ಲಾರು ಡೂಪ್ಲೀಕೇಟ್ ಗದೆ ಇಟಗಂಡು ಕಾಯ್ತಾಯಿದ್ದರಂತೆ."

"ಯಾತಕೆ?"

"ಸಂಬಂಧ ಪಟ್ಟೋರ ಬುರುಡಿಗೆ ಹ್ವಡಿಯಕ್ಕೆ. ಈಗ ಈ ಮ್ಯಾಟ್ರು ಅತ್ತ ಮುಂದಾಗೇ ತಿರಿಕಂಡದಂತೆ. ಯಂಗೆ ಅಂದ್ರೆ ಎಡೂರಪ್ಪನ ಮಗ 'ನಾನು ಒಳ್ಳೆ ಬೆಳ್ಳಿ ಗದೆನೆ ಮಾಡಿಸಿ ಕೊಟ್ಟಿದ್ದಿನಿ, ಮಧ್ಯದೋರು ಏನು ಮಾಡಿದ್ರೊ ಏನೊ" ಅಂದವುನಂತೆ, ಇದಕೇನೇಳ್ತಿ?"

"ಇರಬವುದು ಬುಡು."

"ಇರಬವುದು ಅನ್ನಕ್ಕಾಯ್ತಯಿಲವಂತೆ. ಯಾಕಪ್ಪಾ ಅಂದ್ರೆ ಎಡೂರಪ್ಪನ ಮಗ ಹಂಚಿರೊ ಸೀರ ಜರಿ ಉದಿರೀ, ಸೀರೆ ಕಪ್ಪಾಯ್ತಾ ಅವಂತೆ. ಆ ಕಡೆಯಿಂದ ಸೀರೆ ಈಸಗಂಡ ಹೆಂಗಸರ ಗಲಾಟ, ಈ ಕಡೆಯಿಂದ ಡೂಪ್ಲಿಕೇಟ್ ಗದೆ ಗಲಾಟ. ಇವುರ ನಡುವೆ ಯಾರು ಕ್ಯಾಶ್ ಈಸಗಂಡಿದ್ದರೊ ಅವುರೆ ಸೇಪಾಗಿದ್ದರಂತೆ."

"ಸೀರೆ ಈಸಗಂಡು ಓಟಕದಾದ್ರೆ, ಈ ದೇಸಕೆ ಉಳಿಗಾಲಿಲ್ಲ ಬುಡು" ಎಂದ ಕಾಳಮಾವ.

"ಅಂಗರೆ ಪಂಚೆ ಈಸಗಬವುದ ದ್ವಡಪ್ಪ?"

"ಹೋಗೊ ನಿನ್ನವುನ್, ನನಿಗೆ ರೇಗತ್ತಸಬ್ಯಾಡ ಮತ್ತೆ."

"ಸಾರಿ ದ್ವಡಪ್ಪ, ಟೇಕಿಟ್ಟೀಜಿ!" ■

...ಕಾರಣಿಗಳು ಹಿಂಡುಹಿಂಡಾಗಿ ಬಿಜೆಪಿ ಪಾಳೆಯವನ್ನು ...ಕೊಳ್ಳುತ್ತಿದ್ದಾರೆ. ಕಾಂಗ್ರೆಸ್, ಜೆಡಿಎಸ್ ಮುಂತಾದ ...ಳ ಮುಖಂಡರಾಗಿದ್ದುಕೊಂಡು ಶಾಸಕ, ಮಂತ್ರಿ, ...ಥ ಪಕ್ಷದ ನಾಯಕ ಇತ್ಯಾದಿ ಸ್ಥಾನಮಾನಗಳ ...ನುಭವಿಗಳಾಗಿರುವ ರಾಜಕಾರಣಿಗಳು ಸಹ "ಈಗ ...ಗೆ ಪಕ್ಷದಲ್ಲಿ ಸೂಕ್ತ ಸ್ಥಾನಮಾನವಿರಲಿಲ್ಲ; ಅಷ್ಟೇ ...ಕೆ, ಅಲ್ಲಿ ಉಸಿರಾಡಲೂ ಕಷ್ಟವಾಗುತ್ತಿತ್ತು" ಎಂದು ...ತಾಗಿ ಅಲವತ್ತುಗೊಂಡು ಬಿಜೆಪಿಗೆ ಸೇರುತ್ತಿದ್ದಾರೆ. ...ಕ್ಷತೆ, ವಿಶ್ವಾಸ ಇತ್ಯಾದಿಗಳೆಲ್ಲ ವ್ಯಕ್ತಿಗಳ ನಡುವಿನ ...ಂಧದಲ್ಲಿ ಪಾಲಿಸಬೇಕಾದ ಮೌಲ್ಯಗಳೇ ಹೊರತು ...ಕೀಯದಲ್ಲಿ ಅಲ್ಲ ಎನ್ನುವುದು ನಿಜ. ಪ್ರಜಾಪ್ರಭುತ್ವದಲ್ಲಿ ...ಹಾರಿಕವಲ್ಲದ ಆದರ್ಶಗಳನ್ನು ಇಟ್ಟುಕೊಂಡು ನಿತ್ಯದ ...ಕೀಯ ಮಾಡಲು ಬರುವುದಿಲ್ಲ ಎಂಬುದೂ ನಿಜವೇ.

...ಅದೂ ಅಲ್ಲದೆ ಬಿಜೆಪಿ ಅಲೆಯಲ್ಲಿ ...ಪಕ್ಷಗಳು ಮುಳುಗುತ್ತಿರುವ ಹಡಗು ...ೊ ಈ ಪಕ್ಷಾಂತರಿಗಳು ಭಾವಿಸಿದ್ದಾರೆ. ...ಮುಗುವ ಹಡಗುಗಳಿಂದ ಮೊದಲು ...ವಬೀಳುವುದು ಹೆಗ್ಗಣಗಳು. ಹಾಗಾಗಿ ...ೀಗೌಡರಂತಹ ಹೆಗ್ಗಣಗಳು ಕಾಂಗ್ರೆಸ್‌ನಿಂದ ...ಬಿದ್ದರೆ ಅದರಲ್ಲಿ ಅಂತಹ ವಿಶೇಷವೇನಿದೆ?


ರಾಜಕೀಯದಲ್ಲಿ ಲಾಗಾಯ್ತಿನಿಂದಲೂ ...ಕೊಂಡು ಬಂದಿರುವ ವಿದ್ಯಮಾನ ಅದು. ...ಣಗಳು ಇರುವುದು ಕಾಂಗ್ರೆಸ್ ಪಕ್ಷದಲ್ಲಿ ...ತ್ರವಲ್ಲ ಎಂಬುದೂ ನಿಜವೇ. ಆದರೆ ...ೀಗೌಡ ಮತ್ತು ಇತರ ರಾಜಕಾರಣಿಗಳು ...ಸತಾಗಿ ನೆಲೆ ಕಂಡು ಕೊಂಡಿರುವ ...ಿಯನ್ನು ದೇಶದ ಹಲವು ಪಕ್ಷಗಳಲ್ಲಿ ...ದು ಪಕ್ಷ ಎಂದಷ್ಟೇ ಭಾವಿಸಲು ಸಾಧ್ಯವೆ? ...ಚಂದ್ರೇಗೌಡರಂತೂ ಹಾಗೆಯೇ ...ಸಿದ್ದಾರೆ. ರಾಜಕೀಯ ಸಿದ್ಧಾಂತಗಳಿಗೆ ಈ ...ದಲ್ಲಿ ಯಾವ ಅರ್ಥವೂ ಇಲ್ಲ ಎಂದು ...ದು ತಮ್ಮ ಪಕ್ಷಾಂತರ ವನ್ನು ...ರ್ಥಿಸಿಕೊಂಡಿದ್ದಾರೆ. ಆದರೆ ಬಾಬರಿ ...ದಿ ಧ್ವಂಸ, 1992 -93ರ ಮುಂಬಯಿ ...ಕಾಂಡ, 2002 ರ ಗುಜರಾತ್ ...ಂಧಗಳ ಸಂಹಾರವೂ ಚಂದ್ರೇಗೌಡರಂತಹ ...ಕಾರಣಿಗಳಿಗೆ ಬಿಜೆಪಿಯಿಂದ ಭಯ ...ಸಗಬೇಕಾಗುವುದಿಲ್ಲ ಎಂದಾಕ್ಷಣ ಸೈದ್ಧಾಂತಿಕ ...ಕಾರಣ ಅರ್ಥಹೀನವಾಗುವುದಿಲ್ಲ, ತಮ್ಮ ...ಕೆಟ್ಟ ನಿರ್ಧಾರವನ್ನು ಸಮರ್ಥಿಸಿಕೊಳ್ಳಬೇಕು ಎಂದು ...ನಿಸಹಷ್ಟು ಅಂತಃಸಾಕ್ಷಿಯಾಗ್ಯಾದರೂ ಅವರು ಉಳಿಸಿಕೊಂಡಿದ್ದಾರಲ್ಲ. ಅದಕ್ಕಾಗಿ ಅವರಿಗೆ ಕೃತಜ್ಞರಾಗಿರೋಣ.

ಆದರೆ ಕೆ.ಎಚ್. ಶ್ರೀನಿವಾಸ್ ಎಂಬ ಇನ್ನೋರ್ವ ಕಾಂಗ್ರೆಸ್ ರಾಜಕಾರಣಿ ಬಿಜೆಪಿಗೆ ನೆಗೆದದ್ದರ ಬಗ್ಗೆ ಹೇಳಲು ಒಳ್ಳೆಯ ಮಾತು ಬಿಡಿ, ಯಾವ ಮಾತೂ ಸಿಗುತ್ತಿಲ್ಲ. ಕೆ.ಎಚ್. ಶ್ರೀನಿವಾಸ್ ಕರ್ನಾಟಕ ಕಂಡ ಅತ್ಯಂತ ಸುಸಂಸ್ಕೃತ, ಸಭ್ಯ, ಸಜ್ಜನ ರಾಜಕಾರಣಿಗಳಲ್ಲಿ ಒಬ್ಬರು. ನಾನು ಚೂರೂ ವ್ಯಂಗ್ಯವಿಲ್ಲದೆ ಈ ಮಾತು ಹೇಳುತ್ತಿದ್ದೇನೆ. ರಾಜಕಾರಣಿಗಳ ಬಗ್ಗೆ ಹೀಗೆ ಸ್ಪಷ್ಟೀಕರಣ ನೀಡಬೇಕಾಗಿರುವುದು ಈ ಕಾಲದ ವ್ಯಂಗ್ಯಗಳಲ್ಲಿ ಒಂದಾಗಿರಬಹುದು. ಆದರೆ ಕೆ.ಎಚ್. ಶ್ರೀನಿವಾಸ್, ಕೇವಲ ರಾಜಕಾರಣಿಯಾಗಿರಲಿಲ್ಲ, ಅವರು ಒಬ್ಬ ಚಿಂತಕ, ಕವಿ, ಅನುವಾದಕ ಮತ್ತು ಶಿಕ್ಷಣತಜ್ಞನೆಂದೂ ಹೆಸರು ಮಾಡಿರುವವರು. ಅವರ "ಕಾನುಗೋಡು ಮನೆ" ಮತ್ತು "ಒಳಸೊನ್ನೆ, ಹೊರಸೊನ್ನೆ" ಎಂಬ ಕವನಸಂಗ್ರಹಗಳಲ್ಲಿ ಅನೇಕ ಉತ್ತಮ ಕವಿತೆಗಳಿವೆ. ಜೀನ್‌ಪಾಲ್ ಸಾರ್ತ್ರೆಯ ನಾಟಕ "ಕೀನ್" ಮತ್ತು ಅವನ ಆತ್ಮಚರಿತ್ರೆಯನ್ನು ಕನ್ನಡಕ್ಕೆ ಅವರು ಅನುವಾದಿಸಿದ್ದಾರೆ. ಈಗ ಕೆ.ಎಚ್. ಶ್ರೀನಿವಾಸ್ ಕೂಡ, ಥೇಟ್ ಡಿ.ಬಿ. ಚಂದ್ರೇಗೌಡರ ಹಾಗೆ, "ದೇಶದಲ್ಲಿ ಈಗ ಸೈದ್ಧಾಂತಿಕ ರಾಜಕೀಯದ ಕಾಲ ಮುಗಿದಿದೆ" ಎಂದು ಹೇಳಿ ಬಿಜೆಪಿ ಸೇರಿದ್ದಾರೆ. ಕಾನುಗೋಡಿನ ಕವಿಗೆ ಇನ್ನು ಮುಂದೆ ನರೇಂದ್ರ ಮೋದಿ, ಅಡ್ವಾಣಿ, ಬಾಳ್ ಠಾಕ್ರೆ, ವರುಣ್ ಗಾಂಧಿ ಮುಂತಾದವರ ಸಹ ವಾಸದಿಂದ ಕಿರಿಕಿರಿಯಾಗ ಲಿಕ್ಕಿಲ್ಲವೋ? ಶ್ರೀನಿವಾಸ್ ಅವರನ್ನು ನಾನು ವಿಧಾನ ಸೌಧದ ಮೊಗಸಾಲೆಯಲ್ಲಿ ಯಾವತ್ತೂ ನೋಡಿಲ್ಲ. ಆದರೆ ಹೆಗ್ಗೋಡಿನ ವಿಚಾರ ಗೋಷ್ಠಿಗಳಲ್ಲಿ ಒಂದೆರಡು ಬಾರಿ ನೋಡಿದ್ದೇನೆ. ಅಲ್ಲಿ ಅವರು ನೀರಿನಲ್ಲಿ ಮೀನಿರುವ ಹಾಗೆ ಸಹಜವಾಗಿ ಇದ್ದರು. ಈಗಲೂ ನನಗೆ ಶ್ರೀನಿವಾಸ್ ಬಗ್ಗೆ ಗೌರವವಿರುವುದರಿಂದ ಬಿಜೆಪಿ ಅವರಿಗೆ 'ಹಲ್ಕಾ ಸಹವಾಸ' ಎಂದೇ ಅನ್ನಿಸಬಹುದು ಎಂದು ನಾನು ಭಾವಿಸಿದ್ದೇನೆ. ಆದರೆ ವೆಂಕಯ್ಯ ನಾಯ್ಡು ಸಮ್ಮುಖದಲ್ಲಿ ಹಾರಹಾಕಿಕೊಂಡು, ಕಮಲದ ಡಿಸೈನಿನ ಶಾಲು ಹೊದೆದು ಬಿಜೆಪಿ ಸೇರಿದ ಶ್ರೀನಿವಾಸ್ ಒಂದು ಕಾರ್ಟೂನ್‌ನಂತೆ ಕಂಡು ನನಗೆ ವಿಷಾದವಾದದ್ದನ್ನು ನಾನು ಹೇಳಲೇಬೇಕು.

● ಜೆ. ರಾಜಶೇಖರ



ಸಬ್‌ಇನ್ಸ್‌ಪೆಕ್ಟರ್ ಸತೀಶ್‌ಕುಮಾರ್



ಕೆ.ಹೆಚ್.ಶ್ರೀನಿವಾಸ್



ಬ್ರಾಹ್ಮಣ ದ್ವೇಷಿ... ಯಾರು?

ಒಬ್ಬಳು ಕವಿಯತ್ರಿ ನೋಡಲು ಬಂದಳು, "ಕವನ ಎಲ್ಲಿ?" ಎಂದು ಕೇಳಿದೆ.

"ಇಲ್ಲ, ನಾನು ಕವನ ಇಟ್ಟುಕೊಂಡು ಓಡಾಡೋಲ್ಲ" ಅಂದಳು.

"ಸರಿಯಮ್ಮ, ಬಂದಿದ್ದಾದರೂ ಯಾಕೆ?" ಅಂದೆ, ಕೆಣಕಲು.

"ಸುಮ್ಮನೇ ಬಂದೆ. ಕಾರಣವಿಲ್ಲದೆ ಜನ ಪರಸ್ಪರ ನೋಡಲೂ ಕೂಡದೆ?" ಅಂದಳು. ನಾನು ಏನು ಹೇಳುವುದೆಂದು ತೋಚದೆ ಸುಮ್ಮನಾದೆ. ಆಗ ಬರೆಯುತ್ತಿದ್ದೆ. "ನಿಮಗೆ ತೊಂದರೆಯಾಗುತ್ತೆ, ಹೊರಡಲೆ?" ಅಂದಳು. "ಏನೂ ಬರೀತಿಲ್ಲ, ಸುಮ್ಮನೇ ಗೀಚ್ತಿದ್ದೇನೆ. ಪರಸ್ಪರ ನೋಟದಿಂದ ತಪ್ಪಿಸಿಕೊಳ್ಳಲು. ನಾನು ಸಾಮಾನ್ಯವಾಗಿ ಹೀಗೆಲ್ಲ ಕೇಳೋದೇ ಇಲ್ಲ, ಮಾತಾಡೋದಕ್ಕಾಗಿ ತಮಾಷೆಗೆ ಕೇಳ್ತಿದ್ದೇನೆ–

ಪತ್ರಿಕೆ: "ಈಗ ಹೇಗಿದೆ?" ಅಂದೆ.


"ನಾನು ಹೇಳೋಲ್ಲ" ಅಂದಳು.

"ಸರಿ" ಎಂದು ಸುಮ್ಮನಾದೆ.

"ಕಾರಣ ಹೇಳಲಾ?"

"ಹೇಳು."

"ನೀವು ಹಾಗೆಲ್ಲ ಬ್ರಾಹ್ಮಣರನ್ನು ಟೀಕಿಸಿ ಬರೀತೀರಲ್ಲ–ಹಾಗೆ ಐವತ್ತು ವರ್ಷದ ಹಿಂದೆ ಬರೆದಿದ್ದರೆ ಸರಿ ಇರ್ತಿತ್ತು, ಈಗ ಸರಿಹೋಗಲ್ಲ, ಅಲ್ವಾ?" ಅಂದಳು. ಈಕೆ ಮೊನ್ನೆ ನಾವು ಟಿವಿಯ ಬ್ರಾಹ್ಮಣರ ಬಗ್ಗೆ ಬರೆದದ್ದನ್ನು ನೆನಪಿಸಿದಳು.



ಮರೆಯುವ ಮುನ್ನ

▸ ಪಿ.ಲಂಕೇಶ್


ನಾನು ನಕ್ಕು ಏನೇನೋ ಹೇಳಿದೆ. ಆದರೆ ಆಕೆಯ ಮನಸ್ಸು ನೋಯಿಸಲಿಲ್ಲ. ವಿನಾಕಾರಣ ಮನುಷ್ಯರ ಮನನೋಯಿಸುವುದು, ಜಾತಿಯ ಕಾರಣಕ್ಕೆ ಮುಖಭಂಗ ಮಾಡುವುದು ದುಷ್ಟತನ. ಈ ನಮ್ಮ ಜನಕ್ಕೆ ಏನಾಗಿದೆ ಎಂಬುದೇ ಅರ್ಥವಾಗುವುದಿಲ್ಲ. ಮೊನ್ನೆ ಒಕ್ಕಲಿಗ ಕತೆಗಾರನೊಬ್ಬನ ಪುಸ್ತಕದ ಬಿಡುಗಡೆಯ ಸಭೆಯಲ್ಲಿ ಶೇ. ತೊಂಭತ್ತು ಭಾಗ ಜನ ಒಕ್ಕಲಿಗರು; ಬ್ರಾಹ್ಮಣನೊಬ್ಬನ ಕವನ ಸಂಕಲನ ಬಿಡುಗಡೆಯಾದರೆ ಅಲ್ಲಿ ಮಾತಾಡುವವರೆಲ್ಲ ಬ್ರಾಹ್ಮಣರು. ಬ್ರಾಹ್ಮಣರಿಗೆ ಗೊತ್ತಿಲ್ಲದ ವಿಷಯವೊಂದಿದೆ. ಮಂಡ್ಯದ ನಮ್ಮ ಲೇಖಕ ಎಚ್.ಎಲ್. ಕೇಶವಮೂರ್ತಿಯವರು "ನೀವು ಲಿಂಗಾಯತರನ್ನು ವಿನಾಕಾರಣ ಉಗ್ರವಾಗಿ ಟೀಕಿಸ್ತೀರಿ–ಇದು ಸರಿಯಲ್ಲ" ಎಂದು ವಾದಿಸುತ್ತಾರೆ. ಅನೇಕ ಲಿಂಗಾಯತರು ನಾನು ಲಿಂಗಾಯತ ವಿರೋಧಿ ಎಂದು ತಿಳಿಯುತ್ತಾರೆ.

ಇವೆಲ್ಲ ಗೊಡ್ಡು ವಾದ, ನಂಬಿಕೆಯ ಆಚೆ ನಿಷ್ಠುರ ಸತ್ಯವಿರುತ್ತದೆ. ಈ ಸತ್ಯವನ್ನು ವಿವರಿಸುವ ಮುನ್ನ ಒಂದು ಮಾತು ಹೇಳುತ್ತೇನೆ. ನಮ್ಮಲ್ಲಿ ಬೇಂದ್ರೆ, ನರಸಿಂಹಸ್ವಾಮಿ, ಮೂರ್ತಿರಾವ್, ಮಾಸ್ತಿ ಮುಂತಾದವರ ಬಗ್ಗೆ ಕೆಟ್ಟ ಲೇಖಕರೆಂದು ಬಂದಿಲ್ಲ, ಹಾಗೆಯೇ ಬಸವಣ್ಣ, ಹರಿಹರ, ಕಣವಿ ಮುಂತಾದವರ ಬಗ್ಗೆ, ಅದೆಲ್ಲ ಇರಲಿ. ನಮ್ಮಲ್ಲಿ ಇಡೀ ರಾಜ್ಯದ ಬಹುಪಾಲು ಸಾಕ್ಷರತೆ, ಸಂಪತ್ತು, ವರ್ಚಸ್ಸು ಇವನ್ನೆಲ್ಲ ಪಡೆದ ಮುಂದುವರಿದ ಜಾತಿಯ ಜನರು ನಿಜವಾಗಿಯೂ ಮುಂದು ವರಿಯಬೇಕಾದ, ಪರಿಪಕ್ವವಾಗ ಬೇಕಾದ ಏಕಮಾತ್ರ ಮಾರ್ಗ ಎಲ್ಲ ಜಾತಿಗಳನ್ನು ಮೇಲೆತ್ತಲು, ಆತ್ಮ ವಿಶ್ವಾಸ ತುಂಬಲು, ಪ್ರೀತಿ ತೋರಲು ಪ್ರಯತ್ನಿಸುವುದು, ತಮ್ಮ ಜಾತಿಯವರ ಕೆನ್ನೆ ಕಚ್ಚುತ್ತ, ಕಚ್ಚಿದಂತೆ ತಮ್ಮ ಜಾತಿಯವ ರೊಂದಿಗೆ ಸಹಕರಿಸುತ್ತಾ ಹೋಗುವ ಮೂಲಕ ಅಲ್ಲ, ಪರಿಪಕ್ವ ತೆಯ ಲಕ್ಷಣ ದಿಟ್ಟ ವೈಯಕ್ತಿಕತೆ, ವೈಚಾರಿಕತೆ ಮತ್ತು ಸಾಮಾಜಿಕ ಹೊಣೆ- ಹೀಗೆಂದು ತಮ್ಮ ಮುಂದುವರಿದ ಜಾತಿಯವರನ್ನು ಬೇಕೆಂತಲೇ ಟೀಕಿಸುವುದು, ಮನನೋಯಿಸುವುದು ಕಷ್ಟ. ಆದರೆ ಇಲ್ಲಿ ಆಗುತ್ತಿರುವುದನ್ನು ನೋಡಿ. ಮುಂದುವರಿದ ಜಾತಿ ಎಂದುಕೊಳ್ಳುವ ಜನ ತಮ್ಮ ಸ್ವಾರ್ಥ ಮತ್ತು ಜಾತೀಯತೆಯಲ್ಲೂ ಮುಂದುವರಿಯುತ್ತಿದ್ದಾರೆ.

ಸಹಜವಾಗಿ, ಸ್ನೇಹದಿಂದ, ಈ ಸಮಾಜದ ಸಮತೋಲನ ಸುರಕ್ಷಿತವಾಗಿರುವಂತೆ ಸಾವಿರಾರು ವರ್ಷಗಳಿಂದ ಅಸಹಾಯಕತೆ, ಅವಮಾನದಲ್ಲಿ ನರಳುತ್ತಿರುವವರಲ್ಲಿ ಧೈರ್ಯ ಮೂಡುವಂತೆ ವರ್ತಿಸಬೇಕಾದ ಜನ ಕ್ಷುದ್ರ ಜಂತುಗಳಂತೆ ವರ್ತಿಸುತ್ತಾರೆ. ಇಲ್ಲಿಯ ಜಗದ್ಗುರುಗಳಿಗೆ ತಮ್ಮ ಜಾತಿಯ ಜನರೇ ಮನುಷ್ಯರು, ಇಲ್ಲಿಯ "ಮುಂದುವರಿದ" ವಿದ್ವಾಂಸರಿಗೆ ತಮ್ಮವರೇ ಸುಶಿಕ್ಷಿತರು. ಇಂಥ ಪರಿಸರದಲ್ಲಿ ಸಾಹಿತ್ಯದಲ್ಲಿ ಒಬ್ಬ ದಮನಕ್ಕೊಳಗಾದ ಹುಡುಗ, ಹುಡುಗಿಯ ವಿಶಿಷ್ಟ ಧ್ವನಿ ಹೊರಟರೆ ಇವರಿಗೆ ತಿಳಿಯುವುದಿಲ್ಲ; ರಾಜಕೀಯದಲ್ಲಿ ಹಿಂದುಳಿದವರ ವಿಶಿಷ್ಟ ಕ್ರಿಯೆ, ತೊಳಲಾಟ ಅರ್ಥವಾಗುವುದಿಲ್ಲ. ಲಿಂಗಾಯತರು ನಾಚಿಕೆಯೇ ಇಲ್ಲದೆ ಹಿಂದುಗಟ್ಟಿ ನಿಲ್ಲುತ್ತಾರೆ; ಬ್ರಾಹ್ಮಣರು ನಿರ್ಲಜ್ಜರಾಗಿ ಇಲ್ಲಿಯ ವೃತ್ತಪತ್ರಿಕೆ, ದೂರದರ್ಶನ, ರೇಡಿಯೋ, ಎಲ್ಲದರಲ್ಲಿ ಕೂತು ಎಲ್ಲರಿಗೂ ಕೇಳಿಸುವಂತೆಯೇ 'ಬ್ರಾಹ್ಮಣನಲ್ಲದವನಿಗೆ ಇಲ್ಲಿ ಪ್ರವೇಶವಿಲ್ಲ' ಎಂದು ಹೇಳುತ್ತಾರೆ. ಅಧಿಕಾರದ ಕಡಿವಾಣ, ಪ್ರಭಾವದ ಸೂತ್ರಗಳನ್ನೆಲ್ಲ ಹಿಡಿದಿರುವ ಇವರು ಹೀಗೆ ವರ್ತಿಸತೊಡಗಿದರೆ ಈ ಸಮಾಜಕ್ಕೆ ಭವಿಷ್ಯ ಎನ್ನುವುದು ಇದೆಯೆ?

ಕಠೋರ ಸತ್ಯವನ್ನು ಇವತ್ತು ಎದುರಿಸಬೇಕಾದವರು ಬ್ರಾಹ್ಮಣರು, ಲಿಂಗಾಯತರು, ಒಕ್ಕಲಿಗರು; ಅಂದರೆ ಈ ರಾಜ್ಯದಲ್ಲಿ ಕಠೋರ ಸತ್ಯ ಏನೆಂದರೆ ಕೇವಲ ಹಣ, ಅಕ್ಷರತೆ, ಸಂಪತ್ತು ಯಾವನಿಗೂ ಅರ್ಥಪೂರ್ಣ ಬದುಕು ನೀಡುವುದಿಲ್ಲ, ಅತ್ತಇತ್ತ ನೋಡುವಷ್ಟರಲ್ಲಿ ಕರಗಿಹೋಗುವ ಈ ಜೀವ, ಜೀವನದಲ್ಲಿ ಸಮಾಜದ ಸಮತೋಲನ ತಪ್ಪಿದೊಡನೆ ವ್ಯಕ್ತಿಯ ಸಮತೋಲನ ಇಲ್ಲವಾಗುತ್ತದೆ.

ನಾವಾಗಲಿ, ಪತ್ರಿಕೆಯಾಗಲಿ ಯಾವ ಜಾತಿಯನ್ನೂ, ವ್ಯಕ್ತಿಯನ್ನೂ ವಿನಾಕಾರಣ ಟೀಕಿಸುವುದಿಲ್ಲ, ಮೇಲಿನ ಕಠೋರ ಪ್ರಶ್ನೆಯಿಂದಾಗಿ ಹೇಳಬೇಕಾದ್ದನ್ನು ಹೇಳುವುದು ಅನಿವಾರ್ಯವಾಗುತ್ತದೆ. ಒಬ್ಬ ಇಂಜನಿಯರ್ ವಿಶ್ವೇಶ್ವರಯ್ಯನವರನ್ನು ಪ್ರಶಂಸಿಸಿದಾಗ, ಒಬ್ಬ ನವರತ್ನ ರಾಮರಾಯರ ಜೀವನ ಪ್ರೇಮವನ್ನು ಮೆಚ್ಚಿದಾಗ.... ಅದೆಲ್ಲ ಹೋಗಲಿ, ಮೊನ್ನೆ ಎಂ.ಎಸ್. ರಾಮಸ್ವಾಮಿಯವರ ಕುತೂಹಲ, ಇತಿಹಾಸ ಪ್ರಜ್ಞೆಯ ಬಗ್ಗೆ ಬರೆದಾಗ, ಹೀಗೆಯೇ ನೂರಾರು ಜನ ಬ್ರಾಹ್ಮಣರು, ಲಿಂಗಾಯತರ ಬಗ್ಗೆ ಬರೆದಾಗ... ಅದನ್ನೆಲ್ಲ ಬರೆಸಿದ್ದು ಜಾತಿಯತೆಯಲ್ಲ, ಜಾತಿ ಪ್ರೇಮವಲ್ಲ, ಕೇವಲ ಸತ್ಯನಿಷ್ಠೆ. ಮುಂದುವರಿದ ಜಾತಿಯ ಜನರ ಕೊಳಕುತನದ ಬಗ್ಗೆ ಬರೆಯುವುದು ಕೂಡ ಈ ಕಾರಣದಿಂದಲೇ. ಚಿಕ್ಕ ಟೀಕೆಗೆ ಕೂಡ ಮುಂದುವರಿದ ಜಾತಿಗಳು ಬೆಚ್ಚಿಬೀಳುವುದು ಅವರ ನಿರ್ವೀರ್ಯತೆ ಮತ್ತು ಪಾಪಪ್ರಜ್ಞೆಯನ್ನು ಮಾತ್ರ ತೋರುತ್ತದೆ.



ನನ್ನೆದುರು ಕೂತಿದ್ದ ಕವಿಯತ್ರಿ ಗಮನಿಸಿರಬಹುದು... ಕೇವಲ ಅಕ್ಷರಜ್ಞಾನ, ವ್ಯಾಕರಣಜ್ಞಾನ ಯಾವನನ್ನು ಅರ್ಥಪೂರ್ಣ ಸಾಹಿತಿಯನ್ನಾಗಿಸಿಲ್ಲ; ಕೇವಲ ಸಂಪತ್ತು, ಸ್ವಪ್ರತಿಷ್ಠೆ ಜಾತೀಯತೆ ಯಾವ ಜಾತಿಯವನನ್ನೂ ಮಾನವೀಯಗೊಳಿಸುವುದಿಲ್ಲ. ದಿನನಿತ್ಯದ ಕ್ರಿಯೆಗಳಲ್ಲಿ ಮುಳುಗಿರುವ ನಾವೆಲ್ಲ ಇದನ್ನು ನೆನಪಿನಲ್ಲಿಡಬೇಕು. ಇದು ನನ್ನ ನಮ್ರ ಹೇಳಿಕೆ.


–ಜುಲೈ 7, 1991


ಬೆಳಗಾವಿ: "ಬಣಜಿಗರ ಸರ್ವಾಧಿಕಾರ ಸಾಕು- ಪಂಚಮಸಾಲಿಗಳಿಗೆ ಅಧಿಕಾರ ಬೇಕು"


ಇದು ಲಿಂಗಾಯತರ ಫತ್ವಾ!


ಬೆಳಗಾವಿ ಲೋಕಸಭಾ ಕ್ಷೇತ್ರ ಈಗ ರಂಗೇರಿದೆ. ಕೊನೆಗೂ ಭಾಷೆಯ ಗೊಂದಲದಿಂದ ಹೊರಬಂದು ಜಾತಿಯ ಲೆಕ್ಕಾಚಾರಕ್ಕೆ ನಿಂತಿದೆ. ಕ್ಷೇತ್ರದಲ್ಲಿ ಪ್ರಬಲವಾಗಿರುವ ಲಿಂಗಾಯತ ಪಂಚಮಸಾಲಿಗಳು, ಬಿಜೆಪಿಗೆ ಡಿವೋರ್ಸ್ ಕೊಟ್ಟು ಜೆಡಿಎಸ್ ಜೊತೆ ಅಫೇರ್ ಶುರುಹಚ್ಚಿಕೊಂಡಿದ್ದಾರೆ. ಇದಕ್ಕೆ ಸ್ಪಷ್ಟ ಕಾರಣ ಯಡಿಯೂರಪ್ಪನ ಬಣಜಿಗ ಪ್ರೀತಿ. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬೆಳಗಾವಿ ಭಾಗದಲ್ಲಿ ಪಂಚಮಸಾಲಿಗಳೇ ಬಹುಸಂಖ್ಯಾತರಾಗಿದ್ದರೂ ಅವರನ್ನು ರಾಜಕೀಯವಾಗಿ ತುಳಿಯುವುದಕ್ಕೆ ಯಡ್ಡಿ ನೇತೃತ್ವದ ಬಿಜೆಪಿ ಸಂಚು ಮಾಡುತ್ತಿರುವುದು, ಅದೇ ಹೊತ್ತಿನಲ್ಲಿ ಹಾವೇರಿಯಲ್ಲಿ ಉದಾಸಿ, ಹುಬ್ಬಳ್ಳಿಯಲ್ಲಿ ವಿಜಯ್ ಸಂಕೇಶ್ವರ, ಶಂಕ್ರಣ್ಣ ಮುನವಳ್ಳಿ, ಇನ್ನೊಂದು ಗುಂಪಿನ ಜಗದೀಶ್ ಶೆಟ್ಟರ್, ಬೆಳಗಾವಿಯಲ್ಲಿ ಸುರೇಶ ಅಂಗಡಿ ಯಂಥ ಬಣಜಿಗರನ್ನ ಸಾಲುಸಾಲಾಗಿ ಬೆಳೆಸುತ್ತಿರುವುದು ಪಂಚಮಸಾಲಿಗಳನ್ನು ಕೆರಳಿಸಿದೆ. ರಾಜ್ಯದಲ್ಲಿ 14 ಜನ ಪಂಚಮಸಾಲಿ ಶಾಸಕರಿದ್ದರೂ ಕೇವಲ ಮುರುಗೇಶ್ ನಿರಾಣಿಗೆ ಮಾತ್ರ ಮಂತ್ರಿ ಪದವಿ ಕೊಟ್ಟು ಮೂಗಿಗೆ ತುಪ್ಪ ಸವರಿದ್ದನ್ನು ಅವರ್ಯಾರೂ ಮರೆತಿಲ್ಲ. ಬಿಜೆಪಿ ಪಂಚಮಸಾಲಿಗಳಿಗೆ ಮಾಡಿದ ಅನ್ಯಾಯ, ದ್ರೋಹವನ್ನು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತೀರಿಸಿಕೊಳ್ಳಲು ರಾಜ್ಯಾದ್ಯಂತ ಪಂಚಮಸಾಲಿಗಳು ಪ್ರಯತ್ನಿಸುತ್ತಿದ್ದಾರೆ. ಅದೀಗ ಬೆಳಗಾವಿ ಕ್ಷೇತ್ರದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ತಪ್ಪನ್ನು ಮಾಡುವುದಕ್ಕೆ ಅವರು ಸಿದ್ಧರಿಲ್ಲ. ಪಂಚಮಸಾಲಿಗಳಿಗೆ ಮೋಸ ಮಾಡಿದ ಬಿಜೆಪಿಯನ್ನು ಪರ್ಮನೆಂಟಾಗಿ ಮನೆಗೆ ಕಳಿಸುತ್ತೇವೆ ಎಂದು ಬಹಿರಂಗವಾಗಿ ಹೇಳಿಕೊಳ್ಳುತ್ತಿರುವುದು ಬಿಜೆಪಿಯ ಸೋಲಿನ ಪಟ್ಟಿಯಲ್ಲಿ ಬೆಳಗಾವಿಯೊಂದನ್ನು ಸೇರಿಸಿಕೊಳ್ಳುವಂತಾಗಿದೆ.

ತಾನು ಎಂ.ಪಿ. ಆಗುತ್ತೇನೆ ಎಂದು ಸುರೇಶ ಅಂಗಡಿ ಕನಸಿನಲ್ಲೂ ಎಣಿಸಿರಲಿಲ್ಲ. ಕಳೆದ ಬಾರಿ ಈತ ಬಿಜೆಪಿ ಅಭ್ಯರ್ಥಿಯಾದಾಗ ಇವನ ಗೆಲುವಿಗೆ ಪ್ರಮುಖ ಆಸರೆಯಾಗಿದ್ದು ವಾಜಪೇಯಿ ಹವಾ, ಶಿವಸೇನಾ, ಎಂಇಎಸ್ ಬೆಂಬಲ, ಜೊತೆಗೆ ಜಿಲ್ಲೆಯಲ್ಲಿರುವ ಎಲ್ಲಾ ಲಿಂಗಾಯತ ಮಠಗಳು ಬಿಜೆಪಿ ಪ್ರಚಾರ ಕಚೇರಿಗಳಾಗಿ ಕೆಲಸ ಮಾಡಿದ್ದು. ಇಷ್ಟೆಲ್ಲಾ ಆದಮೇಲೆ ಹೆಚ್ಚು ಖರ್ಚು ಮಾಡದೆ, ಕೇಸರಿ ಶಾಲೊಂದನ್ನು ಹಾಕ್ಕೊಂಡೆ ಗೆದ್ದು ಬಂದ ಅಂಗಡಿ ಮುಂದೆ ಮಾಡಿದ್ದೇ ಬೇರೆ. ತನಗೆ ಕನ್ನಡಿಗರಿಂದ ಏನಾದರೂ ತೊಂದರೆಯಾದಾಗ ಮಾತ್ರ ಎಂಇಎಸ್ ಮತ್ತು ಶಿವಸೇನಾ ಜನರನ್ನ ಹತ್ತಿರ ಬಿಟ್ಟುಕೊಳ್ಳುವುದು ಉಳಿದ ಸಮಯದಲ್ಲಿ ನೀವು ಯಾರು ಎಂದು ಅವರನ್ನೇ ಕೇಳುವುದು, ಆವಾಗಾವಾಗ ಮರಾಠಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು "ಏ ಬೆಳಗಾಂ ಮಾಜಾ ನಹೀ ತುಮಚಾ ಹೈ" ಎಂದು ಡೈಲಾಗ್ ಡೆಲಿವರಿ ಮಾಡಿಕೊಂಡೇ ಬದುಕಿದ್ದ ಅಂಗಡಿಗೆ ಇದರ ಪರಿಣಾಮ ಗೊತ್ತಾಗಿದ್ದೇ ಮೊನ್ನೆಯ ಭಗವಾಧ್ವಜ ಪ್ರಕರಣದಿಂದ.


ಸುರೇಶ್ ಅಂಗಡಿ


ಎ.ಬಿ. ಪಾಟೀಲ್


ಬಸವರಾಜ್‌ಬೊಮ್ಮಾಯಿ


ಸಂಜಯ್ ಪಾಟೀಲ್


ಬಾ.ಜಾರಕಿಹೊಳಿ


ಅಮರಸಿಂಹ

ಬಿಜೆಪಿ ಅಭ್ಯರ್ಥಿ ತಾನೇ ಎಂದು ಮೊದಲ ಪಟ್ಟಿಯಲ್ಲಿ ಘೋಷಣೆಯಾಗಿದ್ದೇ ತಡ ಅರೆಹುಚ್ಚನಾಗಿದ್ದ ಸುರೇಶ ಅಂಗಡಿ ಏನೆಲ್ಲಾ ಮಂಗಾಟವಾಡಿ ಅಡ್ವಾನ್ಸ್ ಆಗಿ ಉಗಿಸಿಕೊಂಡಿದ್ದ. ಅದೂ ಸಾಲದೆಂಬಂತೆ ಈಗ ಪಂಚಮಸಾಲಿಗಳ ಫತ್ವಾ ಕೇಳಿ ಅವನಿಗೆ ನಡುಕ ಶುರುವಾಗಿಬಿಟ್ಟಿದೆ. "ಹೇಗೂ ಸೋಲುತ್ತೇನೆ, ದುಡ್ಡು ಯಾಕೆ ಕಳೆದುಕೊಳ್ಳಲಿ" ಎಂದು ಹತ್ತು ರೂಪಾಯಿ ಖರ್ಚು ಮಾಡಲು ಹಿಂದೇಟು ಹಾಕುತ್ತಿದ್ದಾನೆ. ಪ್ರಚಾರಕ್ಕೆ ಹೋಗಿ ವೋಟು ಕೇಳುವ ಬದಲು ಸೋತ ಮೇಲೆ ಕೆಲಸ ಏನು ಮಾಡಬೇಕು ಎಂಬ ಆಲೋಚನೆಯಲ್ಲಿ ಅಂಗಡಿ ಇರುವಂತಿದೆ ಅವನ ಮುಖಲಕ್ಷಣ.

ಕಾಂಗ್ರೆಸ್ ಟಿಕೆಟ್ ರೇಸ್‌ನಲ್ಲಿದ್ದ ಸಂಕೇಶ್ವರದ ಎ.ಬಿ. ಪಾಟೀಲ "ಒಂದು ವೇಳೆ ಕಾಂಗ್ರೆಸ್ ಟಿಕೆಟ್ ಕೊಡದಿದ್ದರೆ ಜೆಡಿಎಸ್‌ಗೆ ಹೋಗುತ್ತೇನೆ" ಎಂದು ಪಾರ್ಟಿ ಮೀಟಿಂಗ್‌ನಲ್ಲೇ ಹೇಳಿದ್ದರು. ಈಗ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಮೂಲಕ ಅಂದಂತೆ ನಡೆದುಕೊಂಡಿದ್ದಾರೆ. ಪ್ರಬಲ ಲಿಂಗಾಯತ ನಾಯಕನಾಗಿರುವ ಎ.ಬಿ.ಪಾಟೀಲನಿಗೆ ಪಂಚಮಸಾಲಿ ಸಮುದಾಯ ಬಹಿರಂಗ ಬೆಂಬಲ ಘೋಷಿಸಿದೆ. ಬೆಳಗಾವಿ ಕ್ಷೇತ್ರದಲ್ಲಿ 4.70 ಲಕ್ಷ ಪಂಚಮಸಾಲಿ ಮತದಾರರಿದ್ದು ಅವರೆಲ್ಲಾ ಈಗ ಪಾಟೀಲರ ಬೆಂಬಲಕ್ಕೆ ನಿಂತಿದ್ದಾರೆ; ತಮ್ಮ ಮಂದಿ ಅಧಿಕಾರ ಅನುಭವಿಸಲಿಲ್ಲವಲ್ಲಾ ಎಂಬ ಎರಡು ದಶಕಗಳ ಕೊರಗನ್ನು ತೀರಿಸಿಕೊಳ್ಳಲು ಅಣಿಯಾಗಿದ್ದಾರೆ. ಯಡ್ಡಿ ಮಾತುಕಟ್ಟಿಕೊಂಡು ಸುರೇಶ ಅಂಗಡಿಯನ್ನು ಒಂದು ಅವಧಿ ಗೆಲ್ಲಿಸಿದ್ದು ಅವರಿಗೆ ಸಾಕುಸಾಕಾಗಿಹೋಗಿದೆ. ಈ ಬಾರಿ ಮತ್ತದೇ ಸುಮ್ಮನಿರದೆ ಇರುವೆ ಬಿಟ್ಟುಕೊಂಡರು ಅಂತಾರಲ್ಲಾ ಹಾಗೆ, ಶಾಸಕ ಸಂಜಯ ಪಾಟೀಲನ ಮಾತುಕಟ್ಟಿಕೊಂಡು ಮರಾಠಿ ಮತಗಳ ಆಮಿಷಕ್ಕಾಗಿ ಪಾಲಿಕೆಯ ನೂತನ ಕಟ್ಟಡದ ಮೇಲೆ ನ್ಯಾಯಾಲಯದ ಆದೇಶ ಧಿಕ್ಕರಿಸಿ ಮರಾಠಿ ಭಗವಾಧ್ವಜ ಹಾರಿಸಲು ಹೋದ. ಅದಕ್ಕಾಗಿ ಕನ್ನಡಿಗರಿಂದ ದ್ರೋಹಿ ಎಂದು ಕರೆಯಿಸಿಕೊಂಡು ಕನ್ನಡಿಗರ ವೋಟು ಕೈಕೊಡುತ್ತವೆ ಎಂದಾಗ ಕನ್ನಡಿಗರ ಕೈಕಾಲಿಗೆ ಬಿದ್ದು ಕ್ಷಮೆಯಾಚಿಸಲು ಮುಂದಾದ. ಅಂಗಡಿಯ ಈ ಡ್ರಾಮಾದಿಂದ ಕಂಗಾಲಾದ ಎಂಇಎಸ್-ಶಿವಸೇನೆಗಳು ಇವನನ್ನ ಷಂಡ ಎಂದು ಕರೆದವಲ್ಲದೆ, ಸದಾ ಭಾಷಾಂಧತೆಯ ಬೆಂಕಿ ಕಾರುವ ತರುಣ ಭಾರತಿ, ಸಕಾಲ ಮತ್ತು ಠಾಕ್ರೆಯ ಸಾಮ್ನಾ ಪತ್ರಿಕೆಗಳು ಅಂಗಡಿಯ ಪುಂಡಾಟಿಕೆಗಳನ್ನು ಪ್ರತಿ ದಿನ ಪ್ರಕಟಿಸುವುದರೊಂದಿಗೆ ಬಹಿರಂಗ ಸಮರಕ್ಕೆ ನಿಂತಿವೆ.

ಒಂದೂವರೆ ಲಕ್ಷದಷ್ಟಿರುವ ಮರಾಠಿಗರ ಮತಗಳನ್ನು ಅಂಗಡಿಗೆ ಹಾಕದಂತೆ ತಮ್ಮ ಜನರಿಗೆ ಹೇಳುತ್ತಿವೆ. ಇದರಿಂದ ಸಾಲಿಡ್ ವೋಟ್ ಬ್ಯಾಂಕೊಂದನ್ನು ಅಂಗಡಿ ಕಳೆದುಕೊಂಡಂತಾಗಿದೆ. ಅತ್ತ ಮರಾಠಿಗರ ಮತಗಳೂ ಇಲ್ಲ, ಇತ್ತ ಕನ್ನಡಿಗರ ಮತಗಳೂ ಇಲ್ಲ, ಇನ್ನೊಂದೆಡೆ ಲಿಂಗಾಯತರ ಮತಗಳೂ ಇಲ್ಲ ಅನ್ನೋ ಪರಿಸ್ಥಿತಿ ಅಂಗಡಿಯದ್ದು.

'ಶೆಟ್ಟಿ ಬುದ್ಧಿ ಚಟ್ಟದ ಮೇಲೆ ಹೋದರೂ ಬಿಡಲ್ಲ' ಅನ್ನೊ ಹಾಗೆ ಅಂಗಡಿ ಎಂ.ಪಿ.ಯಾದ ಮೇಲೂ ತನ್ನ ಹರಾಮಿ ವ್ಯಾಪಾರಿತನವನ್ನು ಬಿಡಲಿಲ್ಲ. ಸದಾಶಿವನಗರದ ಲಕ್ಷ್ಮಿ ಕಾಂಪ್ಲೆಕ್ಸಿನ ಮೂಲಕ ಎಲ್ಲಾ ಡೀಲ್‌ಗಳನ್ನು ಕುದುರಿಸಲು ಶುರುಹಚ್ಚಿಕೊಂಡಿದ್ದ. ವಾಸ್ತವದತ್ತ ಸಿಮೆಂಟ್ ಏಜೆನ್ಸಿ ವ್ಯಾಪ್ತಿಯನ್ನು ಬೆಳಗಾವಿಯಿಂದ ಇಡೀ ಉತ್ತರ ಕರ್ನಾಟಕ ವ್ಯಾಪ್ತಿಗೆ ವಿಸ್ತರಿಸಿಕೊಂಡು ವಾಸವದತ್ತಾ ಸಿಮೆಂಟ್ ಕಾರ್ಖಾನೆಗೆ ಎರಡು ಕೋಟಿ ಫಂಡ್ ಕೊಟ್ಟ. ಜಿಲ್ಲೆಯಲ್ಲಿ ತನ್ನ ಅನುದಾನದಲ್ಲಿ ನಡೆಯುವ ಕಾಮಗಾರಿಗಳು ತನ್ನ ಏಜೆನ್ಸಿಯ ಸಿಮೆಂಟ್ ಮೂಲಕವೇ ಆಗಬೇಕು ಎಂದು ಫರ್ಮಾನು ಹೊರಡಿಸಿದ. ಜಿಲ್ಲಾಧಿಕಾರಿ ಅಧ್ಯಕ್ಷತೆಯ ನಿರ್ಮಿತಿ ಕೇಂದ್ರ-ಭೂಸೇನಾ ನಿಗಮದ ಮೂಲಕ ಕಳಪೆ ಕಾಮಗಾರಿ ನಡೆಸಿ ಕುಖ್ಯಾತಿ ಗಳಿಸಿದ್ದು ಅಂಗಡಿ ಸಾಹೇಬನ ದೊಡ್ಡ ಸಾಧನೆ. ಸದಾ ಬಣಜಿಗ ನಿಷ್ಠೆಯನ್ನು ಮೆರೆದು ತನ್ನ ಸಂಬಂಧಿಕರನ್ನೆಲ್ಲಾ ಗುತ್ತಿಗೆದಾರರನ್ನಾಗಿ ತಯಾರಿಸಿ ಅನುದಾನವನ್ನೆಲ್ಲಾ ಅವರ ಜೇಬಿಗೆ ಸುರಿದ. ಕದ್ದ ರೊಕ್ಕದಲ್ಲಿ ಪೊಗದಸ್ತಾಗಿ ಮೇಯುವವರಷ್ಟೇ ಈಗ ಅಂಗಡಿ ಬೆನ್ನಿಗಿದ್ದಾರೆ. ಅವರೆಲ್ಲಾ ಬಣಜಿಗರು, ಸ್ಥಳೀಯ ಬಿಜೆಪಿ ಲೀಡರ್ ಸಂಜೀವ ಹನುಮಸಾಗರ ಎಂಬ ದಾರಿ ತಪ್ಪಿದ ಮಗನಿಂದ ಸಂಪೂರ್ಣ ಹಾದಿ ತಪ್ಪಿರುವ ಸುರೇಶ ಅಂಗಡಿಗೀಗ ಅಕ್ಷರಶಃ ಅರಿವಾಗಿರಬೇಕು. ವೋಟು ಹಾಕಿದ ಪಂಚಮಸಾಲಿಗಳನ್ನು ಮರೆತು ನೋಟಿನ ಹಿಂದೆ ಬಿದ್ದಿದ್ದ ಅಂಗಡಿಯ ಇವತ್ತಿನ ಈ ಪರಿಸ್ಥಿತಿ ಕಂಡು ಯಾವೊಬ್ಬ ಬಿಜೆಪಿ ಶಾಸಕನೂ ಪ್ರಚಾರಕ್ಕೆ ಬರುತ್ತಿಲ್ಲ. ಗೋಕಾಕದ ಸಚಿವ ಬಾಲಚಂದ್ರ ಜಾರಕಿಹೊಳಿ ಬಾಲ ಮುದುರಿಕೊಂಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ಬೊಮ್ಮಾಯಿ "ಸೋಲಲಿ ಮಗಾ, ಬುದ್ಧಿ ಬರತೈತಿ" ಎಂದಿದ್ದಾನಂತೆ. ಬೆಳಗಾವಿಯ ಅಷ್ಟೂ ಶಾಸಕರನ್ನು ಆಟ ಆಡಿಸಿಕೊಂಡು ಖುಷಿಪಟ್ಟಿದ್ದ ಅಂಗಡಿಗೀಗ ಬತ್ತಿ ಇಡಲು ಕಿತ್ತೂರಿನ ಸುರೇಶ ಮಾರಿಹಾಳ, ಸವದತ್ತಿಯ ಆನಂದ ಮಾಮನಿ, ಬೆಳಗಾವಿಯ ಸಂಜಯ ಪಾಟೀಲರು ಕಾದಿದ್ದಾರೆ. ಅವರಲ್ಲೆ ಮೊನ್ನೆ ಅಂಗಡಿಯೊಂದಿಗೆ ಏಕವಚನದಲ್ಲೇ ಜಗಳವಾಡಿ ಸಂಬಂಧ ಕೆಡಿಸಿಕೊಂಡಿದ್ದಾರೆ.

ಅಂಗಡಿಯ ಎಲ್ಲಾ ಲೀಲೆಗಳನ್ನು ನೋಡಿರುವ ಪಂಚಮಸಾಲಿಗಳು ಸೇರಿದಂತೆ ಉಳಿದ ಪಂಗಡಗಳು ಈ ಬಾರಿ ಆತನ ಸೋಲಿಗಾಗಿ ಶ್ರಮಿಸುವ ಪಣ ತೊಟ್ಟಿವೆ. ಈಗಾಗಲೇ ಈ ಕುರಿತಂತೆ ಹಲವೆಡೆ ಸಭೆ ಕೂಡಾ ಆಗಿವೆ. ಬೆಳಗಾವಿ ಲೋಕಸಭಾ ವ್ಯಾಪ್ತಿಗೆ ಬರುವ ಗೋಕಾಕದ ದುರದುಂಡೇಶ್ವರ ಮಠದ ಶ್ರೀಗಳು, ಬೈಲಹೊಂಗಲ ಮಠದ ದ್ವಾರಕೇಶ್ವರ ಸ್ವಾಮಿಗಳು, ಕಾರಂಜಿ ಮಠದ ಗುರುಸಿದ್ದ ಸ್ವಾಮಿಗಳು, ನಾಗನೂರು ಮಠದ ಸಿದ್ದರಾಮ ಸ್ವಾಮಿಗಳು ಅಧಿಕೃತ ಫತ್ವಾದೊಂದಿಗೆ ಹೊರಬಿದ್ದಿದ್ದಾರೆ. "ಬಣಜಿಗರ ಸರ್ವಾಧಿಕಾರ ಸಾಕು, ಪಂಚಮಸಾಲಿಗಳಿಗೆ ಅಧಿಕಾರ ಬೇಕು" ಎಂಬ ಸ್ಲೋಗನ್ ಇಟ್ಟುಕೊಂಡು ಪಂಚಮಸಾಲಿಗಳ ಏಕೈಕ ಅಭ್ಯರ್ಥಿ ಜೆಡಿಎಸ್‌ನ ಎ.ಬಿ. ಪಾಟೀಲರ ಪರ ಪ್ರಚಾರಕ್ಕೆ ನಿಂತಿದ್ದಾರೆ. "ನಮ್ಮದು ಬ್ರಾಹ್ಮಣರ ಪಕ್ಷವಲ್ಲ, ಲಿಂಗಾಯತರ ಪಕ್ಷ" ಎಂದು ಹೇಳಿದ್ದ ಮುಖ್ಯಮಂತ್ರಿ ಯಡ್ಡಿಯ ತಳಕ್ಕೆ ಇಲ್ಲಿಯ ಸ್ವಾಮಿಗಳೇ ಬತ್ತಿ ಇಡಲು ತಾಲೀಮು ನಡೆಸಿದ್ದಾರೆ. ಇದೇ ಬಿಜೆಪಿಗೆ ಅಡ್ವಾನ್ಸ್ ಸೋಲಿನ ಗಿಫ್ಟ್.

ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ದುಡುಕಿದೆ. ಪೈಪೋಟಿಯಲ್ಲಿದ್ದ ಅಮರಸಿಂಹ ಪಾಟೀಲ, ಲಕ್ಷ್ಮಿ ಹೆಬ್ಬಾಳ್ಕರಗಳಲ್ಲಿ ಎ.ಬಿ. ಪಾಟೀಲ ಸ್ವಲ್ಪ ತೂಕವಿದ್ದ ಮನುಷ್ಯ ಜಾತಿ ಲೆಕ್ಕಾಚಾರದಲ್ಲೂ ಮೇಲಿದ್ದರು. ಕಳೆದ ಬಾರಿ 84 ಸಾವಿರ ಮತಗಳ ಅಂತರದಿಂದ ಸೋತಿದ್ದ ಅಮರಸಿಂಹ ಪಾಟೀಲರನ್ನು ಕಾಂಗ್ರೆಸ್ ತನ್ನ ಅಧಿಕೃತ ಅಭ್ಯರ್ಥಿ ಎಂದು ಕಣಕ್ಕಿಳಿಸಿದೆ. ಇದರ ಪರಿಣಾಮದಿಂದ ಕಾಂಗ್ರೆಸ್ಸಿನಲ್ಲಿದ್ದ ಎ.ಬಿ. ಪಾಟೀಲ ಜೆಡಿಎಸ್ ಸೇರಿ ಬಿ ಫಾರ್ಮದೊಂದಿಗೆ ಫೀಲ್ಡಿಗಿಳಿದುಬಿಟ್ಟರು. ಇದು ಕಾಂಗ್ರೆಸ್ ಮಾಡಿಕೊಂಡ ಎಡವಟ್ಟು ಎಂದರೆ ತಪ್ಪಾಗಲಾರದು.

ಅಮರಸಿಂಹ ಪಾಟೀಲ ಈ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವುದು ಮೂರನೇ ಬಾರಿಗೆ. ಎಸ್.ಬಿ.ಸಿದ್ನಾಳ, ಪ್ರಭಾಕರ ಕೋರೆ 99ರಲ್ಲಿ ಸ್ಪರ್ಧಿಸಲು ಹಿಂದೇಟು ಹಾಕಿದ್ದರಿಂದ



ಅಮರಸಿಂಹರಿಗೆ ಅವಕಾಶ ತಾನಾಗಿಯೇ ಒದಗಿಬಂದಿತ್ತು. ಕಾರ್ಯಕರ್ತರ ಸಾಕಷ್ಟು ವಿರೋಧದ ನಡುವೆಯೂ ಅಮರಸಿಂಹ ಬಿ ಫಾರ್ಮ ಗಿಟ್ಟಿಸಿಕೊಂಡಿದ್ದರು. ಆಗ ಬೆಳಗಾವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ವಾತಾವರಣವಿತ್ತು. ಹೀಗಾಗಿ ರೈತ ಮುಖಂಡ ಬಾಬಾಗೌಡ ಪಾಟೀಲರನ್ನ ಸಲೀಸಾಗಿ ಸೋಲಿಸಿ ಪಾರ್ಲಿಮೆಂಟಿಗೆ ಹೋಗಿದ್ದರು. ಆದರೆ ಕ್ಷೇತ್ರಕ್ಕೆ ಒಂದು ಕೆಲಸಾನೂ ಮಾಡದೇ ಜಮೀನುದಾರರ ದೌಲತ್ತಿನಲ್ಲೇ ಮೆರೆದರು. ಅದರ ಪರಿಣಾಮವೇ ಕಳೆದ ಬಾರಿಯ ಸೋಲು.


1987ರಿಂದ 91ರವರೆಗೆ ಬೆಳಗಾವಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಜಿಲ್ಲೆಗೊಂದು ಹೇಳಿಕೊಳ್ಳುವಂತ ಯೋಜನೆ ತರದೆ ಟೈಂಪಾಸ್ ಮಾಡಿದ ಅಮರಸಿಂಹರು ಮುಂದೆ ಅವಕಾಶವಾದಿ ತರ 92ರಿಂದ 98ರವರೆಗೆ ಬಿಜೆಪಿಯ ಪಡಸಾಲೆಯಲ್ಲಿದ್ದು, ಅವರಿಂದಲೂ ಉಗಿಸಿಕೊಂಡು, ಹಳೇ ಗಂಡನ ಪಾದವೇ ಗತಿ ಎಂಬಂತೆ ಕಾಂಗ್ರೆಸ್‌ಗೆ ಬಂದರು. ಹೆಸರಿಗೆ ಮಾತ್ರ ಕಾಂಗ್ರೆಸ್ ಮುಖಂಡ, ಆದರೆ ಎಂದೂ ಪಕ್ಷದ ಸಭೆ ಸಮಾರಂಭಗಳಿಗೆ ಹೋಗದೆ ತನಗೆ ತಿಳಿದಿದ್ದೇ ಮಾಡುವ ಅಮರಸಿಂಹ ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲಿಸಿದ್ದರು. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲಿ ಬಂಡುಕೋರ ಅಭ್ಯರ್ಥಿ ಸಣ್ಣಗೌಡರ ಪರ ನಿಂತು ಕಾಂಗ್ರೆಸ್‌ನಲ್ಲಿ ಒಡಕು ಸೃಷ್ಟಿಸಿದ ಕೀರ್ತಿ ಕೂಡಾ ಇವರದಾಗಿದೆ. ಜಮೀನುದಾರರ ದೌಲತ್‌ಗಿರಿಗೆ ಬೇಸತ್ತ ಜಿಲ್ಲಾ ಕಾಂಗ್ರೆಸ್ ಅಮರಸಿಂಹನನ್ನು ಕಂಡರೆ ಹಲ್ಲು ಕಡಿಯುತ್ತದೆ. ಕುರುಬ ಸಮುದಾಯದ 1.40 ಲಕ್ಷ ಮತಗಳು ಪಾಟೀಲರ ಹಿಂದೆ ಇವೆ ಎಂದು ಭಾವಿಸಿರುವ ಕಾಂಗ್ರೆಸ್ ಹೈಕಮಾಂಡ್‌ಗೆ ಈ ಚುನಾವಣೆ ಲೆಕ್ಕಾಚಾರ ತಪ್ಪಿದೆ ಎಂದು ತಿಳಿಸುವ ಕಾಲ ದೂರ ಇಲ್ಲ. ಪಕ್ಕದ ಜಿಲ್ಲೆಯವರಾದ ದೇಶಪಾಂಡೆ ಸ್ವಲ್ಪ ಯೋಚಿಸಲೂ ಇಲ್ಲ ಎಂದು ಮರುಗುತ್ತಿರುವ ಕಾಂಗ್ರೆಸ್ ಕಾರ್ಯಕರ್ತರು ಎ.ಬಿ. ಪಾಟೀಲ ಹಿಂದೆ ಹೋಗಲು ಶುರುಹಚ್ಚಿಕೊಂಡಿದ್ದಾರೆ.

ಸಂಕೇಶ್ವರದಿಂದ ಮೂರು ಬಾರಿ ಶಾಸಕರಾಗಿ ಸಾಕಷ್ಟು ಜನಪರ ಕೆಲಸದ ಮೂಲಕ ಪ್ರಭಾವಿ ನಾಯಕನಾಗಿ ಗುರುತಿಸಿಕೊಂಡಿರುವ ಎ.ಬಿ. ಪಾಟೀಲ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗಳ ರಂಗಿನ ಮಾತಿಗೆ ಮರುಳಾಗಿ ಪಾರಂಪರಿಕ ವೈರಿ ಕತ್ತಿ ಬ್ರದರ್ಸ್ ಪರ ದುಡಿದಿದ್ದರು. ಅದರ ಪರಿಣಾಮದಿಂದಲೇ ಉಮೇಶ್ ಕತ್ತಿ ಭಾರಿ ಅಂತರದಿಂದ ಗೆದ್ದಿದ್ದರು. ಆದರೆ ಉಂಡ ಮನೆಗೆ ದ್ರೋಹ ಬಗೆಯುವ ಬಿಜೆಪಿಗಳ ಸಂಪ್ರದಾಯಕ್ಕೆ ಬಲಿಯಾದ ಎ.ಬಿ.ಪಾಟೀಲರಿಗೆ ಚಡ್ಡಿಗಳು ಹೇಳಿದ್ದೆಲ್ಲಾ ಸುಳ್ಳೆಂದು ಗೊತ್ತಾಗಿ ಕಾಂಗ್ರೆಸ್‌ನಲ್ಲಿದ್ದರು. ಈ ಬಾರಿ ಬೆಳಗಾವಿ ಕ್ಷೇತ್ರಕ್ಕೆ ಸೇರಿಕೊಂಡಿರುವ ಗೋಕಾಕ, ಯಮಕನಮರಡಿ ಕ್ಷೇತ್ರಗಳಿಂದ ಸಾಕಷ್ಟು ನಿರೀಕ್ಷೆಗಳನ್ನು ಪಾಟೀಲರು ಇಟ್ಟುಕೊಂಡಿದ್ದಾರೆ. ಈ ಭಾಗದಲ್ಲಿ ಪ್ರಭಾವ ಹೊಂದಿರುವ ಜಾರಕಿಹೊಳಿ ಬ್ರದರ್ಸ್ ಪಾಟೀಲರ ಪರ ನಿಲ್ಲುವ ಸೂಚನೆ ನೀಡಿರುವುದು ಜೆಡಿಎಸ್‌ನ ಗೆಲುವು ನಿಶ್ಚಿತ ಎನ್ನುವಂತಾಗಿದೆ. ಅಂಗಡಿಯನ್ನು ಸೋಲಿಸಲು ಪ್ರಭಾಕರ ಕೋರೆಯ ಷಡ್ಯಂತ್ರ ರಾಜಕಾರಣ, ಕಾಂಗ್ರೆಸ್‌ನ ಪ್ರಮುಖ ನಾಯಕರುಗಳ ತಟಸ್ಥ ನೀತಿ ಎ.ಬಿ. ಪಾಟೀಲರಿಗೆ ವರವಾಗಲಿದೆ. ಜಾತಿ ಲೆಕ್ಕಾಚಾರದಲ್ಲಿ ಮಿಂದೇಳುತ್ತಿರುವ ಬೆಳಗಾವಿ ಕ್ಷೇತ್ರದ ನಿರ್ಣಾಯಕ ಮತದಾರರಾದ ಪಂಚಮಸಾಲಿಗಳ ಫತ್ವಾ ಅದೆಷ್ಟು ಎ.ಬಿ. ಪಾಟೀಲ ಗೆಲುವಿಗೆ ಲೀಡ್ ಕೊಡುತ್ತದೆಯೋ ನೋಡಬೇಕು.

ಒಟ್ಟಿನಲ್ಲಿ ಕುಂದಾನಗರಕ್ಕೆ ಅಂಟಿದ ಕೇಸರಿರೋಗ ತೊಲಗಿ ಮತ್ತೆ ಶಾಂತ ರೂಪ ತಾಳುವ ಲಕ್ಷಣಗಳು ಸಿಗುತ್ತಿರುವುದು ಸಂತಸದ ಸುದ್ದಿ.

● ಹುರುಳಿಕುಪ್ಪಿ ವಿನಯ್

ಕೋರೆಯ ಕಾಕ್‌ಟೇಲ್ ಪಾಲಿಟಿಕ್ಸ್




ಬೆಳಗಾವಿಯಲ್ಲಿ ಇವತ್ತು ಬಿಜೆಪಿ ಸೋಲುವ ಹಂತ ತಲುಪಿದೆ ಎಂದರೆ ಅದರ ಹಿಂದೆ ಅದೇ ಪಕ್ಷದ ರಾಜ್ಯಸಭಾ ಸದಸ್ಯ ಪ್ರಭಾಕರ ಕೋರೆಯ ಶ್ರಮ ಅಡಗಿದೆ. ಒಮ್ಮೆ ಎಂ.ಪಿ.ಯಾದ ಸುರೇಶ ಅಂಗಡಿ ಬೆಳಗಾವಿ ಜಿಲ್ಲೆಯಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಮತ್ತು ಬೆಳಗಾವಿ ಅನಭಿಷಕ್ತ ದೊರೆಯಂತೆ ಮೆರೆಯುತ್ತಿದ್ದ ಕೋರೆಯನ್ನು ಮೂಲೆಗುಂಪು ಮಾಡಲು ಅದೆಷ್ಟು ಹಗಲು ರಾತ್ರಿ ಯೋಚಿಸಿದನೋ ಏನೋ? ಆದರೆ ಅದನ್ನು ತಿಳಿದ ಕೋರೆ ಅಂಗಡಿ ತಳಕ್ಕೆ ಒಂದಾದಮೇಲೊಂದು ಬಾಂಬ್ ಇಟ್ಟು ಇವತ್ತು ಮೇಲೇಳದಂಥ ಸ್ಥಿತಿ ಮಾಡಿಟ್ಟಿದ್ದಾನೆ.

ಬೆಳಗಾವಿ ಅಧಿವೇಶನ ಸಮಯದಲ್ಲಿ ಒಂದು ದಿನ ಸಿ.ಎಂ. ಜೊತೆ ವ್ಯಾಯಾಮ ಮಾಡಿದ್ದು ಬಿಟ್ಟರೆ ಸುರೇಶ ಅಂಗಡಿಯ ಸುಳಿವು ಮತ್ತೆ ಸಿಗಲೇ ಇಲ್ಲ. ಇದರ ಹಿಂದೆ ಕೋರೆಯ ಬ್ರೈನ್ ಕೆಲಸ ಮಾಡಿತ್ತು. ಇತ್ತೀಚಿಗಿನ ಭಗವಾಧ್ವಜ ಪ್ರಕರಣ ಭಾರೀ ಪ್ರಚಾರ ಪಡೆಯುವಲ್ಲಿ ಕೋರೆ ಕೆಲಸ ಮಾಡಿದ್ದಾರೆ. ರಕ್ಷಣಾ ವೇದಿಕೆಯ ರಾಜು ಟೊಂಪಣ್ಣನವರ, ಗಣೇಶ ಮಹಾಂತೇಶ ರಣಗಟ್ಟಿಮಠರನ್ನ ಅಂಗಡಿ ವಿರುದ್ಧ ಛೂಬಿಟ್ಟು ಕನ್ನಡದವರು ಸಿಡಿದೇಳುವ ವಾತಾವರಣ ಸೃಷ್ಟಿಸಿದ್ದರ ಹಿಂದೆ ಕೋರೆ ಸಾಹೇಬರ ಪಾತ್ರ ದೊಡ್ಡದು. ಕಾಂಗ್ರೆಸ್‌ನಲ್ಲಿದ್ದ ಪ್ರಭಾಕರ ಕೋರೆ ಬಿಜೆಪಿಗೆ ಬರುತ್ತಾರೆ ಎಂದು ಗೊತ್ತಾದಾಕ್ಷಣ ಅದಕ್ಕೆ ಮೊದಲು ವಿರೋಧಿಸಿದ್ದು ಸಂಸದ ಅಂಗಡಿ. ಹೀಗಾಗಿ ಬಿಜೆಪಿಗೆ ಕಾಲಿಟ್ಟ ಮರುಕ್ಷಣದಿಂದಲೇ 'ಅಂಗಡಿ ಹಠಾವೋ' ಪ್ರೋಗ್ರಾಂಗೆ ಚಾಲನೆ ಕೊಟ್ಟಿರುವ ಕೋರೆ ಸದ್ಯ ಒಂದೇ ಒಂದು ಆಸೆ ಇಟ್ಟುಕೊಂಡು ಈ ಅಜೆಂಡಾಕ್ಕೆ ನಿಂತಿದ್ದಾರೆ. ಅಂಗಡಿ ಸೋಲಿನ ಮೂಲಕ ಮಂತ್ರಿಗಿರಿ ಮೇಲೆ ಕಣ್ಣಿಟ್ಟಿರುವ ಕೋರೆ ಈಗ ಯಾರು ಏನೇ ಹೇಳಿದರೂ ಕ್ಯಾರೇ ಎನ್ನುತ್ತಿಲ್ಲ...

ಸಿನಿ ಪಾಲಿಟಿಕ್ಸ್

ಚೇಂಬರ್ ಅಧ್ಯಕ್ಷೆ ಜಯಮಾಲಾ ...ಗಳೂರಿನಿಂದ ನಿಲ್ಲುತ್ತಾರಂತೆ. ತಾರಾಳಿಗೆ ...ಬಳ್ಳಾಪುರ ಟಿಕೆಟ್ ಗ್ಯಾರಂಟಿ! ಅಂಬರೀಶ್ ಬದಲಿಗೆ ...ನ ಉತ್ತರಾಧಿಕಾರಿ ದರ್ಶನ್ ಮಂಡ್ಯದಿಂದ ...ವಣೆಗೆ ಧುಮುಕುತ್ತಾರಂತೆ!! ಸುದೀಪ್‌ಗೆ ಕಾಂಗ್ರೆ...ಸ್ ಪತುಚಿದ್ದ ಮಂಡ್ಯದ ಮತ್ತೊಬ್ಬ ಗಂಡು, ರಕ್ಷಿತಾಳ ...ಕ ಪ್ರೇಮ್ ಮಂಡ್ಯದಿಂದ ನಿಲ್ಲುತ್ತಾರಂತೆ! ತೆಲುಗು ... ಸಾಯಿಕುಮಾರ್‌ಗೆ ವೆಂಕಯ್ಯನಾಯ್ಡು ಟಿಕೆಟ್ ...ದ್ದಾರಂತೆ.... ಹೀಗೆ ಕಳೆದೆರಡು ವಾರಗಳಿಂದ ...ಮಾದವರ ಹೆಸರುಗಳು ರಾಜಕೀಯ ವಲಯದಲ್ಲಿ ...ನೂ ಕೇಳಿಬರುತ್ತಿತ್ತು. ಆದರೆ ಎಲ್ಲರಿಗೂ ಟಿಕೆಟ್ ...ಸ್ ಆಗಿದೆ.






ಅಂಬಿ ಮತ್ತು ಯೋಗಿ

...ಚುನಾವಣೆ ಘೋಷಣೆಯಾಗುತ್ತಿದ್ದಂತೆ ...ಧಿನಗರದಿಂದ ದೆಹಲಿಯ ಸಂಸತ್ ಭವನದತ್ತ ...ವ ಕನಸು ಕಂಡವರಲ್ಲಿ ಸಿನಿಮಾ ನಟನಟಿಯರು ...ಮ್ಮೆಯೇನಿಲ್ಲ. ಆದರೆ ಮಾಮೂಲಿಯಂತೆ ...ಲ್‌ಸ್ಟಾರ್ ಅಂಬರೀಶ್ ಮತ್ತು ಮೆಗಾಸಿಟಿಯ ...ನ ವಂಚಕ ಯೋಗೇಶ್ವರ್ ಮಾತ್ರ ಸಿನಿಮಾ ...ದ ಪ್ರತಿನಿಧಿಗಳ ತರಹ ಕಾಣಿಸುತ್ತಿದ್ದಾರೆ. ಅವರಿಗೂ ...ಟ್ ಸಿಕ್ಕಿದ್ದು ಕೊನೇ ಕ್ಷಣದಲ್ಲಿ; ಆ ಕಥೆಗೆ ಆಮೇಲೆ ...ಬೋಣ.

ಚೇಂಬರ್ ಸೀಟೇ ಗತಿ

...ಆರಂಭದಲ್ಲಿ ಗಾಂಧಿನಗರದಿಂದ ತೇಲಿಬಂದ ...ಮ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ...ದದ್ದು. ಇತ್ತೀಚೆಗೆ ನಡೆದ ಅಮೃತಮಹೋತ್ಸವ ...ದರ್ಭದಲ್ಲಿ ಆಡಳಿತ ಪಕ್ಷದವರನ್ನು ದಿನನಿತ್ಯ ...ಟಿಯಾಗುತ್ತಿದ್ದ ಜಯಮಾಲಾ ತನ್ನ ಮನದಾಳದ ...ಯನ್ನು ಯಡಿಯೂರಪ್ಪನವರ ಬಳಿ ...ಚಿಕೊಂಡಿದ್ದರಂತೆ. ಆಕೆಯ ಕಣ್ಣು ಬಿಜೆಪಿಯ ...ಕೋಟೆಯಂತಿರುವ ಮಂಗಳೂರು ಕ್ಷೇತ್ರದ ...ಲಿತ್ತು. ಆದರೆ ಯಡ್ಡಿ ಮತ್ತು ಚಡ್ಡಿ ಪಕ್ಷದ ...ಯಕರು ಜಯಮಾಲಾ ಬಗ್ಗೆ ತೀವ್ರ ...ಪ್ರತಿಕ್ರಿಯನ್ನು ತೋರಿಸಿದ್ದರಿಂದ ಆಕೆಯ ದೆಹಲಿಯ ...ಸು ಆರಂಭದಲ್ಲೇ ನುಚ್ಚುನೂರಾಯಿತಂತೆ.





ತಾರಕ್ಕ ಸುಮ್ನೆ ಕೂರಕ್ಕ...


...ಜಯಮಾಲಾಳಷ್ಟೇ ಬುದ್ಧಿವಂತೆ ಮತ್ತು ...ನಾಜೂಕಿನ ನಟಿಯಾದ ತಾರಾ ಕೂಡಾ ಇದೇ ...ರ್ಭದಲ್ಲಿ ತನ್ನ 'ತೆಲುಗು ನಂಟ'ನ್ನು ಬೆಳೆಸಿಕೊಂಡು ...ಬಳ್ಳಾಪುರ ಕ್ಷೇತ್ರದಿಂದ ಕಮಲದ ಚಿಹ್ನೆಯಡಿ ...ಸಲು ತೆರೆಮರೆಯಲ್ಲಿ ಭಗೀರಥ ಪ್ರಯತ್ನ ...ದಿದ್ದರು. ಈಕೆಗೆ ಟಿಕೆಟ್ ಕೊಡಿಸುವಲ್ಲಿ ಕಟ್ಟಾ ...ಬ್ರಮಣ್ಯ ನಾಯ್ಡು ಮತ್ತು ಗಣಿ ಧಣಿಗಳು ...ತುವರ್ಜಿ ವಹಿಸಿದ್ದರು. ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ...ಷ್ಟು ಸಂಖ್ಯೆಯಲ್ಲಿ ತೆಲುಗು ಮತದಾರರು ...ವುದರಿಂದ ತಾರಾ ಅಲ್ಲಿಂದ ಸೇಫಾಗಿ ...ಯಾಗಬಹುದು ಎಂಬ ವಾದವನ್ನು ಅವರು ...ಮ ಪರವಾಗಿ ಮಂಡಿಸಿದ್ದರು. ಆದರೆ ಬಿಜೆಪಿ ...ಮಾಂಡ್ "ಚುನಾವಣೆಯಲ್ಲಿ ಪ್ರಚಾರ ಮಾಡಿ, ...ಂತರ ಯಾವುದಾದರೂ ಬೋರ್ಡ್ ಚೇರ್ಮನ್‌ಗಿರಿ ...ದಬಹುದು" ಎಂದಿತು. ಅಷ್ಟಕ್ಕೇ ತಾರಾ ...ಕುಪ್! ತನ್ನ ಸಹೋದ್ಯೋಗಿ ಶ್ರುತಿ ತರಹ ...ೂ ಕೆಂಪು ದೀಪದ ಕಾರಿನಲ್ಲಿ ಓಡಾಡಬಹುದಲ್ಲ ...ಮ ಕನಸು ಕಾಣುತ್ತಾ ತಾರಾ ಈಗ ಬಿಜೆಪಿ ಪರ ...ರಕ್ಕೆ ಹೊರಟಿದ್ದಾರೆ.





...ಶ್ರುತಿಗೆ ಶೋಭಾ ಅಪಶ್ರುತಿ!

...ಮೊನ್ನೆಮೊನ್ನೆಯಷ್ಟೇ ಅಸೆಂಬ್ಲಿ ಚುನಾವಣೆಯಲ್ಲಿ ...ಗಾಲದಿಂದ ಸ್ಪರ್ಧಿಸಿ ಹೀನಾಯವಾಗಿ ಸೋತ ...ಂದ್ರ ಮತ್ತು ಅವರ ಪತ್ನಿ, ಹಾಲಿ ಮಕ್ಕಳ ...ತ್ತು ಮಹಿಳಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷೆ ... ಕೂಡಾ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧಿಸಲು ...ಟ್‌ಗಾಗಿ ಭಾರೀ ಪ್ರಯತ್ನ ನಡೆಸಿದ್ದರು. ...ಬ್ಬರಿಗೂ ಬಳ್ಳಾರಿ ಗಣಿಧಣಿಗಳ ಆಶೀರ್ವಾದವೂ ... ಆದರೆ ಶ್ರುತಿಯ ಬಗ್ಗೆ ಈಗಾಗಲೇ ಶೋಭಾ ...ದ್ಯಾಚೆಗೆ ಅಸಮಾಧಾನವಿರುವುದು ಪಕ್ಷದಲ್ಲಿ ...ಲಾಗೂ ಗೊತ್ತಿರುವ ವಿಷಯ. ಶೋಭಾಳ ...ರ್ವಾದದ ಕೊರತೆಯಿಂದಾಗಿ ಇವರಿಬ್ಬರಿಗೂ ...ಸ್ ಸಿಗಲಿಲ್ಲ.



ಸುದೀಪ್ ದೆಹಲಿ ಬದಲು ಮುಂಬೈಗೆ

ಈ ಮಧ್ಯೆ ನಾಯಕ ಜನಾಂಗಕ್ಕೆ ಸೇರಿದ ಸುದೀಪ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಚಿತ್ರದುರ್ಗದಿಂದ ಸ್ಪರ್ಧಿಸುತ್ತಾರೆಂಬ ಸುದ್ದಿ ದಟ್ಟವಾಗಿ ಹಬ್ಬಿತ್ತು. ಬಹುಶಃ ಕಾಂಗ್ರೆಸ್‌ನ ಆಹ್ವಾನವನ್ನು ಸುದೀಪ್ ಒಪ್ಪಿಕೊಂಡಿದ್ದರೆ ಆತ ಅಭ್ಯರ್ಥಿಯಾಗುತ್ತಿದ್ದರು. ಆದರೆ ಸುದೀಪ್‌ಗೆ ಮುಂದಿನ ಅಸೆಂಬ್ಲಿ ಚುನಾವಣೆಗೆ ಸ್ಪರ್ಧಿಸುವ ಆಸೆ ಇದೆಯೇ ವಿನಃ ಸಂಸತ್ ಭವನ ಸೇರುವ ಬಗ್ಗೆ ಆಸಕ್ತಿ ಇಲ್ಲ. ಹೀಗಾಗಿ ಈ ಗಲಾಟೆ ಸಂದರ್ಭದಲ್ಲಿ ಯಾರ ಕೈಗೂ ಸಿಗದೆ ಆತ ಬಾಲಿವುಡ್‌ಗೆ ಹೋಗಿ ಹಿಂದಿ ಸಿನಿಮಾವೊಂದರಲ್ಲಿ ತಣ್ಣಗೆ ನಟಿಸುತ್ತಿದ್ದಾರೆ.

ಮರಿ ಅಂಬರೀಶ್ ಬಚಾವ್!

ಸುದೀಪ್‌ಗೆ ರಾಜಕೀಯದ ಆಹ್ವಾನ ಬಂದಿತೆಂದರೆ ಆತನ ಸಾಂಪ್ರದಾಯಿಕ ಎದುರಾಳಿ ದರ್ಶನ್‌ಗೂ ಯಾವುದಾದರೂ ರಾಜಕೀಯ ಪಾರ್ಟಿಯಿಂದ ಬುಲಾವ್ ಬರದೇ ಇದ್ದರೆ ದರ್ಶನ್ ಅಭಿಮಾನಿಗಳಿಗೆ ನಿರಾಶೆಯಾಗುತ್ತಿತ್ತು. ಅಂಬರೀಶ್ ಈ ಬಾರಿ ಸ್ಪರ್ಧಿಸುವುದು ಡೋಲಾಯಮಾನವಾಗಿದ್ದರಿಂದ ಆತನ ಉತ್ತರಾಧಿಕಾರಿಯೆಂದೇ ಪ್ರತಿಬಿಂಬಿಸಲ್ಪಟ್ಟ ಚಾಲೆಂಜಿಂಗ್ ಸ್ಟಾರ್ ದರ್ಶನ್‌ಗಾಗಿ ಎಲ್ಲಾ ರಾಜಕೀಯ ಪಕ್ಷದವರು ಗಾಳ ಹಾಕಿದ್ದು ನಿಜ. ಆದರೆ ದರ್ಶನ್ ಯಾರ ಗಾಳಕ್ಕೂ ಸಿಲುಕದೆ ಬಚಾವಾಗಿದ್ದಾರೆ.

ಮಂಡ್ಯದ ಮತ್ತೊಬ್ಬ ಗಂಡು

ಇವೆಲ್ಲದರ ಮಧ್ಯೆ ಮಂಡ್ಯದ ಗಂಡು ತಾನೇ ಎಂದು ಹೇಳಿಕೊಳ್ಳುತ್ತಿರುವ ಚೋಟುದ್ದದ ಪ್ರೇಮ್ ತುಂಬಾ ಗಂಭೀರವಾಗಿ ಟಿಕೆಟ್‌ಗಾಗಿ ಪ್ರಯತ್ನ ಮಾಡಿದ್ದರು. ಕಟ್ಟಾ ಸುಬ್ರಮಣ್ಯ ನಾಯ್ಡು ಅವರ ಮಗ ಮತ್ತು ಪ್ರೇಮ್ ಜಿಗ್ರಿ ದೋಸ್ತಿಗಳು. ಹಾಗಾಗಿ ಕಟ್ಟಾ ಪ್ರೇಮ್‌ಗೆ ಟಿಕೆಟ್ ಕೊಡಿಸಲು ಪ್ರಯತ್ನ ಮಾಡಿದ್ದು ಹೌದು. ಆದರೆ ಪಾರ್ಟಿ ಹೈಕಮಾಂಡ್ ಪ್ರೇಮ್ ಬಗ್ಗೆ ಕ್ಯಾರೇ ಅನ್ನಲಿಲ್ಲ. ಪ್ರೇಮ್‌ಗೆ ಟಿಕೆಟ್ ಸಿಗದಿದ್ದರ ಬಗ್ಗೆ ಕಟ್ಟಾ ಮತ್ತು ಆತನ ಮಗನ ನಡುವೆ ದೊಡ್ಡ ಸಮರವೇ ನಡೆಯಿತು. ಆದರೆ ಪ್ರೇಮ್ ಅಭಿಮಾನಿಗಳ ಪ್ರಕಾರ ಇದು ದೇವೇಗೌಡ ಮತ್ತು ಕುಮಾರಸ್ವಾಮಿ ಜಗಳದ ತರಹ ಒಂದು ನಾಟಕವಂತೆ.

ಕೆಳಗೆ ಬಿದ್ದ ತೆಲುಗು ಬಿಡ್ಡ

ಅಬ್ಬರದ ಡೈಲಾಗ್ ಹೊಡೆಯುವ ತೆಲುಗು ಬಿಡ್ಡ ಸಾಯಿಕುಮಾರ್ ಕೂಡಾ ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್‌ಗಾಗಿ ಬಿಜೆಪಿಯ ತೆಲುಗು ನಾಯಕರ ಮನೆಬಾಗಿಲಿಗೆ ಅಡ್ಡಾಡಿದ್ದೋ ಅಡ್ಡಾಡಿದ್ದು. ಆದರೆ ಮೊನ್ನೆ ಅಸೆಂಬ್ಲಿ ಚುನಾವಣೆಯಲ್ಲೇ ಗೆಲ್ಲದಿದ್ದ ಈ ಮನುಷ್ಯ ಲೋಕಸಭೆ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವೇ ಎಂದು ಚಡ್ಡಿಗಳ ಹೈ ಕಮಾಂಡ್ ಆತನ ಅರ್ಜಿಯನ್ನು ಕಸದಬುಟ್ಟಿಗೆ ಎಸೆಯಿತು.

ಶಶಿಗೆ ಪಕ್ಷವೂ ಇಲ್ಲ ಕ್ಷೇತ್ರವೂ ಇಲ್ಲ

ಕಳೆದೆರಡು ಬಾರಿ ಪಕ್ಷ ಮತ್ತು ಕ್ಷೇತ್ರ ಎರಡನ್ನೂ ಬದಲಿಸಿ ಚುನಾವಣೆಗೆ ನಿಂತಿದ್ದ ಶಶಿಕುಮಾರ್ ಎಂಬ ಮಾಜಿ ಸಂಸದ ಕಂ ಮಾಜಿ ನಾಯಕ ನಟನನ್ನು ಈ ಬಾರಿ ಯಾವ ಪಕ್ಷದವರೂ ಕರೆಯಲಿಲ್ಲ. ಅಷ್ಟೇ ಅಲ್ಲ 28 ಲೋಕಸಭಾ ಕ್ಷೇತ್ರಗಳಲ್ಲಿ ಒಂದು ಒಳ್ಳೆಯ ಕ್ಷೇತ್ರವನ್ನು ಆಯ್ಕೆ ಮಾಡಲೂ ಶಶಿಗೆ ಸಾಧ್ಯವಾಗಲಿಲ್ಲ. ಹೀಗಾಗಿ ಶಶಿ ಸದ್ಯಕ್ಕೆ ನಿರುದ್ಯೋಗಿ.

ಕೆಟ್ಟಮೇಲೆ ಬುದ್ಧಿ ಬಂತು!

ಕಳೆದೆರಡು ಬಾರಿ ಚುನಾವಣೆಗೆ ನಿಂತು ಕಹಿ ಅನುಭವಿಸಿದ ಅನಂತ್‌ನಾಗ್ ಮತ್ತು ಅಭಿನಯ ಶಾರದೆ ಜಯಂತಿ ಈ ಬಾರಿ ಚುನಾವಣೆಯ ಕಡೆ ತಿರುಗಿಯೂ ನೋಡದೆ ಮೌನಕ್ಕೆ ಶರಣಾಗಿ ತಮ್ಮ ಜಾಣತನವನ್ನು ಮೆರೆದಿದ್ದಾರೆ.

ಹೀಗೆ ದೆಹಲಿಯ ಗದ್ದುಗೆಯೇರುವ ಕನಸು ಕಾಣುತ್ತಿದ್ದ ಕನಸಿನ ಲೋಕದ ಜನರನ್ನು ರಾಜಕಾರಣಿಗಳು ತಮ್ಮ ದಿವ್ಯ ನಿರ್ಲಕ್ಷ್ಯ(?)ದಿಂದ ದೂರವಿಟ್ಟಿದ್ದಾರೆ. ಹೀಗಾಗಿ 'ಜನಸೇವೆ' ಮಾಡಬೇಕೆಂಬ ಅದಮ್ಯ ಉತ್ಸಾಹದಲ್ಲಿದ್ದ ಜಯಮಾಲಾ, ತಾರಾ, ಪ್ರೇಮ್, ಮಹೇಂದರ್, ಸಾಯಿಕುಮಾರ್... ಮೊದಲಾದವರಿಗೆ ಭಾರೀ ನಿರಾಶೆಯಾಗಿದೆ.

● ಶೆಣೈ


ಈ ವಾರ ನಾಲ್ಕು ಚಿತ್ರಗಳು!

ಬೇಸಿಗೆಯ ಸುಡು ಬಿಸಿಲಿನಲ್ಲೂ ಈ ವಾರ ನಾಲ್ಕು ಕನ್ನಡ ಚಿತ್ರಗಳು ತೆರೆ ಕಾಣುತ್ತಿವೆ. ಮೊದಲೇ ಕನ್ನಡ ಚಿತ್ರವೆಂದರೆ ಥಿಯೇಟರ್‌ಗಳಿಗೆ ಯಾರೂ ಬರುತ್ತಿಲ್ಲ, ಇನ್ನು ಹವಾನಿಯಂತ್ರಣವಿಲ್ಲದ, ಫ್ಯಾನ್‌ಗಳಿರದ ಥಿಯೇಟರ್‌ಗಳಿಗೆ ಈ ಬೇಸಿಗೆಯಲ್ಲಿ ಹೋಗುವುದೆಂದರೆ ಪ್ರೇಕ್ಷಕರಿಗೆ ಅಲರ್ಜಿ. ಇಂತಹ ಸಂದರ್ಭದಲ್ಲಿ ನಾಲ್ಕು ಚಿತ್ರಗಳನ್ನು ಒಮ್ಮೆಗೆ ಬಿಡುಗಡೆ ಮಾಡಿದರೆ ಖಂಡಿತವಾಗಿಯೂ ಮೂರು ನಿರ್ಮಾಪಕರು ಮನೆ ಮಠ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಷ್ಟೊಂದು ಚಿತ್ರಗಳನ್ನು ಬಿಡುಗಡೆ ಮಾಡುವ ಬದಲು ಪರ್ಯಾಯ ವ್ಯವಸ್ಥೆ ಮಾಡಬೇಕಾದ ಚೇಂಬರ್ ಅಧ್ಯಕ್ಷೆ ಜಯಮಾಲಾ ಮತ್ತು ನಿರ್ಮಾಪಕರ ಸಂಘದ ಅಧ್ಯಕ್ಷ ಕೆ.ಸಿ.ಎನ್. ಚಂದ್ರು ತೆಪ್ಪಗೆ ಕೂತಿರುವುದು ಒಂದು ದೊಡ್ಡ ವಿಪರ್ಯಾಸ.

ಈ ವಾರ ತೆರೆಕಾಣುತ್ತಿರುವ ಚಿತ್ರಗಳು: ಜೋಶ್, ನಿಷೇಧಾಜ್ಞೆ, ಹೃದಯಗಳ ವಿಷಯ, ಸವಾರಿ... ಈ ನಾಲ್ಕರಲ್ಲಿ ಹೊಸಬರನ್ನು ಹಾಕಿಕೊಂಡು ಎಸ್.ವಿ.ಬಾಬು ನಿರ್ಮಿಸಿರುವ ಶಿವಮಣಿ ನಿರ್ದೇಶಿಸಿರುವ 'ಜೋಶ್' ತಲೆಯೆತ್ತಿ ನಿಲ್ಲಬಹುದು. ಎರಡನೇ ಸ್ಥಾನದಲ್ಲಿ 'ಸವಾರಿ' ಚಿತ್ರದ ಹೆಸರು ಕೇಳಿಬರುತ್ತಿದೆ.

ಏನೇ ಆದರೂ ವಾರಕ್ಕೆ ನಾಲ್ಕು-ನಾಲ್ಕು ಚಿತ್ರಗಳು ಬಿಡುಗಡೆಯಾಗುತ್ತಿರುವುದು ಬೇಸರದ ವಿಷಯ. ಇದನ್ನು ತಡೆಗಟ್ಟಲು ಚೇಂಬರ್ ಅಥವಾ ನಿರ್ಮಾಪಕರ ಸಂಘ ಪ್ರಯತ್ನಿಸದೇ ಇರುವುದು ಮಾತ್ರ ದುರಂತ.

ಛಾಲೆಂಜಿಂಗ್ ಯೂನಿಟ್



ಚಾಲೆಂಜಿಂಗ್ ಸ್ಟಾರ್ ದರ್ಶನ್ ಈಗ ಚಿತ್ರರಂಗದಲ್ಲಿ ಮತ್ತೊಂದು ಹೊಸ ಅವತಾರದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ.

ತಾನು ನಾಯಕನಾಗಿ ನಟಿಸುವುದರೊಂದಿಗೆ ತನ್ನ ಸಹೋದರ ದಿನಕರನನ್ನು ನಿರ್ದೇಶಕನನ್ನಾಗಿಯೂ ಹಾಗೂ ತಾಯಿಯವರನ್ನು ನಿರ್ಮಾಪಕಿಯನ್ನಾಗಿಯೂ ಈಗಾಗಲೇ ದರ್ಶನ್ ಮಾಡಿದ್ದಾರೆ. ಇದೀಗ ತಂದೆ ತೂಗುದೀಪ್ ಶ್ರೀನಿವಾಸ್ ಹೆಸರಿನಲ್ಲಿ ಸುಮಾರು ಮೂರೂವರೆ ಕೋಟಿ ರೂ. ವೆಚ್ಚದಲ್ಲಿ ಒಂದು ಸಿನಿಮಾ ಯುನಿಟ್ ಆರಂಭಿಸಿದ್ದಾರೆ. ಇದರಲ್ಲಿ ಎರಡೂವರೆ ಕೋಟಿ ರೂ. ವೆಚ್ಚದ ಅತ್ಯಾಧುನಿಕ ಕ್ಯಾಮರಾ ಕೂಡಾ ಇದೆ. ಇಷ್ಟೊಂದು ಅತ್ಯಾಧುನಿಕ ತಾಂತ್ರಿಕತೆಯ ಕ್ಯಾಮರಾ ಪುನೀತ್ ರಾಜ್‌ಕುಮಾರ್‌ರವರ ಬಳಿ ಬಿಟ್ಟರೆ ರಾಜ್ಯದಲ್ಲಿ ಬೇರೆ ಯಾರ ಬಳಿಯೂ ಇಲ್ಲವೆಂಬುದೇ ವಿಶೇಷ.


ಅಂತೂ ಕೆಲವೇ ವರ್ಷಗಳ ಹಿಂದೆ ಆಕಸ್ಮಿಕವಾಗಿ ನಾಯಕ ನಟನಾಗಿ ಚಿತ್ರರಂಗಕ್ಕೆ ಕಾಲಿಟ್ಟ ದರ್ಶನ್ ಇಂದು ಒಬ್ಬ ಉದ್ಯಮಿಯಾಗಿ ತಲೆಯೆತ್ತಿ ನಿಂತಿದ್ದಾರೆ. ಆತನ ತಂದೆ ತೂಗುದೀಪ್ ಶ್ರೀನಿವಾಸ್ ಸುಮಾರು ಮೂವತ್ತು ವರ್ಷಗಳಲ್ಲಿ ಮಾಡಲಾಗದ್ದನ್ನು ಮಗ ದರ್ಶನ್ ಕೆಲವೇ ವರ್ಷಗಳಲ್ಲಿ ಸಾಧಿಸಿ ಮುನ್ನುಗ್ಗುತ್ತಿದ್ದಾರೆ. ಈಗ ನೀವೇ ಹೇಳಿ... ಚಿತ್ರರಂಗಕ್ಕೆ ಬಂದರೆ ಹುಡುಗರು ಹಾಳಾಗುತ್ತಾರಾ?

ಕ'ಲಾ'ಮಂದಿರದ confusion

ಪತ್ರಕರ್ತ, ನಾಟಕಕಾರ, ನಿರೂಪಕ ಎಲ್ಲವೂ ಆಗಿರುವ, ಎಲ್ಲದರಲ್ಲೂ ಸಿಕ್ಕಾಪಟ್ಟೆ ಸೀನಿಯರ್ರೂ ಆಗಿರುವ ತರುಣ ಅಜ್ಜ ಎ.ಎಸ್. ಮೂರ್ತಿ ಅವರಿಗೆ ಎದುರು ಸಿಕ್ಕವರನ್ನೆಲ್ಲಾ 'ಚೆನ್ನಾಗಿದ್ದೀರಾ, ಆರಾಮಾ, ಊಟ ಆಯ್ತ, ತಿಂಡಿ ತಿಂದ್ರಾ...?' ಎಂದು ಕುಶಲೋಪರಿ ವಿಚಾರಿಸುವಂತೆ 'ಏನ್ರಿ ಕಲಾಮಂದಿರದ ಕಡೆ ಬರಲೇ ಇಲ್ಲ' ಎಂದು ಕೇಳುವ ಅಭ್ಯಾಸ!

ಮೊನ್ನಿನ ದಿನವೂ ಹಾಗೇ ಆಗಿದೆ. ಎದುರು ಸಿಕ್ಕ ವ್ಯಕ್ತಿಗೆ 'ಏನಪ್ಪಾ ಕಲಾಮಂದಿರದ ಕಡೆ ಬರಲೇ ಇಲ್ಲ' ಎಂದು ಕೇಳಿದ್ದಾರೆ. ತಕ್ಷಣ ಆತ ಬಂದಿದ್ನಲ್ಲಾ ಸಾರ್, ಜೊತೆಗೆ ನನ್ ಹೆಂಡ್ತೀನೂ ಕರಕೊಂಡು ಬಂದಿದ್ದೆ?' ಎಂದಿದ್ದಾರೆ. ತಕ್ಷಣ ಸಿಟ್ಟಿಗೊಳಗಾದ ಮೂರ್ತಿಗಳು 'ಅಲ್ಲಯ್ಯಾ ಮೂರು ದಿನದಿಂದ ನಾನು ಎಲ್ಲೂ ಹೋಗೇ ಇಲ್ಲ, ನೀನ್ಯಾವಾಗ ಬಂದು ಹೋದ್ಯಪ್ಪಾ...?' ಎಂದು ಗುಡುಗಿದ್ದಾರೆ.

ಆಫ್ ದಿ ರೆಕಾರ್ಡ್



ಎದುರಿಗಿದ್ದಾತ 'ಇಲ್ಲ ಸಾರ್, ನಾನೇನೂ ಸುಳ್ಳು ಹೇಳ್ತಿಲ್ಲಾ, ಬೇಕಾದರೆ ನಮ್ಮನೆಗೇ ಬಂದು ನೋಡಿ; ಒಂದಲ್ಲಾ ಎರಡಲ್ಲಾ ನಾಲ್ಕು ರೇಷ್ಮೆ ಸೀರೆ ಪರ್ಚೇಸ್ ಮಾಡಿ ಕೊಂಬದಿದ್ದೀವಿ' ಎಂದಿದ್ದಾನೆ! ಆತನ ಈ ಮಾತನ್ನು ಕೇಳಿದ ಮೂರ್ತಿಗಳ ತಲೆಗೆ ಇನ್ನಷ್ಟು ಹುಳಾ ಬಿಟ್ಟ ಹಾಗಾಗಿದೆ. 'ನಮ್ಮ ಕಲಾಮಂದಿರದಲ್ಲಿ ಇನ್ನೂ ಸೀರೆ ವ್ಯಾಪಾರ ಶುರುನೇ ಮಾಡಿಲ್ಲ, ಅಂಥಾದ್ದರಲ್ಲಿ ನಾಲ್ಕು ರೇಷ್ಮೆ ಸೀರೆ ನಿನಗ್ಯಾರಯ್ಯಾ ಕೊಟ್ರು?' ಎಂದು ಗದರಿದ್ದಾರೆ.


ಅಸಲಿಗೆ ಮೂರ್ತಿಯವರು ನಡೆಸುವ ಕಲಾ ಮಂದಿರದ ಕಡೆ ಹೋಗಿ ಬಹಳ ವರ್ಷವೇ ಆಗಿದ್ದರಿಂದ ಆ ಪರಿಚಯಸ್ಥ ವ್ಯಕ್ತಿ ಅದರ ಹೆಸರನ್ನು ಮರೆತಿದ್ದನೋ ಏನೋ ಆದರೆ ಆ ಕ್ಷಣಕ್ಕೆ ತನ್ನ ಹೆಂಡತಿಯೊಂದಿಗೆ ಹೋಗಿದ್ದ 'ಕಳಾಮಂದಿರ್' ಎಂಬ ಸೀರೆ ಅಂಗಡಿಯೊಂದಿಗೆ 'ಕಲಾಮಂದಿರ'ವನ್ನು ತಳುಕು ಹಾಕಿದ್ದ.

ಪರಿಚಯಸ್ಥನ ಕನ್‌ಫ್ಯೂಜನ್‌ನಿಂದ ಮೂರ್ತಿಗಳು ಮುಖ ಸಿಂಡರಿಸಿ ಸುಮ್ಮನಾಗಿದ್ದಾರೆ. ಆದರೆ ಅವರ ಸಹಪಾಠಿ ಪತ್ರಕರ್ತರು ಇನ್ನೂ ಆ 'ಕಳಾಮಂದಿರ ಪ್ರಸಂಗ'ವನ್ನು ನೆನೆದು ಇಡೀ ಗ್ರೀನ್‌ಹೌಸ್ ತುಂಬೆಲ್ಲಾ ಉಳ್ಳಾಡಿಕೊಂಡು ನಗಾಡುತ್ತಿದ್ದಾರೆ.

ಇನ್ನು ಮುಂದಾದರೂ ಸಿಕ್ಕವರ ಬಳಿಯೆಲ್ಲಾ 'ಏನ್ರಿ ಕಲಾಮಂದಿರದ ಕಡೆ ಬರಲೇ ಇಲ್ಲಾ...' ಎಂದು ಉದ್ಗಾರ ತೆಗೆಯುವ ಮುನ್ನ ಮೂರ್ತಿಗಳು ಕೊಂಚ ಯೋಚಿಸಿ ಮುಂದುವರೆದರೆ ಒಳ್ಳೆಯದು. ಅಲ್ಲವೇ!

R B P LANKESH, Kannada Weekly Price Rs. 12/- 22-04-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4,

ಮಾತು ಮಂಥನದಲ್ಲಿ ಶಿವಣ್ಣ



ಬಚ್ಚನ್ ಚಿತ್ರಗಳೆಂದರೆ ನನಗೆ ಪಂಚಪ್ರಾಣವಾಗಿತ್ತು. ಹಾಗೆಯೇ ಅಪ್ಪಾಜಿ ಚಿತ್ರಗಳೂ ಕೂಡ. ಆದರೆ ನನಗೆ ನಟನಾಗಲು ನಿಜವಾಗಿಯೂ ಸ್ಫೂರ್ತಿ ನೀಡಿದ್ದು ನನ್ನ ಸಹೋದರ ಅಪ್ಪು. ಆತ ಅಷ್ಟೊತ್ತಿಗೆಲ್ಲಾ ಬಾಲನಟನಾಗಿ ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿ ಪಡೆದಿದ್ದ. ಒಂದು ಹಾಡನ್ನು ಹಾಡಿ ಪಾಪ್ಯುಲರ್ ಆಗಿದ್ದ. ಇದರಿಂದ ಉತ್ತೇಜನಗೊಂಡ ನಾನು ಕೂಡ ಯಾಕೆ ಟ್ರೈ ಮಾಡಬಾರದು ಎಂದುಕೊಂಡೆ"- ಇದು ತಾನು ನಟನಾದ ಬಗ್ಗೆ ಶಿವಣ್ಣ ಪ್ರಾಮಾಣಿಕವಾಗಿ ಹೇಳಿಕೊಂಡಿದ್ದು.

"ಕಾಡುಕಳ್ಳ ವೀರಪ್ಪನ್‌ಗೆ ಹಣ ನೀಡಿದ್ದು ನಿಜ" - ಹೀಗಂತ ಹೇಳಿದವರು ಬೇರೆ ಯಾರೂ ಅಲ್ಲ; ವೀರಪ್ಪನ್ ಅಪಹರಿಸಿದ್ದ ವರನಟ ಡಾ. ರಾಜ್‌ಕುಮಾರ್‌ವರ ಪುತ್ರ ಶಿವರಾಜ್‌ಕುಮಾರ್.

ಮೊನ್ನೆ ಸಿನಿಮಾ ಪತ್ರಕರ್ತರು ಆಯೋಜಿಸಿದ್ದ 'ಅಮೃತ ಮಾತು ಮಂಥನ' ಕಾರ್ಯಕ್ರಮದಲ್ಲಿ ಈ ವಿಷಯವನ್ನು ಶಿವರಾಜ್‌ಕುಮಾರ್ ಬಹಿರಂಗ ಪಡಿಸಿದರು. "ರಾಜ್‌ಕುಮಾರ್ ಅವರನ್ನು ಬಿಡುಗಡೆಗೊಳಿಸಲು ವೀರಪ್ಪನ್‌ಗೆ ಹಣ ನೀಡಲಾಗಿತ್ತೆ?" ಎಂಬ ಪತ್ರಕರ್ತರ ಪ್ರಶ್ನೆಗೆ ಶಿವರಾಜ್ ಉತ್ತರಿಸದೆ ನುಣುಚಿಕೊಳ್ಳಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಆ ಪ್ರಶ್ನೆಯನ್ನು ಆಲಿಸಿದ ನಂತರ ಅಷ್ಟೇ ಕೂಲಾಗಿ "ಹಣ ಕೊಟ್ಟಿದ್ದು ನಿಜ" ಎಂದರು. ಅಷ್ಟೇ ಅಲ್ಲ "ಈ ವಿಷಯ ಎಲ್ಲರಿಗೂ ಗೊತ್ತಿರುವಂತದ್ದೇ... ನಿಮಗೆಲ್ಲಾ ಗೊತ್ತಿಲ್ವೆ? ಪ್ರಪಂಚದಲ್ಲಿ ಯಾರಾದರೂ ಯಾರನ್ನೇ ಆಗಲಿ ಒತ್ತೆಯಾಳು ಮಾಡುವುದು ಹಣಕೋಸ್ಕರ ತಾನೇ? ಈಗ ಆ ವಿಷಯ ಬಿಟ್ಟುಬಿಡಿ... ಅಪ್ಪಾಜಿನೂ ಇಲ್ಲ; ವೀರಪ್ಪನೂ ಕೂಡಾ ಇಲ್ಲ..." ಎಂದು ಭಾವುಕರಾಗಿ ಹೇಳಿದರು ಶಿವಣ್ಣ.

ಹಾಗೆ ನೋಡಿದರೆ ಅಂದಿನ ಕಾರ್ಯಕ್ರಮದಲ್ಲಿ ತನ್ನ ಬಾಲ್ಯ, ಶಿಕ್ಷಣ, ವೃತ್ತಿ ಮತ್ತು ಖಾಸಗಿ ಬದುಕಿನ ಬಗ್ಗೆಯೆಲ್ಲಾ ಅವರು ನೇರವಾಗಿ ನುಡಿದು ತನ್ನತನವನ್ನು ಪ್ರದರ್ಶಿಸಿದರು.

"ನಾನು ಕಲಿತದ್ದು ಮದ್ರಾಸ್‌ನಲ್ಲಿ. ಅಲ್ಲಿಯ ನನ್ನ ಗೆಳೆಯರೆಲ್ಲ ತಮಿಳರು ಮತ್ತು ಬೇರೆ ಭಾಷೆಯವರೇ ಆಗಿದ್ದರು. ಹೀಗಾಗಿ ಕನ್ನಡ ಮಾತನಾಡುವುದು ಮನೆಯಲ್ಲಷ್ಟೇ ಸೀಮಿತವಾಗಿತ್ತು. ಆದ್ದರಿಂದ ಆರಂಭದ ದಿನಗಳಲ್ಲಿ ನನ್ನ ಕನ್ನಡ ಉಚ್ಚಾರಣೆಯಲ್ಲಿ ಸಾಕಷ್ಟು ಅಪಭ್ರಂಶವಿತ್ತು. ಅದನ್ನು ನಾನು ಒಪ್ಪುತ್ತೇನೆ. ಮದುವೆಯಾದ ನಂತರ ನನ್ನ ಪತ್ನಿ ಗೀತಾ ಸ್ಲೇಟು ಹಿಡಿದು ನನಗೆ ಅಆಇಈ..ಯಿಂದ ಕನ್ನಡ ಕಲಿಸಿ ನನ್ನನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದ್ದಾಳೆ. ಈಗ ಕನ್ನಡ ಸ್ವಲ್ಪಮಟ್ಟಿಗೆ ಪರವಾಗಿಲ್ಲ ಅಂತೆನಿಸುತ್ತಿದೆ" ಎಂದು ಶಿವರಾಜ್ ಯಾವುದೇ ಅಳುಕಿಲ್ಲದೆ ಒಪ್ಪಿಕೊಂಡರು.

"ನಾನು ಓದು ಮುಗಿಸಿದ ನಂತರ ಫಾರ್ಮಸಿಗೆ ಸಂಬಂಧಪಟ್ಟಂತೆ ಏನಾದರೂ ವ್ಯಾಪಾರ ಶುರು ಮಾಡಬೇಕೆಂದುಕೊಂಡಿದ್ದೆ. ಆ ಸಂದರ್ಭದಲ್ಲಿ ಮಲೆಯಾಳಂ ನಿರ್ದೇಶಕರೊಬ್ಬರು ನನ್ನನ್ನು ನಟಿಸುತ್ತೀಯಾ ಎಂದು ಕೇಳಿದರು. ಅಂದು ಮನೆಗೆ ಹೋಗಿ ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಂಡೆ. ಆಗ ನನ್ನ ಸ್ನೇಹಿತರೆಲ್ಲಾ 'ಈ ಅವಕಾಶ ಬಿಡಬೇಡ. ಸಿನಿಮಾದಲ್ಲಿ ನಟಿಸಿದರೆ ಒಳ್ಳೊಳ್ಳೆಯ ಸುಂದರಿಯರನ್ನು ತಬ್ಬಿಕೊಳ್ಳಬಹುದು' ಎಂದು ಹುರಿದುಂಬಿಸಿದರು. ಆದರೆ ಅಪ್ಪಾಜಿ ಮಾತ್ರ 'ಸಿನಿಮಾದಲ್ಲಿ ನಟಿಸಲು ಇಷ್ಟವಿದ್ದರೆ ಸಾಕಷ್ಟು ತಯಾರಿ ನಡೆಸಬೇಕು' ಎಂದು ಹೇಳಿದರು. ಆದ್ದರಿಂದ ಫಿಲ್ಮ್ ಇನ್‌ಸ್ಟಿಟ್ಯೂಟ್‌ಗೆ ಸೇರಿಕೊಂಡೆ.

ನಾನು ಬಾಲ್ಯದಿಂದಲೂ ಕಮಲಹಾಸನ್ ಅವರ ಕಟ್ಟಾಭಿಮಾನಿ. ಕನ್ನಡಿ ಮುಂದೆ ನಿಂತು ಕಮಲ್ ತರಹದ ಮೈಕಟ್ಟು, ಮುಖಚರ್ಯೆ ನನಗಿದೆಯೇ? ಎಂದು ನೋಡಿಕೊಳ್ಳುತ್ತಿದ್ದೆ. ಕಮಲ್ ಮತ್ತು ಅಮಿತಾಭ್ ಬಚ್ಚನ್ ಚಿತ್ರಗಳೆಂದರೆ ...

"ಕಾಲೇಜಿನಲ್ಲಿ ಯಾವುದೋ ರಾಜಕೀಯಕ್ಕೆ ಒಳಗಾಗಿ ನಾನು ಕ್ರಿಕೆಟ್ ತಂಡದಿಂದ ಡ್ರಾಪ್ ಆಗಿದ್ದೆ. ಆ ಸಂದರ್ಭದಲ್ಲಿ ಅಪ್ಪಾಜಿ ವಿದೇಶದಿಂದ ತಂದು ಕೊಟ್ಟ ನಾಲ್ಕೈದು ಬ್ಯಾಟ್‌ಗಳನ್ನು ಪುಡಿಪುಡಿ ಮಾಡಿದ್ದೆ. ಕ್ರಿಕೆಟರ್ ಆಗುವ ಬದಲು ಆಕಸ್ಮಿಕವಾಗಿ ಆಕ್ಟರ್ ಆದೆ. ಈಗ ನೂರರ ಗಡಿಯನ್ನು ತಲುಪಿದ್ದೇನೆ. ಮುಂದೆ ಏನು ಅಂತ ಗೊತ್ತಿಲ್ಲ... ಯಾವತ್ತೂ ನಾನು ನನ್ನ ಜೀವನವನ್ನು ಪ್ಲಾನ್ ಮಾಡಿದವನೇ ಅಲ್ಲ" - ಭೂತ-ಭವಿಷ್ಯದ ಬಗ್ಗೆ ಶಿವು ಆಡಿದ ಮಾತು.

"ನನ್ನ ಫಾದರ್-ಇನ್-ಲಾ ಬಂಗಾರಪ್ಪನವರು ಮತ್ತು ನನ್ನ ನಡುವಿನ ಸಂಬಂಧ ಫ್ರೆಂಡ್ಸ್ ತರಹ. ಅವರು ಯಾವತ್ತು ಚುನಾವಣೆಗಾಗಿ ಪ್ರಚಾರ ಮಾಡಲು ನನ್ನನ್ನು ಕರೆದಿಲ್ಲ. ಯಾವ ಕೆಲಸಕ್ಕಾಗಿ ನನ್ನನ್ನು ಕರೆಯಬೇಕು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಹೀಗಾಗಿ ಚುನಾವಣೆಯಲ್ಲಿ ನನ್ನ ಮಾವನವರ ಪರ ನಾನು ಪ್ರಚಾರ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಷ್ಟೇ ಅಲ್ಲ, ನಮ್ಮ ಕುಟುಂಬದಲ್ಲಿ ನಾವು ಯಾವತ್ತೂ ಯಾರಿಗೂ ಚುನಾವಣಾ ಪ್ರಚಾರ ಮಾಡಿದವರಲ್ಲ" - ಬಂಗಾರಪ್ಪನವರ ಪರ ಚುನಾವಣಾ ಪ್ರಚಾರ ಮಾಡುತ್ತೀರಾ ಎಂಬ ಪ್ರಶ್ನೆಗೆ ಶಿವಣ್ಣ ನೀಡಿದ ಉತ್ತರವಿದು.


"ಅಪ್ಪಾಜಿ ನಿಧನ ಹೊಂದಿದ ನಂತರ ಹಿರಿಯ ನಟರೆಂದರೆ ವಿಷ್ಣುವರ್ಧನ್ ಅವರು. ವಿಷ್ಣು ಸಾರ್, ಅಂಬರೀಶ್, ಅನಂತ್‌ನಾಗ್, ರವಿಚಂದ್ರನ್... ಇವರನ್ನೆಲ್ಲಾ ನಾವು ಅಪ್ಪಾಜಿಯಷ್ಟೇ ಗೌರವದಿಂದ ನೋಡುತ್ತೇವೆ. ವಿಷ್ಣು ಸಾರ್ ಜತೆ ನಟಿಸಲು ನನಗೆ ಯಾವುದೇ ಅಂಜಿಕೆಯಿಲ್ಲ, ಆ ಕ್ಷಣಕ್ಕಾಗಿ ನಾನು ಎದುರು ನೋಡುತ್ತಿದ್ದೇನೆ. ವಾಸ್ತವವಾಗಿ ಒಂದು ಕಥೆ ಎರಡು ಮೂರು ಬಾರಿ ಚರ್ಚೆಯಾಗಿದೆ. ಚಿತ್ರದ ಟೈಟಲ್ ಕಾರಣಕ್ಕೆ ಮುಂದೂಡಲ್ಪಟ್ಟದ್ದು ಇದೆ. ವಿಷ್ಣು ಸಾರ್ ಅವರ ಹೆಸರಿನಲ್ಲೇ ಈ ಚಿತ್ರದ ಟೈಟಲ್ ಇರಬೇಕು ಎಂದು ನಾನು ಆಗ್ರಹಪಡಿಸಿದ್ದೇನೆ. ಖಂಡಿತವಾಗಿಯೂ ನಾವಿಬ್ಬರೂ ಒಟ್ಟಿಗೆ ನಟಿಸುವ ಚಿತ್ರ ಆದಷ್ಟು ಬೇಗ ಬರಲಿದೆ. ಈ ವಿಷಯದಲ್ಲಿ ಮೂರನೆಯ ವ್ಯಕ್ತಿ ಮೂಗು ತೂರಿಸಲು ನಾನು ಅವಕಾಶ ಮಾಡಿಕೊಡುವುದಿಲ್ಲ, ಇದು ಖಂಡಿತ" ಎಂದರು ಶಿವು.

"ಕುಮಾರರಾಮ ಚಿತ್ರ ಸೋಲಲು ಅನೇಕ ಕಾರಣಗಳಿವೆ. ಅದನ್ನೀಗ ಹೇಳಿ ಯಾರನ್ನೂ ನೋಯಿಸಲು ನಾನು ತಯಾರಿಲ್ಲ. ಆದರೆ ನನಗೂ ಪೌರಾಣಿಕ ಚಿತ್ರ ಮಾಡಲು ಬರುತ್ತದೆ ಎಂಬುದನ್ನು ಸವಾಲಾಗಿ ಸ್ವೀಕರಿಸಿದ್ದೇನೆ. ನಾನು ಮತ್ತೊಂದು ಪೌರಾಣಿಕ ಚಿತ್ರದಲ್ಲಿ ನಟಿಸಿ ನನ್ನ ಪ್ರತಿಭೆಯನ್ನು ಖಂಡಿತ ತೋರಿ ಸಲಿದ್ದೇನೆ." - 'ಕುಮಾರರಾಮ' ಚಿತ್ರದ ಬಗ್ಗೆ ಪ್ರಶ್ನಿಸಿದಾಗ ನೀಡಿದ ಉತ್ತರ.

"ನನ್ನ ಒಂದೇ ಒಂದು ಆಶಯವೆಂದರೆ ಯಾರಿಗೂ ನೋವು ನೀಡಬೇಡ, ಮತ್ತು ಈ ಯಶಸ್ಸು, ಜನಪ್ರಿಯತೆ ನನ್ನ ತಲೆಗೇರದಂತೆ ನೋಡಿಕೋ ದೇವರೇ... ಇದನ್ನಷ್ಟೇ ನಾನು ದೇವರಲ್ಲಿ ನಿತ್ಯ ಪ್ರಾರ್ಥಿಸುವುದು."

ಹೀಗೆ ಶಿವರಾಜ್‌ಕುಮಾರ್ ಮಾತು-ಮಂಥನ ಕಾರ್ಯಕ್ರಮದಲ್ಲಿ ರಾಜಕೀಯ, ಸಿನಿಮಾ, ಕ್ರಿಕೆಟ್, ದೇವರು... ಎಲ್ಲದರ ಬಗ್ಗೆ ನೇರ, ದಿಟ್ಟ, ಸ್ಪಷ್ಟ ನಿಲುವುಗಳನ್ನು ಪ್ರದರ್ಶಿಸಿದರು.

● ಶೆಣೈ



ಕಿರುತೆರೆಯವರಿಗೂ ಅವಾರ್ಡು

ಮೊನ್ನೆ ಮೊನ್ನೆಯಷ್ಟೇ ಚಿತ್ರರಂಗದವರು 75ನೇ ವರ್ಷದ ಅಮೃತ ಮಹೋತ್ಸವವನ್ನು ಆಚರಿಸಿ ಸುಸ್ತು ಹೊಡೆದಿರುವ ಬೆನ್ನಿಗೇ ಈಗ ಕಿರುತೆರೆಯವರು ತಮ್ಮ 25ನೇ ವರ್ಷದ ಆಚರಣೆಗೆ ಮುಂದಾಗಿದ್ದಾರೆ. ಇದರ ನೆನಪಿಗೆ ಆಕ್ಟ್ ಮತ್ತು ಕೇಬಲ್ ವಾರ್ತೆ ಸಂಸ್ಥೆಯ ಸಹಯೋಗದೊಂದಿಗೆ ಒಂದು ಪ್ರಶಸ್ತಿ ವಿತರಣಾ ಸಮಾರಂಭವನ್ನು ನಡೆಸಿ ಕಿರುತೆರೆಯಲ್ಲಿ ಮೌಲಿಕವಾದ ಸೇವೆಯನ್ನು ಸಲ್ಲಿಸಿರುವ ನಟ, ನಟಿ, ನಿರೂಪಕರು ಮತ್ತು ಎಲ್ಲ ಸ್ತರದ ತಂತ್ರಜ್ಞರಿಗೆ ಅವಾರ್ಡುಗಳನ್ನು ನೀಡುತ್ತಿದ್ದಾರೆ.

ಈಗಾಗಲೇ ಕಿರುತೆರೆಯ ನಟಿ ಕಂ ನಿರೂಪಕಿ ಅಪರ್ಣಾ, ನಟ ನಿರ್ದೇಶಕ ಸಿಹಿಕಹಿ ಚಂದ್ರು, ರವಿಕಿರಣ್ ಮುಂತಾದವರಿಗೆ ಜೀವಮಾನದ ಸಾಧನೆಯ ಶ್ರೇಷ್ಠ ಪ್ರಶಸ್ತಿ ಘೋಷಿಸಲಾಗಿದೆ. ಇನ್ನುಳಿದ ಪ್ರಶಸ್ತಿಗಳ ವಿವರ ಸಮಾರಂಭದ ದಿನವೇ ಪ್ರಕಟಗೊಳ್ಳಲಿದೆ. ಒಟ್ಟಿನಲ್ಲಿ ಇದೇ ಭಾನುವಾರ ಅರಮನೆ ಆವರಣದಲ್ಲಿ ವ್ಯವಸ್ಥಿತವಾಗಿ ನಡೆಯಲಿರುವ ಈ ಸಮಾರಂಭಕ್ಕೆ ಇಡೀ ಕಿರುತೆರೆ ಉದ್ಯಮ ಸರ್ವಸನ್ನದ್ಧವಾಗಿ ನಿಂತಿದೆ; ಚಿತ್ರರಂಗದ ಎಡವಟ್ಟುಗಳಿಗೆ ಸೆಡ್ಡು ಹೊಡೆಯುವಂತೆ!

ರಾಖಿ ಸಾವಂತ್‌ಳ ಸ್ವಯಂವರ



ಇತ್ತೀಚೆಗಷ್ಟೇ 'ಗೆಳೆಯ' ಚಿತ್ರದಲ್ಲಿ 'ನನ್ನ ಸ್ಟೈಲು ಬೇರೇನೇ ನನ್ನ ದಿಲ್ಲು ಬೇರೇನೆ' ಎಂಬ ಐಟಂ ಸಾಂಗ್‌ನಲ್ಲಿ ಕುಣಿದು ಪಡ್ಡೆಗಳನ್ನು ಪಾಗಲ್‌ಮಾಡಿ ಹೋದ ಬಾಲಿವುಡ್‌ನ ರಾಖಿಸಾವಂತ್ ಈಗ ಯಾರೂ ಮಾಡದ ಸಾಹಸಕ್ಕೆ ಕೈಹಾಕಿದ್ದಾಳೆ.

'ನಕ್ಕಳಾ ರಾಜಕುಮಾರಿ' ಕಥೆಯಂತೆ ಈಕೆಯೂ ಒಂದು ವಿಚಿತ್ರವಾದ ಸ್ವಯಂವರ ನಡೆಸುತ್ತಿದ್ದಾಳೆ.

ಎನ್‌ಡಿ. ಟೀವಿಯಲ್ಲಿ ಪ್ರಸಾರವಾಗುವ ರಿಯಾಲಿಟಿ ಶೋವೊಂದರ ಮೂಲಕ ಆಕೆ ಸ್ವಯಂವರ ನಡೆಸುತ್ತಾಳಂತೆ. ಅದರಲ್ಲಿ ಭಾಗವಹಿಸುವ ಹದಿನೈದು ಜನ ಯಂಗ್ ಅಂಡ್ ಎನರ್ಜಿಟಿಕ್ ಹುಡುಗರಲ್ಲಿ ಯಾರು ಅದ್ಭುತ ಪರ್‌ಫಾರ್ಮೆನ್ಸ್ ನೀಡಿ ಆಕೆಯನ್ನು ಒಲಿಸಿಕೊಳ್ಳುತ್ತಾರೋ ಅವರನ್ನು ಆಕೆ ಮದುವೆಯಾಗುತ್ತಾಳಂತೆ.

ಮೊನ್ನೆ ಮೊನ್ನೆಯಷ್ಟೇ ಕ್ಯಾನ್ಸರ್‌ಗೆ ಬಲಿಯಾದ ಹಾಲಿವುಡ್ ನಟಿ ಜೇಡ್ ಗೂಡಿ ತನ್ನ ಸಾವನ್ನೂ ರಿಯಾಲಿಟಿ ಶೋಗಳಿಗೆ ಮಾರಾಟ ಮಾಡಿಕೊಂಡಿದ್ದಳು. ಈಗ ರಾಖಿ ಸಾವಂತ್ ತನ್ನ ವೈವಾಹಿಕ ಬದುಕನ್ನೇ ಬಿಕರಿಗಿಟ್ಟಿದ್ದಾಳೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...